ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 26 ಮಂಗಳವಾರ 2022

ಸಂಪುಟ: 43 | ಸಂಚಿಕೆ: 101 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

15ನೇ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಪ್ರತಿಜ್ಞಾ ವಿಧಿ ಸ್ವೀಕಾರ

ನವದೆಹಲಿ: ದೇಶದ 15ನೇ ರಾಷ್ಟ್ರಪತಿಯಾಗಿ ಒಡಿಶಾ ಮೂಲದ ದ್ರೌಪದಿ ಮುರ್ಮು ಅವರು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಸರಳ ಸಾಂಪ್ರದಾಯಿಕ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ನೂತನ ರಾಷ್ಟ್ರಪತಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. 2007ರಲ್ಲಿ ರಾಷ್ಟ್ರಪತಿಯಾಗಿದ್ದ ಪ್ರತಿಭಾ ಪಾಟೀಲ್ ನಂತರ ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆ ಏರಿದ ಎರಡನೇ ಮಹಿಳೆ ಹಾಗೂ ಮೊದಲ ಬುಡಕಟ್ಟು ಜನಾಂಗದ ಮಹಿಳೆ ದ್ರೌಪದಿ ಮುರ್ಮು ಆಗಿದ್ದಾರೆ. ದೇಶದ ಉನ್ನತ ಹುದ್ದೆಯನ್ನು ಅಲಂಕರಿಸಿದ ಅತ್ಯಂತ ಕಿರಿಯ ವಯಸ್ಸಿನವರು ಎನಿಸಿಕೊಂಡಿದ್ದಾರೆ. ಅಂದರೆ ಸ್ವಾತಂತ್ರ್ಯ ನಂತರ ಜನಿಸಿ, ದೇಶದ ಅತ್ಯುನ್ನತ ಸ್ಥಾನ ಅಲಂಕರಿಸಿದ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಉಪ ರಾಷ್ಟ್ರಪತಿ ರಾಜ್ಯಸಭೆಯ ಅಧ್ಯಕ್ಷ ಎಂ.ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಭಾರತದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮತ್ತು ಮಂತ್ರಿಮಂಡಲದ ಸದಸ್ಯರು, ರಾಜ್ಯಪಾಲರು, ಮುಖ್ಯಮಂತ್ರಿಗಳು, ರಾಜತಾಂತ್ರಿಕ ನಿಯೋಗಗಳು, ಸಂಸತ್ತಿನ ಸದಸ್ಯರು ಮತ್ತು ಭಾರತ ಸರ್ಕಾರದ ಪ್ರಧಾನ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಇಂದು ಸಮಾರಂಭದಲ್ಲಿ ಭಾಗವಹಿಸಿದ್ದರು.



ರಾಷ್ಟ್ರಪತಿಯಾಗಿ ನನ್ನ ಆಯ್ಕೆ ಭಾರತದಲ್ಲಿ ಬಡವರ ಕನಸುಗಳು ಸಾಕಾರಗೊಳಿಸುತ್ತವೆ ಎಂಬುದನ್ನು ಸಾಬೀತುಪಡಿಸುತ್ತದೆ

ನವದೆಹಲಿ: ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಗೆ ತಾನು ಆಯ್ಕೆಯಾಗಿರುವುದು ತನ್ನ ವೈಯಕ್ತಿಕ ಸಾಧನೆಯಲ್ಲ ಬದಲಾಗಿ ಭಾರತದ ಪ್ರತಿಯೊಬ್ಬ ಬಡವರ ಸಾಧನೆ ಎಂದು ನೂತನ ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ಹೇಳಿದ್ದಾರೆ. ಅಂದರೆ ಬಡವ ಕನಸು ಕಾಣುವುದು ಮಾತ್ರವಲ್ಲ, ಕನಸು, ಆಶೋತ್ತರಗಳನ್ನು ಈಡೇರಿಸಿಕೊಳ್ಳಬಹುದು ಎನ್ನುವ ಅರ್ಥದಲ್ಲಿ ನೂತನ ರಾಷ್ಟ್ರಪತಿ ದ್ರೌಪದಿ ಮುರ್ಮು ಮಾತನಾಡಿದ್ದಾರೆ.

ಭಾರತದ 15 ನೇ ರಾಷ್ಟ್ರಪತಿಯಾಗಿ ಇಂದು ದೆಹಲಿಯ ಸಂಸತ್ತು ಭವನದಲ್ಲಿ ನಡೆದ ಸರಳ ಸಾಂಪ್ರದಾಯಿಕ ಸಮಾರಂಭದಲ್ಲಿ ಮಾತನಾಡಿದ 64 ವರ್ಷದ ಮುರ್ಮು ಅವರು, ದೇಶದ ನಿರ್ಗತಿಕರು, ಬಡವರು, ವಂಚಿತರು, ದೀನ ದಲಿತರು ಮತ್ತು ಬುಡಕಟ್ಟು ಜನರು ತಮ್ಮ ಪ್ರತಿಬಿಂಬವನ್ನು ನನ್ನಲ್ಲಿ ನೋಡಬಹುದು, ಇದುವೇ ನನಗೆ ಅತೀ ದೊಡ್ಡ ಸಂತೃಪ್ತಿಯ ▶ 8ನೇ ಪುಟಕ್ಕೆ

ಕರ್ನಾಟಕದಲ್ಲಿ ಮತ್ತೆ ಅಧಿಕಾರ ಹಿಡಿಯಲು ಸಿಎಂ ಬೊಮ್ಮಾಯಿಗೆ

ಪ್ರಧಾನಿ ಮೋದಿ ಟಿಪ್ಸ್

- ●ಮುಖ್ಯಮಂತ್ರಿಗಳಿಂದ ಸಮಗ್ರ ಮಾಹಿತಿ ಪಡೆದ ನಂತರ ಹಲವು ಸಲಹೆ ನೀಡಿರುವ ಪ್ರಧಾನಿ
- ●ಮೊದಲು ಕಾಂಗ್ರೆಸ್ ಮಣಿಸುವ ತಂತ್ರ ರೂಪಿಸಿ, ತಕ್ಷಣದಿಂದಲೇ ಸರ್ಕಾರದ ಜನಪ್ರಿಯ ಯೋಜನೆ ಜಾರಿಗೆ ಸೂಚನೆ



(ಸಂಗ್ರಹ ಚಿತ್ರ)

"ಅಮಿತ್ ಷಾ ಅವರು ಕರ್ನಾಟಕದಲ್ಲಿ ಎರಡು ಮೂರು ವಾರಗಳ ಕಾಲ ಬಿಡಾರ ಹೂಡಿ, ನಿಮ್ಮಲ್ಲಿನ ಪರಿಸ್ಥಿತಿ ಅವಲೋಕಿಸಿ, ಅಭ್ಯರ್ಥಿಗಳ ಆಯ್ಕೆ ಸೇರಿದಂತೆ ಎಲ್ಲಾ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಈಗಾಗಲೇ ಬಂದಿರುವ ಸಮೀಕ್ಷೆಗಳನ್ನು ಆಧಾರವಾಗಿಟ್ಟುಕೊಂಡು ನೀವು ಚುನಾವಣಾ ಕೆಲಸ ಆರಂಭಿಸಿ ಎಂದು ಪ್ರಧಾನಿಯವರು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ. ವಿರೋಧಿ ಕಾಂಗ್ರೆಸ್ ಪಕ್ಷ ಮತ್ತೆ ರಾಜ್ಯದಲ್ಲಿ ತಲೆ ಎತ್ತದಂತೆ ನೋಡಿಕೊಳ್ಳಬೇಕು. ಇದಕ್ಕೆ ತಕ್ಷಣದಿಂದಲೇ ಕಾರ್ಯಕ್ರಮ ರೂಪಿಸಿ, ತಾವು ಮತದಾರರನ್ನು ಸೆಳೆಯಲು ಏನೆಲ್ಲ ಮಾಡಬೇಕು, ಅದನ್ನು ಮಾಡುವ ಭರವಸೆಯಿತ್ತಿದ್ದಾರೆ.

ಬೆಂಗಳೂರು, ಜು. 25 (ಕೆಎಂಶಿ)–ಕರ್ನಾಟಕದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಬಹಳ ಶ್ರಮ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಿವಿಮಾತು ಹೇಳಿದ್ದಾರೆ.

ದೆಹಲಿಯಲ್ಲಿಂದು ಬಿಜೆಪಿ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳ ಜೊತೆ ಪಕ್ಷ ಸಂಘಟನೆ, ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮ, ಸರ್ಕಾರ ಮತ್ತು ಪಕ್ಷದಲ್ಲಿನ ಸಾಮರಸ್ಯಕ್ಕೆ ಸಂಬಂಧಿಸಿದಂತೆ ಚರ್ಚೆ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ದಕ್ಷಿಣ ಭಾರತದಲ್ಲಿ ಸದ್ಯಕ್ಕೆ ನಮಗಿರುವುದು ಕರ್ನಾಟಕ ಮಾತ್ರ. ಮುಂದಿನ ದಿನಗಳಲ್ಲಿ ಆ ಭಾಗದಲ್ಲಿ ನಾವು ವಿಸ್ತರಣೆ ಮಾಡಬೇಕಾದರೆ ನಾವು ಮತ್ತೆ ಅಧಿಕಾರವನ್ನು ಹಿಡಿಯಲೇಬೇಕು.

ಕನಾಟಕ ವಿಧಾನಸಭೆಗೆ ಇನ್ನು ಕೇವಲ 9–10 ತಿಂಗಳು ಮಾತ್ರ ಬಾಕಿ ಇದೆ. ಈ ಸಮಯದಲ್ಲಿ ಗೆಲುವಿನ ಗುರಿ ಮುಟ್ಟಲು ಏನೆಲ್ಲಾ ಮಾಡಬೇಕೆಂಬುದರ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ ಒಂದಷ್ಟು ಸಲಹೆಗಳನ್ನು ಮುಖ್ಯಮಂತ್ರಿಗಳಿಗೆ ಪ್ರಧಾನಿಯವರು ನೀಡಿದ್ದಾರೆ.

ಗೆಲುವಿನ ಗುರಿ ಮುಟ್ಟಲು ಸರ್ಕಾರದ ಕಾರ್ಯಕ್ರಮಗಳೇನು ಎಂದು ಪ್ರಶ್ನಿಸಿದ್ದಾರೆ. ನಿಮ್ಮಿಂದ ಯಾವುದಾದರೂ ಅಭಿವೃದ್ಧಿ ಕಾರ್ಯಗಳ ಚಾಲನೆಗೆ ನಿಶಾನೆ ದೊರೆತಿಲ್ಲವೇ ಎಂದೂ ಕೇಳಿದ್ದಾರೆ. ಇದನ್ನು ಸದುಪಯೋಗಪಡಿಸಿಕೊಂಡ ಮುಖ್ಯಮಂತ್ರಿಗಳು ಕೆಲವು ನೀರಾವರಿ ಯೋಜನೆ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮುಖ ವಿಷಯ ಪ್ರಸ್ತಾಪಿಸಿರುವುದಲ್ಲದೆ, ಇವುಗಳಿಗೆ ತಕ್ಷಣ ಕೇಂದ್ರ ಅನುಮತಿ ನೀಡಿದರೆ ▶ 8ನೇ ಪುಟಕ್ಕೆ

ರಘು ಕೌಟಿಲ್ಯ ಮೈಲ್ಯಾಕ್ ಅಧ್ಯಕ್ಷ

ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ಮಿರ್ಲೆ ಶ್ರೀನಿವಾಸಗೌಡ
ಮೃಗಾಲಯ ಪ್ರಾಧಿಕಾರಕ್ಕೆ ಎಂ.ಶಿವಕುಮಾರ್
ಕಾಡಾಗೆ ಜಿ.ನಿಜಗುಣರಾಜು ನೇಮಕ



ರಘು ಕೌಟಿಲ್ಯ | ಮಿರ್ಲೆ ಶ್ರೀನಿವಾಸಗೌಡ | ಎಂ.ಶಿವಕುಮಾರ್ | ಜಿ.ನಿಜಗುಣರಾಜು

ಮೈಸೂರು, ಜು. 25(ಆರ್‌ಕೆ)– ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿಯಮಿತದ (ಮೈಲ್ಯಾಕ್) ಅಧ್ಯಕ್ಷರನ್ನಾಗಿ ಹಿರಿಯ ಬಿಜೆಪಿ ಮುಖಂಡ ರಘು ಕೌಟಿಲ್ಯ ಅವರನ್ನು ನೇಮಿಸಲಾಗಿದೆ.

ಆರ್.ರಘು ಈ ಹಿಂದೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದು, ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ರಾಜೀನಾಮೆ ಸಲ್ಲಿಸಿದ್ದರು. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಮಾಜಿ ಕಾರ್ಪೋರೇಟರ್ ಎಂ.ಶಿವಕುಮಾರ್, ಮೈಸೂರಿನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಕೆ.ಆರ್. ನಗರ ತಾಲೂಕು ಎಂ.ಕೆ.ಶ್ರೀನಿವಾಸ್ (ಮಿರ್ಲೆ ಶ್ರೀನಿವಾಸಗೌಡ) ಹಾಗೂ ಕಾವೇರಿ ಅಚ್ಚುಕಟ್ಟು ಮತ್ತು ಅಭಿವೃದ್ಧಿ ಪ್ರಾಧಿಕಾರ (ಕಾಡಾ)ದ ಅಧ್ಯಕ್ಷರಾಗಿ ಚಾಮರಾಜನಗರದ ಜಿ. ನಿಜಗುಣರಾಜು, ಜೀವವೈವಿಧ್ಯ ಮಂಡಳಿ ಅಧ್ಯಕ್ಷರಾಗಿ ಕೊಡಗಿನ ರವಿಕಾಳಪ್ಪ ಅವರನ್ನು ನೇಮಕ ▶ 8ನೇ ಪುಟಕ್ಕೆ

ಅಲ್‌ಖೈದಾದೊಂದಿಗೆ ನಿಕಟ ಸಂಪರ್ಕ

ಬೆಂಗಳೂರಲ್ಲಿ ಮತ್ತೊಬ್ಬ ಶಂಕಿತ ಉಗ್ರನ ಬಂಧನ

ಫುಡ್ ಡೆಲಿವರಿ ಬಾಯ್ ಆಗಿ ಕೆಲಸ

ಬೆಂಗಳೂರು, ಜು.25– ರಾಜ್ಯ ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ), ಗುಪ್ತಚರ ವಿಭಾಗ ಹಾಗೂ ಸಿಸಿಬಿ ಪೊಲೀಸರ ವಿಶೇಷ ತಂಡ ಜಂಟಿ ಕಾರ್ಯಾಚರಣೆ ನಡೆಸಿ ಬೆಂಗಳೂರಿನ ತಿಲಕ್‌ನಗರದಲ್ಲಿ ವಾಸ್ತವ್ಯ ಹೂಡಿದ್ದ ಅಲ್‌ಖೈದಾ ಉಗ್ರ ಸಂಘಟನೆಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಯುವಕನೋರ್ವನನ್ನು ಕಳೆದ (ಭಾನುವಾರ) ರಾತ್ರಿ ಬಂಧಿಸಿದೆ.



ಹುಸೇನ್

ಅಸ್ಸಾಂ ಮೂಲದ ಅಖ್ತರ್ ಹುಸೇನ್ (23) ಬಂಧಿತನಾಗಿದ್ದು, ಈತನಿಂದ ದೊರೆತ ಮಾಹಿತಿ ಮೇರೆಗೆ ತಮಿಳುನಾಡಿನಲ್ಲಿ ಜುಬಾ ಎಂಬಾತನ್ನು ಕರ್ನಾಟಕ ಪೊಲೀಸರು ಇಂದು (ಸೋಮವಾರ) ಬಂಧಿಸಿದ್ದು, ಬೆಂಗಳೂರಿಗೆ ಕರೆತರುತ್ತಿದ್ದಾರೆ ಕಳೆದ ತಿಂಗಳು ಪಶ್ಚಿಮ ಬಂಗಾಳ ಪೊಲೀಸರು ಬಂಧಿಸಿದ್ದ ಉಗ್ರವಾದಿ ಫೈಜಲ್ ಅಹಮ್ಮದ್‌ನೊಂದಿಗೆ ಅಖ್ತರ್ ಹುಸೇನ್ ನುಟು ಹೊಂದಿದ್ದ. ಮೋಸ್ಟ್ ವಾಂಟೆಡ್ ಟೆರರ್ ಆಗಿದ್ದ ಫೈಜಲ್ ಅಹಮ್ಮದ್ ಬಾಂಗ್ಲಾದೇಶದ ಮೂಲದವನಾಗಿದ್ದು, ▶ 8ನೇ ಪುಟಕ್ಕೆ

ಸಾಂಸ್ಕೃತಿಕ ನಗರಿ ಮೈಸೂರಲ್ಲೂ ಕಟ್ಟೆಚ್ಚರ

ಮೈಸೂರು, ಜು.25(ಆರ್‌ಕೆ)–ರಾಜ್ಯ ರಾಜಧಾನಿ ಸಿಲಿಕಾನ್ ಸಿಟಿ ಬೆಂಗಳೂರಲ್ಲಿ ಶಂಕಿತ ಉಗ್ರರ ಸಿಸಿಬಿ ವಶಕ್ಕೆ ಪಡೆದಿರುವ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಅಸ್ಸಾಂ ಮೂಲದ ಅಖ್ತರ್ ಹುಸೇನ್, ಲಷ್ಕರ್ ಸಂಘಟನೆಯ ನಾಲ್ವರನ್ನು ಬೆಂಗಳೂರು ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿರುವ ಹಿನ್ನೆಲೆಯಲ್ಲಿ ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಶಿವಮೊಗ್ಗ ಸೇರಿದಂತೆ ರಾಜ್ಯದ ಪ್ರಮುಖ ನಗರಗಳು, ಪ್ರವಾಸಿ ತಾಣಗಳು, ಅಣೆಕಟ್ಟೆ, ಧಾರ್ಮಿಕ ಕೇಂದ್ರಗಳಿಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಎಚ್ಚರ ವಹಿಸುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್‌ಸೂದ್ ಎಲ್ಲಾ ಪೊಲೀಸ್ ಘಟಕಗಳ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ. ಇಂದು ಬೆಳಗ್ಗೆ ಬೆಂಗಳೂರಲ್ಲಿ ಉಗ್ರರನ್ನು ಬಂಧಿಸುತ್ತಿದ್ದಂತೆಯೇ ಎಚ್ಚೆತ್ತ ಮೈಸೂರು ನಗರ ಪೊಲೀಸರು, ಸಿಟಿ ಸಿವಿಲ್ ಪೊಲೀಸ್, ಸಿಎಆರ್, ಕೆಎಸ್‌ಆರ್‌ಪಿ ಪೊಲೀಸ್ ▶ 6ನೇ ಪುಟಕ್ಕೆ

ಪಾಲಿಶ್ ಮಾಡಿ ಅಧಿಕ ಬೆಲೆಗೆ ಮಾರಾಟ ಮಾಡುವ ದಂಧೆ

ಮಂಡ್ಯ ಬಳಿ ಭಾರೀ ಪ್ರಮಾಣದ ಪಡಿತರ ಅಕ್ಕಿ ವಶ

ಐವರ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು





ಮಂಡ್ಯ, ಜು.25– ರೈಸ್‌ಮಿಲ್‌ವೊಂದರ ಮೇಲೆ ದಾಳಿ ನಡೆಸಿದ ಆಹಾರ ಇಲಾಖೆ ಅಧಿಕಾರಿಗಳು 16.60 ಲಕ್ಷ ರೂ. ಮೌಲ್ಯದ 635 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡು ರೈಸ್‌ಮಿಲ್‌ಗೆ ಬೀಗಮುದ್ರೆ ಹಾಕಿದ್ದಾರೆ.

ಸುದ್ದಿವಾಹಿನಿಯೊಂದು ನೀಡಿದ ಮಾಹಿತಿ ಮೇರೆಗೆ ಬೆಂಗಳೂರು– ಮೈಸೂರು ಹೆದ್ದಾರಿಗೆ ಹೊಂದಿಕೊಂಡುತಿರುವ ಮಂಡ್ಯ ತಾಲೂಕು ಹಲಸಗೆರೆ ಗ್ರಾಮದ ಬಾಲಾಜಿ ರೈಸ್‌ಮಿಲ್ ಮೇಲೆ ಜು.21 ರಂದು ಆಹಾರ ನಿರೀಕ್ಷಕಿ ಪವಿತ್ರಾ, ತಹಸೀಲ್ದಾರರು ಹಾಗೂ ಇತರೆ ಅಧಿಕಾರಿಗಳ ತಂಡ ದಾಳಿ ನಡೆಸಿತ್ತು. ಎರಡು ದಿನಗಳ ಕಾಲ ಸುದೀರ್ಘವಾಗಿ ಪರಿಶೀಲಿಸಿದ ನಂತರ ರೈಸ್‌ಮಿಲ್ ಮುಂಭಾಗ ನಿಂತಿದ್ದ ಲಾರಿ (ಟಿಎನ್ 29, ಬಿಸಿ 6113) ಮತ್ತು 635 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ. ರೈಸ್‌ಮಿಲ್ ನಡೆಸುತ್ತಿದ್ದ ಸುಮಂತ್ ಎಂಬಾತ ಸಂಪರ್ಕಕ್ಕೆ ಸಿಗದೆ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡಿದ್ದರಿಂದ ರೈಸ್‌ಮಿಲ್‌ಗೆ ಬೀಗಮುದ್ರೆ ಹಾಕಲಾಗಿದೆ. ಈ ರೈಸ್‌ಮಿಲ್‌ನಲ್ಲಿ ಪಡಿತರ ಅಕ್ಕಿಗೆ ಪಾಲಿಶ್ ಮಾಡಿ ವಿವಿಧ ಬ್ರಾಂಡ್‌ಗಳನ್ನು ನಮೂದಿಸಿ ಮಾರಾಟ ಮಾಡಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಿಲ್ ಮುಂಭಾಗ ನಿಂತಿದ್ದ ಲಾರಿಯಲ್ಲಿ ತಾಜ್‌ಮಹಲ್ ಬ್ರಾಂಡ್ ಚೀಲಗಳಲ್ಲಿ ತುಂಬಿದ್ದ 40 ಕ್ವಿಂಟಾಲ್ ಅಕ್ಕಿ ದೊರೆತರೆ, ರೈಸ್ ಮಿಲ್ ಒಳಗೆ ಅದೇ ಬ್ರಾಂಡ್ ಚೀಲಗಳಲ್ಲಿ ತುಂಬಿದ್ದ 65 ಕ್ವಿಂಟಾಲ್ ಅಕ್ಕಿ ದೊರೆತಿದೆ ಮಿಲ್‌ನ ಮತ್ತೊಂದು ಭಾಗದಲ್ಲಿ 43 ಕ್ವಿಂಟಾಲ್ ಅಕ್ಕಿ ದೊರೆತಿದೆ. ಪಡಿತರ ಅಕ್ಕಿಯನ್ನು ಬಚ್ಚಿಡಲು ರೈಸ್‌ಮಿಲ್‌ನಲ್ಲಿ ಮೂರು ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ಮೈಸೂರು ಪ್ರಸಿದ್ಧ ಪೀಪಲ್ಸ್ ಪಾರ್ಕ್‌ನಲ್ಲಿ ಬಯಲು ವೇಶ್ಯಾವಾಟಿಕೆ!

ರಾಶಿ ಬಿದ್ದಿವೆ ಬಳಸಿದ 'ನಿರೋಧ್'

ಪೊಲೀಸ್ ಇಲಾಖೆ, ನಗರಪಾಲಿಕೆ ಏನು ಮಾಡುತ್ತಿದೆ...?: ಸಾರ್ವಜನಿಕರ ಪ್ರಶ್ನೆ



ಮೈಸೂರು, ಜು.25(ಆರ್‌ಕೆಬಿ)– ಇಲ್ಲಿ ಬಳಸಿ ಬಿಸಾಡಿದ ರಾಶಿ ರಾಶಿ ಕಾಂಡೋಮ್‌ಗಳು, ಸಾವಿರಾರು ಖಾಲಿ ನಿರೋಧ್ ಬಾಕ್ಸ್‌ಗಳು. ಇಲ್ಲಿಗೆ ಭೇಟಿ ನೀಡಿದವರಿಗೆ ನಿಜಕ್ಕೂ ಇದು ಸ್ಪಷ್ಟವಾದ ಬಯಲು ವೇಶ್ಯಾವಾಟಿಕೆ ಹಾಗೂ ಅಶ್ಲೀಲ ಚಟುವಟಿಕೆಯ ತಾಣ ಎಂಬುದರ ಅರಿವಾಗದೇ ಇರದು.

ಮೈಸೂರಿನ ಹೃದಯ ಭಾಗದಲ್ಲಿರುವ, ಹಗಲೆಲ್ಲಾ ಸುತ್ತ ಸದಾ ಜನಜಂಗುಳಿ, ವಾಹನ ದಟ್ಟಣೆ ಇರುವ ಪ್ರಸಿದ್ಧ ಪೀಪಲ್ಸ್ ಪಾರ್ಕ್‌ನ ಇಂದಿನ ಅಸಹ್ಯ ಸ್ಥಿತಿ ಇದು. 'ಮೈಸೂರು ಮಿತ್ರ' ಸ್ಥಳಕ್ಕೆ ಭೇಟಿ ನೀಡಿ ರಿಯಾಲಿಟಿ ಚೆಕ್ ಮಾಡಿದ ಸಂದರ್ಭದಲ್ಲಿ ನಿಜಕ್ಕೂ ಅಲ್ಲಿನ ವಾತಾವರಣ ನೋಡಿ ಬೆಚ್ಚಿ ಬೀಳುವಂತಾಯಿತು. ಗುಡ್ಡೆ ಗುಡ್ಡೆಯಾಗಿ ಬಿದ್ದಿರುವ ನಿರೋಧ್ ಬಾಕ್ಸ್‌ಗಳು, ಬಳಸಿ, ಬಿಸಾಡಿದ ಕಾಂಡೋಮ್‌ಗಳು, ಕುಡಿದು ಬಿಸಾಡಿದ ಮದ್ಯದ ಬಾಟಲಿಗಳನ್ನು ನೋಡಿದರೆ ಈ ಪಾರ್ಕ್‌ನಲ್ಲಿ ಎಂಥಹ ದಂಧೆ ನಡೆಯುತ್ತಿದೆ ಎಂಬುದರ ಅರಿವಾಗುತ್ತದೆ.

ಪ್ರತಿದಿನ ಕತ್ತಲಾಗುತ್ತಿದ್ದಂತೆಯೇ ಪೀಪಲ್ಸ್ ಪಾರ್ಕ್ ಅಶ್ಲೀಲ ಚಟುವಟಿಕೆಗಳ ತಾಣವಾಗುತ್ತಿದೆ. ಅದರಲ್ಲೂ ಸರ್ಕಾರಿ ಭವನ ವೃತ್ತದ ಬಳಿಯಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪಕ್ಕದಲ್ಲೇ ಇರುವ ಪೀಪಲ್ಸ್ ಪಾರ್ಕ್‌ನ ಮಂಟಪದಲ್ಲಿ ರಾಶಿ ರಾಶಿ ನಿರೋಧ್, ಬಳಸಿ ಬಿಸಾಡಿರುವ ಕಾಂಡೋಮ್‌ಗಳು ಈ ಪಾರ್ಕ್‌ನ ಪರಿಸರವನ್ನು ಎಷ್ಟು ಹಾಳು ಮಾಡಿದೆ ಎಂದರೆ, ಒಳಹೋದವರು ನಾಚಿಕೆ ಪಡುವಂತಹ ಸ್ಥಿತಿಯಲ್ಲಿರುವುದು ಸ್ಥಳಕ್ಕೆ ಭೇಟಿ ನೀಡಿದವರಿಗೆ ತಿಳಿಯುತ್ತದೆ. ಹೆಸರು ಹೇಳಲಿಚ್ಛಿಸದ ವ್ಯಕ್ತಿಯೊಬ್ಬರ ಪ್ರಕಾರ, ತಾವು ಇದೇ ರಸ್ತೆಯಲ್ಲಿ ಪ್ರತಿದಿನ ಮನೆಗೆ ತೆರಳುತ್ತಿದ್ದು, ಇಲ್ಲಿ ರಾತ್ರಿ ವೇಳೆ ಓಡಾಡಲು ಮುಜುಗರ ವಾಗುತ್ತದೆ. ಪಾರಂಪರಿಕ ಹಾಗೂ ಪ್ರತಿಷ್ಠಿತ ಸರ್ಕಾರಿ ಭವನದ ವೃತ್ತದ ಕೆಲವೇ ಗಜ ಅಂತರದಲ್ಲಿ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು, ಕಾಲೇಜಿನ ಮುಖ್ಯ ದ್ವಾರದ ಬಳಿ ಟ್ರಿಣ್ ಟ್ರಿಣ್ ಸೈಕಲ್ ಸ್ಟ್ಯಾಂಡ್ ಇದೆ. ಪಕ್ಕದಲ್ಲೇ ಪಾರ್ಕ್‌ನ ಚಿಕ್ಕದೊಂದು ಗೇಟ್. ಆ ಗೇಟ್‌ನಿಂದ ಒಳಹೊಕ್ಕರೆ ಕೆಲ ಅಡಿ ಅಂತರದಲ್ಲೇ ಇರುವ ಮಂಟಪದ ಒಳ ಮತ್ತು ಹೊರ ಆವರಣದಲ್ಲಿ ಅಸಹ್ಯ ದೃಶ್ಯ ರಾರಾಜಿಸುತ್ತಿದೆ.

ಪೀಪಲ್ಸ್ ಪಾರ್ಕ್‌ನ ಸುತ್ತಮುತ್ತಲಿನ ಪ್ರಮುಖ ರಸ್ತೆಗಳು ಸಾವಿರಾರು ಜನ ಓಡಾಡುವ, ನೂರಾರು ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತವೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಬ್ರಿಟಿಷ್ ಕಾಲದ ಗೇಟ್‌ವೇ (ಆರ್ಚ್), ಸರ್ಕಾರಿ ಭವನ, ಸಾರ್ವಜನಿಕ ಗ್ರಂಥಾಲಯ, ತಾಲೂಕು ಕಚೇರಿ, ತಾಪಂ ಕಚೇರಿ ಇತ್ಯಾದಿ ಪ್ರಮುಖ ಕಚೇರಿಗಳನ್ನು ಸುತ್ತುವರಿದಿರುವ ಪೀಪಲ್ಸ್ ಪಾರ್ಕ್‌ನಲ್ಲಿ ಇಂತಹ ಕೆಟ್ಟ ಅಶ್ಲೀಲ ಚಟುವಟಿಕೆಗಳು ನಡೆಯುತ್ತಿದೆ ಎಂದರೆ ಸಾಂಸ್ಕೃತಿಕ ನಗರಿ ಮೈಸೂರಿಗೆ ಶೋಭೆ ತರುವಂಥದ್ದಲ್ಲ. ಪೊಲೀಸ್ ಇಲಾಖೆ ಮತ್ತು ಮೈಸೂರು ನಗರಪಾಲಿಕೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಎಂದು ಹೆಸರು ಹೇಳಲಿಚ್ಛಿಸದ ಹಿರಿಯ ನಾಗರಿಕರೊಬ್ಬರು 'ಮೈಸೂರು ಮಿತ್ರ'ನಲ್ಲಿ ಬೇಸರದಿಂದ ಪ್ರಶ್ನಿಸಿದರು.





ನಿರ್ವಹಣೆ ಇಲ್ಲ: ಮೈಸೂರು ನಗರ ಪಾಲಿಕೆ ವತಿಯಿಂದ ಪೀಪಲ್ಸ್ ಪಾರ್ಕ್ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ನೀಡಿದ್ದು, ಅವರ ನಿರ್ಲಕ್ಷ್ಯದಿಂದ ಇಲ್ಲಿ ಅಶ್ಲೀಲ ಚಟುವಟಿಕೆಗಳು ನಡೆಯು ವಂತಾಗಿದೆ. ಪಾರ್ಕ್‌ನ ನಿರ್ವಹಣೆಯೂ ಇಲ್ಲ. ರಾತ್ರಿಯಾಗುತ್ತಿದ್ದಂತೆಯೇ ಯಾರು ಬೇಕಾದರೂ ತಮ್ಮ ಚಟ ತೀರಿಸಿಕೊಳ್ಳಲು ಪೀಪಲ್ಸ್ ಪಾರ್ಕ್‌ಗೆ ಹೋಗುತ್ತಾರೆ ಎಂಬಂತಾಗಿದೆ. ಹೀಗಾಗಿ ಜನರಿಗೆ ಸ್ವಚ್ಛ ಗಾಳಿ, ವಾತಾವರಣ ನೀಡಬೇಕಾದ ಪಾರ್ಕ್, ಅಶ್ಲೀಲ ವಾತಾವರಣದ ತಾಣವಾಗಿರುವ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾರೆ. ಕೂಡಲೇ ಅಶ್ಲೀಲ ದಂಧೆಗೆ ಕಡಿವಾಣ ಹಾಕಬೇಕು. ವಾಯು ವಿಹಾರಿಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳ ವ್ಯಾಸಂಗ ಹಾಗೂ ಹೊರ ಊರುಗಳಿಂದ ಬರುವ ಸಾರ್ವಜನಿಕರಿಗೆ ವಿಶ್ರಾಂತಿ ಪಡೆಯಲು ಅನುಕೂಲವಾಗುವ ರೀತಿಯಲ್ಲಿ ಪೀಪಲ್ಸ್ ಪಾರ್ಕ್ ಅನ್ನು ಅಭಿವೃದ್ಧಿಪಡಿಸಬೇಕು ಎಂಬುದು ಕೆಲವು ಪರಿಸರ ಪ್ರೇಮಿಗಳ ಒತ್ತಾಯವಾಗಿದೆ

ಆಸ್ತಿ ನೋಂದಣಿಗೆ ನೀಡಲಾಗಿದ್ದ ಶೇ.10 ರಿಯಾಯ್ತಿ ಮತ್ತೆ 3 ತಿಂಗಳು ವಿಸ್ತರಣೆ



ಬೆಂಗಳೂರು, ಜು.25 (ಕೆಎಂಶಿ)–ರಾಜ್ಯದಲ್ಲಿ ಆಸ್ತಿ ನೋಂದಣಿಗೆ ನೀಡಿದ ಶೇಕಡಾ ಹತ್ತರಷ್ಟು ರಿಯಾಯ್ತಿಯನ್ನು ಮುಂದಿನ ಮೂರು ತಿಂಗಳ ಕಾಲ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಅರ್.ಅಶೋಕ್, ನೋಂದಣಿಯಲ್ಲಿ ರಿಯಾಯ್ತಿ ನೀಡಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ಹಣ ಹರಿದು ಬರುತ್ತಿದ್ದು, ನಿರೀಕ್ಷೆ ಮೀರಿ ಆದಾಯ ಸಂಗ್ರಹವಾಗಿದೆ ಎಂದರು.

ಈ ವರ್ಷದ ಬಜೆಟ್‌ನಲ್ಲಿ ಆಸ್ತಿ ನೋಂದಣಿಯ ಮೂಲಕ 14 ಸಾವಿರ ಕೋಟಿ ರೂ. ಸಂಗ್ರಹಿಸಲು ಇಲಾಖೆಗೆ ಗುರಿ ನಿಗದಿ ಮಾಡಲಾಗಿತ್ತು. ಆದರೆ ಈ ಪ್ರಮಾಣವನ್ನು ನಾವು ಅಧಿಕಾರಿಗಳ ಜತೆ ಚರ್ಚಿಸಿ ಹದಿನೈದು ಸಾವಿರ ರೂಪಾಯಿಗಳಿಗೇರಿಸಿದೆವು. ಆದರೆ ಈ ವರ್ಷದ ಮೊದಲ ಮೂರು ತಿಂಗಳುಗಳಲ್ಲಿ ಆಸ್ತಿ ನೋಂದಣಿಗೆ ಸಂಬಂಧಿಸಿದಂತೆ ಐದೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಸಂಗ್ರಹಿಸಲಾಗಿದೆ ಎಂದು ಅಶೋಕ್ ವಿವರ ನೀಡಿದರು.

ಈ ಮಧ್ಯೆ ಆಸ್ತಿ ನೋಂದಣಿಯ ಸಂದರ್ಭದಲ್ಲಿ ಸರ್ವರ್ ಸಮಸ್ಯೆ ಪದೇ ಪದೆ ಎದುರಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಶಾಶ್ವತವಾಗಿ ಪರಹರಿಸಲು ತೀರ್ಮಾನಿಸಲಾಗಿದ್ದು 406 ಕೋಟಿ ರೂ.ಗಳ ವೆಚ್ಚದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಗಳನ್ನು ಕಂಪ್ಯೂಟರಿಕರಣಗೊಳಿಸಲು ನಿರ್ಧರಿಸಲಾಗಿದೆ ಎಂದರು. ಸರ್ವರ್ ಸರಿಯಿದ್ದರೆ ಆಪರೇಟರ್ ಸರಿಯಿಲ್ಲ, ಆಪರೇಟರ್ ಸರಿಯಿದ್ದರೆ ಸರ್ವರ್ ಸಿಗುವುದಿಲ್ಲ ಎಂಬ ದೂರುಗಳು ಹೆಚ್ಚಿದ್ದು, ಇದಕ್ಕೆ ಕಂಪ್ಯೂಟರ್ ಮತ್ತು ಆಪರೇಟರ್ ಬೇರೆ ಬೇರೆ ಕಂಪನಿಗಳಿಂದ ನಿಯುಕ್ತರಾಗಿರುವುದೇ ಕಾರಣ. ಹೀಗಾಗಿ ಇನ್ನು ಮುಂದೆ ಕಂಪ್ಯೂಟರ್‌ಗಳನ್ನು ಒಂದೇ ಸಂಸ್ಥೆ ಪೂರೈಸುವುದಲ್ಲದೆ ಆಪರೇಟರ್ ಕೂಡ ಅದೇ ಸಂಸ್ಥೆಯವರಾಗಿರುತ್ತಾರೆ ಎಂದರು. ಹೀಗೆ ಬಿಓಟಿ ಆಧಾರದ ಮೇಲೆ ಜವಾಬ್ದಾರಿ ಹೊರುವ ಸಂಸ್ಥೆ ಪ್ರತಿ ಆಸ್ತಿ ನೋಂದಣಿಗೆ ಪ್ರತಿಯಾಗಿ ನಿರ್ದಿಷ್ಟ ಪ್ರಮಾಣದ ಶುಲ್ಕ ಪಡೆಯಲಿದೆ. ಹೀಗೆ ಎಲ್ಲವನ್ನೂ ಒಂದೇ ಸಂಸ್ಥೆಗೆ ವಹಿಸಿಕೊಡುವುದರಿಂದ ಸರ್ಕಾರದ ಬೊಕ್ಕಸದ ಮೇಲೆ ಯಾವುದೇ ಹೊರೆ ಬೀಳುವುದಿಲ್ಲ ಎಂದರು.

ಆರ್ಥಿಕ ಅಭಿವೃದ್ಧಿ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು,ಜು.25– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಜಿಲ್ಲೆಯಲ್ಲಿ ವಾಸಿಸುವ ಪರಿಶಿಷ್ಟ ಪಂಗಡಗಳು ಮತ್ತು ಅಲೆಮಾರಿ–ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಹಾಗೂ ಆದಿವಾಸಿ ಜನಾಂಗದವರಿಗೆ ಆರ್ಥಿಕ ಅಭಿವೃದ್ಧಿ ಯೋಜನೆ ಸೌಲಭ್ಯ ಕಲ್ಪಿಸಲು ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಆ.20ರೊಳಗಾಗಿ ಅರ್ಜಿ ಸಲ್ಲಿಸಲು ಕೋರಿದೆ. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ, ಪ್ರೇರಣಾ (ಮೈಕ್ರೊ ಕ್ರೆಡಿಟ್ ಫಿನಾನ್ಸ್) ಯೋಜನೆ (ನೋಂದಾಯಿತ ಮಹಿಳಾ ಸ್ವ– ಸಹಾಯ ಮಹಿಳಾ ಸಂಘಗಳಿಗೆ), ಸಮಗ್ರ ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆ (ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಗೆ ಮಾತ್ರ) ಯೋಜನೆಗೆ ಅರ್ಜಿ ಸಲ್ಲಿಸಬಹುದು. http://suvidha.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ:0821–2430022 ಅನ್ನು ಸಂಪರ್ಕಿಸಬಹುದು

ಜು.29ರಿಂದ 'ಡಿಸೈನರ್ ಹಾಟ್ ಲೈಫ್ ಸ್ಟೈಲ್' ವಸ್ತು ಪ್ರದರ್ಶನ, ಮಾರಾಟ ಮೇಳ



ಮೈಸೂರು, ಜು.25(ಎಂಕೆ)– ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಜು.29 ರಿಂದ 31ರವರೆಗೆ 'ಡಿಸೈನರ್ ಹಾಟ್ ಲೈಫ್ ಸ್ಟೈಲ್' ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ.

ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದ್ದು, ದೇಶಾದ್ಯಂತದ ವಿನ್ಯಾಸಕರು ನೇರವಾಗಿ ಗ್ರಾಹಕರನ್ನು ತಲುಪಲು ತಮ್ಮ ಕಲೆ, ಕರಕುಶಲ ಉತ್ಪನ್ನಗಳನ್ನು ಪ್ರದರ್ಶಿಸುತ್ತಿದ್ದಾರೆ. 25ಕ್ಕೂ ಅಧಿಕ ಮಳಿಗೆಗಳಿರಲಿದ್ದು, ಉತ್ತರ ಪ್ರದೇಶ, ಕಾಶ್ಮೀರಿ, ಶಾಲ್ಸ್, ಪಶ್ಚಿಮ ಬಂಗಾಳ, ಇಕ್ಕತ್, ಉರ್ಡಿಶಾ, ಬನಾರಸ್ ಸೀರೆಗಳು, ಟಸ್ಸರ್ ಸಿಲ್ಕ್ ಸೀರೆಗಳು, ಜ್ಯೂಟ್ ಸೀರೆಗಳು, ರಾಜಸ್ಥಾನ್ ಜೈಪುರ ಟಾಪ್ಸ್, ಬಾಗಲ್ಪುರ್ ಸೂಟ್‌ಗಳು, ಕಲಂಕಾರಿ ಟಾಪ್ಸ್, ಹುಬ್ಬಳ್ಳಿ ಸೀರೆಗಳು, ಜೈಪುರ ಬೆಡ್‌ಶೀಟ್‌ಗಳು, ಕುಚ್ ಬುಚ್ ಟಾಪ್ಸ್, ಒಂದು ಗ್ರಾಮ್ ಗೋಲ್ಡ್ ಜ್ಯುವೆಲ್ಲರಿ, ಪೋಚಂಪಾಲಿ ಉತ್ಪನ್ನಗಳು ಲಭ್ಯವಿದೆ. ರಾಜಸ್ಥಾನ್, ಜಮ್ಮು–ಕಾಶ್ಮೀರ, ಮಧ್ಯಪ್ರದೇಶ, ಉತ್ತರ ಪ್ರದೇಶ, ವೆಸ್ಟ್ ಬೆಂಗಾಲ್, ಜೈಪುರ, ತಮಿಳುನಾಡು ಕಾಂಚೀವರಂ, ಬನಾರಸ್, ಗುಜರಾತ್, ಬಿಹಾರ್, ಉತ್ತರಾಖಂಡ್, ಹುಬ್ಬಳ್ಳಿ ಸೇರಿದಂತೆ ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಎಲ್ಲಾ ರೀತಿಯ ಉತ್ಪನ್ನಗಳು ಮೇಳದಲ್ಲಿ ಲಭ್ಯವಿರಲಿದೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಜು.28ರಿಂದ ಶ್ರಾವಣಮಾಸ ಪೂಜಾನುಷ್ಠಾನ, ಪ್ರವಚನ ಕಾರ್ಯಕ್ರಮ

ಮೈಸೂರು, ಜು.25–ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ ಅಂಗವಾಗಿ ಜುಲೈ 28 ರಿಂದ ಆಗಸ್ಟ್ 27 ರವರೆಗೆ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಗದ್ದುಗೆ, ಶ್ರೀ ನಂಜುಂಡೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಪ್ರತಿನಿತ್ಯ ರುದ್ರಾಭಿಷೇಕ, ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಮಹಾಮಂಗಳಾರತಿ ಇತ್ಯಾದಿ ವಿಶೇಷ ಪೂಜಾದಿಗಳನ್ನು ಏರ್ಪಡಿಸಲಾಗಿದೆ.


ಪ್ರತಿನಿತ್ಯ ಸಂಜೆ 6.30 ರಿಂದ 7 ರವರೆಗೆ ಸಾಮೂಹಿಕ ಪ್ರಾರ್ಥನೆ, 7 ರಿಂದ 8 ರವರೆಗೆ ಸುರಂಗ ಕವಿಯು ರಚಿಸಿರುವ 'ತ್ರಿಷಷ್ಠಿ ಪುರಾತನ ಚಾರಿತ್ರಂ' ಕಾವ್ಯವಾಚನ ಮತ್ತು ಪ್ರವಚನ ನಡೆಯುತ್ತದೆ. ಪ್ರೊ. ಹೆಚ್.ಬಿ.ದೇವಣ್ಣನವರು ವ್ಯಾಖ್ಯಾನ ನೀಡಲಿದ್ದಾರೆ. ಡಿ.ಎಂ.ಸಿದ್ಧಲಿಂಗಸ್ವಾಮಿಯವರು ಕಾವ್ಯ ವಾಚನ ಮಾಡಲಿದ್ದಾರೆ.

ಜುಲೈ 28 ಗುರುವಾರ ಸಂಜೆ 6.30ಕ್ಕೆ ಹುಣಸೂರು ತಾಲೂಕಿನ ಮಾದಹಳ್ಳಿಯ ಶ್ರೀ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ, ಮೈಸೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಬಿ.ಆರ್. ಪೂರ್ಣಿಮಾರವರು ಉದ್ಘಾಟಿಸಲಿದ್ದಾರೆ. ಮೈಸೂರಿನ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಮಾನವೀಯತೆ ಮೆರೆದ ಬಿಜೆಪಿ ಮುಖಂಡ

ನಡೆದಾಡಲು ಆಗದೆ ಒಂದೇ ಸ್ಥಳದಲ್ಲಿ ಬಿದ್ದಿದ್ದ ವ್ಯಕ್ತಿಗೆ ಚಿಕಿತ್ಸೆ ಕೊಡಿಸಿ ನಿರಾಶ್ರಿತರ ಕೇಂದ್ರದಲ್ಲಿ ಆಶ್ರಯ





ಮೈಸೂರು, ಜು.25(ಎಂಕೆ)– ಎದ್ದು ಓಡಾಡಲು ಸಾಧ್ಯವಾಗದೆ ಒಂದೇ ಸ್ಥಳದಲ್ಲಿ ಬಿದ್ದಿದ್ದ ವ್ಯಕ್ತಿಗೆ ಬಿಜೆಪಿ ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ ಚಿಕಿತ್ಸೆ ಕೊಡಿಸಿ, ನಿರಾಶ್ರಿತರ ಕೇಂದ್ರಕ್ಕೆ ದಾಖಲಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಮೈಸೂರು ಹೆಬ್ಬಾಳಿನ ಸುಬ್ರಹ್ಮಣ್ಯನಗರದ ಸಂಪಿಗೆ ರಸ್ತೆ ಬದಿಯಲ್ಲಿ ಕಳೆದ 3 ದಿನಗಳಿಂದ ಮಲಗಿದ್ದ ಸ್ಥಿತಿಯಲ್ಲಿಯೇ ಬಿದ್ದಿದ್ದ ವ್ಯಕ್ತಿಯನ್ನು ನೋಡಿದ ಕಿರಣ್‌ಗೌಡ ಪೊಲೀಸರಿಗೆ ವಿಷಯ ತಿಳಿಸಿ ಕರೆದೊಯ್ದು ಚಿಕಿತ್ಸೆ ಕೊಡಿಸಿದ ನಂತರ ನಿರಾಶ್ರಿತ ಕೇಂದ್ರಕ್ಕೆ ಸೇರಿಸಿದ್ದಾರೆ. ಮೂಲತಃ ಉತ್ತರ ಕರ್ನಾಟಕದ ವ್ಯಕ್ತಿಯಾಗಿದ್ದು, ಒಂದೇ ಸ್ಥಳದಲ್ಲಿ ಬಿದ್ದಿದ್ದರಿಂದ ಕಾಲುಗಳು ಊದಿಕೊಂಡು ತಿರುಗಾಡಲು ಸಾಧ್ಯವಾಗುತ್ತಿರಲಿಲ್ಲ. ಪಿಯುಸಿ ಓದಿದ್ದು, ಮೈಸೂರಿಗೆ ಕೆಲಸ ಹುಡುಕಿಕೊಂಡು ಬಂದೆ. ಆದರೆ, ಎಲ್ಲಿಯೂ ಕೆಲಸ ಸಿಗದೆ ಬೇಸರಗೊಂಡು ಇಲ್ಲಿಯೇ ಇದ್ದೇನೆ. ತಿರುಗಾಡಲು ಸಾಧ್ಯವಾಗುತ್ತಿಲ್ಲ. ತನ್ನ ಹೆಸರು ರಾಘವೇಂದ್ರ ಎಂದು ತಿಳಿಸಿದ್ದಾರೆ ಎಂದು ಎಂ.ಜೆ.ಕಿರಣ್‌ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನೌಕರರು ಕರ್ತವ್ಯದ ವೇಳೆ ಕಚೇರಿಯಲ್ಲಿ ಇರುವುದು ಕಡ್ಡಾಯ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಕಚೇರಿಗೆ ನಿಗದಿತ ಅವಧಿಗೆ ಹಾಜರಾಗಲು ಹಾಗೂ ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವಂತೆ ರಾಜ್ಯ ಸರ್ಕಾರ ಸೂಚನೆ ನೀಡಿದೆ. ಈ ಸಂಬಂಧ ಸುತ್ತೋಲೆ ಹೊರಡಿಸಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ, ವಂದಿತಾ ಶರ್ಮಾ, ರಾಜ್ಯ ಸರ್ಕಾರದ ಕಚೇರಿಗಳಲ್ಲಿ ನಿಗದಿತ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಲು ಹಾಗೂ ಕರ್ತವ್ಯದ ಅವಧಿಯಲ್ಲಿ ಕಾರ್ಯನಿಷ್ಠೆಯನ್ನು ತೋರಲು ಈಗಾಗಲೇ ಸರ್ಕಾರವು ಸಾಕಷ್ಟು ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಿದೆ.

ಆದಾಗ್ಯೂ, ಸರ್ಕಾರಿ ನೌಕರರು/ಅಧಿಕಾರಿಗಳಲ್ಲಿ ಸಮಯ ಪ್ರಜ್ಞೆ ಮತ್ತು ಕಾರ್ಯ ನಿಷ್ಠೆಯ ಕೊರತೆಯನ್ನು ಇತ್ತೀಚಿನ ದಿನಗಳಲ್ಲಿ ಅವಲೋಕಿಸಲಾಗಿದೆ. ಸಾರ್ವಜನಿಕರು ದೂರದ ಸ್ಥಳಗಳಿಂದ ಸರ್ಕಾರಿ ಕಚೇರಿಯಲ್ಲಿನ ತಮ್ಮ ಕಾರ್ಯಗಳಿಗೆ ಬೆಳಗ್ಗೆ ನಿಗದಿತ ಅವಧಿಗೆ ಸರ್ಕಾರದ ಕಚೇರಿಗಳಿಗೆ ಭೇಟಿ ನೀಡಿದಾಗ ಬಹುತೇಕ ಕಚೇರಿಗಳಲ್ಲಿ ಸಿಬ್ಬಂದಿ ಕಚೇರಿಗೆ ಹಾಜರಾಗಿಲ್ಲದೇ ಇರುವ ಕಾರಣ ಸಾಮಾನ್ಯ ಜನರು ಬವಣೆಪಡುವಂತಾಗಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರದ ಕಛೇರಿಯ ಪ್ರಾರಂಭದ ಸಮಯ ಬೆಳಗ್ಗೆ 10 ಗಂಟೆಗೆ ಕಡ್ಡಾಯವಾಗಿ ಹಾಜರಾಗುವುದು ಹಾಗೂ ಕಚೇರಿ ಅವಧಿ ಪೂರ್ಣವಾಗುವವರೆಗೆ ತಮಗೆ ನಿಗದಿಪಡಿಸಿದ ಸ್ಥಾನದಲ್ಲಿ ಇರಬೇಕು ಎಂದಿದ್ದಾರೆ.

ಕೆಆರ್‌ಎಸ್ ಸುತ್ತಮುತ್ತಲ ಗಣಿಗಳಲ್ಲಿ ಪರೀಕ್ಷಾರ್ಥ ಸ್ಫೋಟ ಮುಂದೂಡಿಕೆ

ಮಂಡ್ಯ,ಜು.25– ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಡೆದರೆ ಅಣೆಕಟ್ಟೆಗೆ ಅಪಾಯವಿದೆ ಎಂದು ಜಿಲ್ಲಾಡಳಿತಕ್ಕೆ ರೈತ ಸಂಘ ಸೇರಿದಂತೆ ಕೆಲವರಿಂದ ದೂರು ನೀಡಲಾಗಿತ್ತು. ಅದೇ ವೇಳೆ ಗಣಿಗಾರಿಕೆಯನ್ನೇ ನಂಬಿ ಜೀವನ ಸಾಗಿಸುತ್ತಿರುವ ಸಾವಿರಾರು ಮಂದಿ ಗಣಿಗಾರಿಕೆಯಿಂದ ಅಣೆಕಟ್ಟೆಗೆ ಅಪಾಯವಿಲ್ಲ ಎಂದು ಪ್ರತಿದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸುವ ಮೂಲಕ ವೈಜ್ಞಾನಿಕ ಪರೀಕ್ಷೆಗೆ ಮುಂದಾಗಿದ್ದ ಜಿಲ್ಲಾಡಳಿತ ನಾಳೆ (ಮಂಗಳವಾರ) ನಡೆಯಬೇಕಿದ್ದ ಪರೀಕ್ಷಾರ್ಥ ಸ್ಫೋಟವನ್ನು ಮುಂದೂಡಿರುವುದಾಗಿ ರಾತ್ರಿ ವೇಳೆಗೆ ಘೋಷಿಸಿತು.

ಸಂಜೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದಿದ್ದ ಸಭೆಯಲ್ಲಿ ಪರೀಕ್ಷಾರ್ಥ ಸ್ಫೋಟ ನಾಳೆ ನಡೆಯಲಿದೆ ಎಂದು ಹೇಳಿದ್ದರಿಂದ ರೈತರು ಡಿಸಿ ಕಚೇರಿ ಮುಂದೆ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದರು. ಜಿಲ್ಲಾಧಿಕಾರಿಗಳು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ರಾತ್ರಿ 11 ಗಂಟೆ ಸುಮಾರಿನಲ್ಲಿ ಪರೀಕ್ಷಾರ್ಥ ಸ್ಫೋಟ ಮುಂದೂಡಿರುವುದಾಗಿ ಘೋಷಿಸಿದ ಹಿನ್ನಲೆಯಲ್ಲಿ ರೈತ ಮುಖಂಡರು ಅಹೋರಾತ್ರಿ ಧರಣಿ ಹಿಂಪಡೆದರು. ಆದರೆ ಪರೀಕ್ಷಾರ್ಥ ಸ್ಫೋಟ ವನ್ನು ಕೈಬಿಡಲಾಗಿದೆಯೇ ಅಥವಾ ನಾಳೆ ಮಾತ್ರ ಮುಂದೂಡಲಾಗಿದೆಯೇ ಎಂಬುದರ ಬಗ್ಗೆ ಜಿಲ್ಲಾಡಳಿತ ಸ್ಪಷ್ಟವಾಗಿ ತಿಳಿಸದ ಹಿನ್ನೆಲೆಯಲ್ಲಿ ನಾಳೆಯೂ ಕೂಡ ಧರಣಿ ನಡೆಸಲಿರುವುದಾಗಿ ರೈತ ಮುಖಂಡರು ತಿಳಿಸಿದ್ದಾರೆ.

ನಾಳೆ (ಮಂಗಳವಾರ) ಟ್ರಯಲ್ ಬ್ಲಾಸ್ಟ್(ಪರೀಕ್ಷಾರ್ಥ ಸ್ಫೋಟ)ಗೆ ದಿನಾಂಕ ನಿಗದಿಪಡಿಸಲಾಗಿದ್ದು, ಜಾರ್ಖಂಡ್‌ನಿಂದ ಬಂದಿರುವ ನಾಲ್ವರು ವಿಜ್ಞಾನಿಗಳ ತಂಡ ಇಂದು (ಸೋಮವಾರ) ಟ್ರಯಲ್ ಬ್ಲಾಸ್ಟ್‌ಗೆ ಸ್ಥಳ ಗುರುತಿಸಲು ಆಗಮಿಸಿದ ವೇಳೆ ಟ್ರಯಲ್ ಬ್ಲಾಸ್ಟ್ ಪರ ಹಾಗೂ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಈ ಪ್ರತಿಭಟನೆಗಳ

ಬೇಬಿ ಬೆಟ್ಟದ 1600 ಎಕರೆ ಪ್ರದೇಶವು ರಾಜವಂಶಸ್ಥರಿಗೆ ಸೇರಿದ್ದಾಗಿದ್ದು, ಈ ಪ್ರದೇಶದಲ್ಲಿ ಪರೀಕ್ಷಾರ್ಥ ಸ್ಫೋಟ ನಡೆಸಬಾರದು ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಮ್ಮ ವಕೀಲ ನರೇಂದ್ರ ಡಿ.ವಿ.ಗೌಡರ ಮೂಲಕ ಸೋಮವಾರ ಸಂಜೆ ಡಿಸಿ ಅಶ್ವಥಿ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ.

ನಡುವೆಯೇ ಪೊಲೀಸ್ ಭದ್ರತೆಯೊಂದಿಗೆ ವಿಜ್ಞಾನಿಗಳ ತಂಡ ಟ್ರಯಲ್ ಬ್ಲಾಸ್ಟ್‌ಗೆ 5 ಕಡೆ ಜಾಗ ಗುರುತಿಸಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದೆ. ಈ ನಡುವೆ ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸಬಾರದು ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಮ್ಮ ವಕೀಲರ ಮೂಲಕ ಜಿಲ್ಲಾಡಳಿತಕ್ಕೆ ಅರ್ಜಿ ಸಲ್ಲಿಸಿದ್ದಾರೆ.


ಇದಕ್ಕೂ ಮುನ್ನಾ ಇಂದು ಟ್ರಯಲ್ ಬ್ಲಾಸ್ಟ್‌ಗೆ ವಿಜ್ಞಾನಿಗಳು ಆಗಮಿಸುತ್ತಿದ್ದಾರೆ ಎಂಬ ಮಾಹಿತಿ ಪಡೆದಿದ್ದ ರೈತರು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಕೆಆರ್‌ಎಸ್ ಅಣೆಕಟ್ಟೆ ಬಳಿ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿದರು. ಗಣಿಗಾರಿಕೆಯಿಂದ ಅಣೆಕಟ್ಟೆಗೆ ಅಪಾಯವಿದ್ದು, ಟ್ರಯಲ್ ಬ್ಲಾಸ್ಟ್ ನಾಟಕವಾಡಿ ಗಣಿಗಾರಿಕೆಗೆ ಅವಕಾಶ ನೀಡಲಾಗುತ್ತದೆ ಎಂದು ಆರೋಪಿಸಿದ ಬಡಗಲಪುರ ನಾಗೇಂದ್ರ, ಟ್ರಯಲ್ ಬ್ಲಾಸ್ಟ್ ನಡೆಸಬಾರದು ಎಂದು ಆಗ್ರಹಿಸಿದರು.

ಕೆಆರ್‌ಎಸ್ ಮುಂದೆ ಪ್ರತಿಭಟನೆ ನಡೆಸಲು ಬೈಕ್ ರ್‍ಯಾಲಿ ಮೂಲಕ ತೆರಳುತ್ತಿದ್ದ ರೈತರನ್ನು ಕಾವೇರಿಪುರದ ಬಳಿ ಗಣಿಗಾರಿಕೆ ಪರ ಇರುವವರು ಅಡ್ಡಗಟ್ಟಿದರು. ಗಣಿಗಾರಿಕೆ ಪರ ಘೋಷಣೆ ಕೂಗಿದ ಅವರು, ಟ್ರಯಲ್ ಬ್ಲಾಸ್ಟ್ ನಡೆದು ವರದಿ ಬರಲಿ ಎಂದು ಆಗ್ರಹಿಸಿದರು. ಇದೇ ವೇಳೆ ಕೆಆರ್‌ಎಸ್‌ಗೆ ತೆರಳುತ್ತಿದ್ದ ರೈತರು ಕೂಡ ಗಣಿಗಾರಿಕೆಯಿಂದ ಅಣೆಕಟ್ಟೆಗೆ ಅಪಾಯ ಎಂದು ಘೋಷಣೆ ಕೂಗಿದರು. ಈ ವೇಳೆ ಎರಡೂ ಗುಂಪುಗಳ ನಡುವೆ ವಾಗ್ವಾದ ತಾರಕಕ್ಕೇರಿತು. ಸ್ಥಳಕ್ಕಾಗಮಿಸಿದ ಪಾಂಡವಪುರ ಉಪವಿಭಾಗಾಧಿ ಕಾರಿ ಶಿವಾನಂದಮೂರ್ತಿ ಮತ್ತು ತಹಸೀಲ್ದಾರ್ ನಯನ ಅವರು ಎರಡೂ ಗುಂಪುಗಳನ್ನು ಸಮಾಧಾನಪಡಿಸಿ ಈ ಸಂಬಂಧ ಡಿಸಿ ಕಚೇರಿಯಲ್ಲಿ ಚರ್ಚಿಸೋಣ ಎಂದು ಅಲ್ಲಿಗೆ ಬರುವಂತೆ ತಿಳಿಸಿದರು. ಅದೇ ವೇಳೆ ಪೊಲೀಸರು ಎರಡೂ ಗುಂಪುಗಳನ್ನು ಬೇರ್ಪಡಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಇತ್ತ ಟ್ರಯಲ್ ಬ್ಲಾಸ್ಟ್ ಪರ ಹಾಗೂ ವಿರುದ್ಧ ಹೋರಾಟ ನಡೆಯುತ್ತಿದ್ದರೆ ವಿಜ್ಞಾನಿಗಳ ತಂಡ ಪೊಲೀಸ್ ಭದ್ರತೆಯೊಂದಿಗೆ ಬೇಬಿ ಬೆಟ್ಟಕ್ಕೆ ತೆರಳಿ ನಾಳೆ(ಮಂಗಳವಾರ) ಬ್ಲಾಸ್ಟ್ ನಡೆಸಬೇಕಾದ ಸ್ಥಳಗಳನ್ನು ಗುರುತಿಸಿ ಪೂರ್ವ ಸಿದ್ಧತೆ ಮಾಡಿಕೊಂಡರು. 5 ಸ್ಥಳಗಳಲ್ಲಿ 7ರಿಂದ 20 ಅಡಿ ಗುಂಡಿ ತೆಗೆದು ನಾಳೆ ನಡೆಸಬೇಕಾದ ಟ್ರಯಲ್ ಬ್ಲಾಸ್ಟ್‌ಗೆ ಸಿದ್ಧತೆಗಳನ್ನು ಮಾಡಿಕೊಂಡು ಹಿಂತಿರುಗಿದರು.

ಸಂಜೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಜ್ಞಾನಿಗಳ ತಂಡ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು, ಎಸ್ಪಿ ಹಾಗೂ ರೈತ ಮುಖಂಡರ ಸಭೆ ನಡೆಯಿತು. ಸಭೆ ಅಧ್ಯಕ್ಷತೆ ವಹಿಸಿದ್ದ ಡಿಸಿ ಅಶ್ವಥಿ, ನಾಳೆ ವಿಜ್ಞಾನಿಗಳು ಕೆಲಸ ಮಾಡಲು ಬಿಡಿ. ಅವರ ವರದಿ ಬಂದ ನಂತರ ಮುಂದಿನ ನಿರ್ಧಾರ ಕೈಗೊಳ್ಳೋಣ ಎಂದು ಮಾಡಿದ ಮನವಿಯನ್ನು ತಿರಸ್ಕರಿಸಿದ ರೈತ ಮುಖಂಡರು ಟ್ರಯಲ್ ಬ್ಲಾಸ್ಟ್ ನಡೆಸದೇ ವಿಜ್ಞಾನಿಗಳು ವಾಪಸ್ ಹೋಗಬೇಕು ಎಂದು ಪಟ್ಟು ಹಿಡಿದರು. ಕೊನೆಗೆ ಡಿಸಿ ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಿದರು ಎಂದು ಮೂಲಗಳು ತಿಳಿಸಿವೆ. ಡಿಸಿ ಕಚೇರಿಯಲ್ಲಿ ಸಭೆ ನಡೆಯುತ್ತಿದ್ದರೇ ಹೊರಗೆ ಗಣಿ ಮಾಲೀಕರು ಹಾಗೂ ಕಾರ್ಮಿಕರು ಟ್ರಯಲ್ ಬ್ಲಾಸ್ಟ್ ಬೇಕು ಎಂದು ಘೋಷಣೆ ಕೂಗುತ್ತಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.07.2022 ಮಂಗಳವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ಆರಿದ್ರ್ಯೆ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಅವರಿಂದ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವಗಳು, ತ್ರಯೋದಶಿ– ಸಂಜೆ ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಆರ್ದ್ರಾಭಿಸೇಕ, ಪ್ರದೋಷ ಪೂಜೆ, ವಿಶೇಷ ಪೂಜೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ನಂಜನಗೂಡು ರಸ್ತೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು :** ಉಪನ್ಯಾಸ ಮಾಲಿಕೆಗಳ ಅಡಿಯಲ್ಲಿ 'ಪಂಪನ ಕಾವ್ಯಗಳ ವಿಶ್ಲೇಷಣೆ' ಮತ್ತು ನಾಗರಾಜ್ ತಲಕಾಡು ವಿರಚಿತ 'ಬುದ್ಧ ಭಾರತ ಕಾವ್ಯ' ಕೃತಿ ಬಿಡುಗಡೆ ಮತ್ತು ಸಂವಾದ, ಉದ್ಘಾಟನೆ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಡಾ. ಎನ್.ಸಿ. ವೆಂಕಟರಾಜು, ಕೃತಿ ಬಿಡುಗಡೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್, ಪಂಪನ ಕಾವ್ಯಗಳ ವಿಶ್ಲೇಷಣೆ: ಪ್ರೊ.ಕೃಷ್ಣಮೂರ್ತಿ ಮೈಸೂರು, ಅಧ್ಯಕ್ಷತೆ : ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲ ಪ್ರೊ. ಶ್ರೀನಿವಾಸ್, ಸ್ಥಳ: ಜಯಲಕ್ಷ್ಮಮ್ಮಣ್ಣಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್ :** ಡಿವಿಜಿಯವರ 'ಮಂಕು ತಿಮ್ಮನ ಕಗ್ಗ' ಪ್ರವಚನ, ಸಂಜೆ 6ರಿಂದ 8ರವರೆಗೆ ಕುವೆಂಪು ಅವರ ಗೀತೆಗಳು, ಸಂಜೆ 6.30 ರಿಂದ ಜಸ್ವಂತ್ ಅವರಿಂದ ಪ್ರವಚನ, ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ.

■ **ಎನ್‌ಐಇ ಅಲ್ಯೂಮ್ನಿ ಅಸೋಸಿಯೇಷನ್ :** 2022ರ ಯುಜಿ ಮತ್ತು ಪಿಜಿ ಬ್ಯಾಚ್ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಮುಖ್ಯ ಅತಿಥಿಗಳು : ರಾಜಮಾತೆ ಪ್ರಮೋದಾದೇವಿ ಒಡೆಯರ್, ಗೌರವ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಆರ್.ಎನ್. ಐಯ್ಯಂಗಾರ್, ಪ್ರೊ. ಕೆ.ಎಸ್. ಚಂದ್ರಶೇಖರ್, ವಿಶಾದ್ ಗುಪ್ತ, ಅಧ್ಯಕ್ಷತೆ : ಎನ್‌ಐಇ ಮ್ಯಾನೇಜಿಂಗ್ ಕಮಿಟಿ ಅಧ್ಯಕ್ಷ ಡಾ. ಎಂ.ಎಸ್. ರಂಗನಾಥ್, ಸ್ಥಳ: ಡೈಮಂಡ್ ಜ್ಯೂಬಿಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಎನ್‌ಐಇ, ಮಧ್ಯಾಹ್ನ 12ಕ್ಕೆ.


■ **ಭಾವಸಾರ ಕ್ಷತ್ರಿಯ ಸಂಘ:** ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಬೆಳಗ್ಗೆ 10.55 ರಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕಳಸ ಸ್ಥಾಪನೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಎಲ್‌ಐಜಿ 88, ಹುಡ್ಕೋ, ಬನ್ನಿಮಂಟಪ ಬಡಾವಣೆ.

■ **ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ :** ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಬೈಕ್ ರ್‍ಯಾಲಿ, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ, ಸಂಜೆ 5ಕ್ಕೆ

■ **ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕ :** ಕಾರ್ಗಿಲ್ ವಿಜಯ್ ದಿವಸ್ ಆಚರಣೆ ಪ್ರಯುಕ್ತ ಬೈಕ್ ರ್‍ಯಾಲಿ, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ.

■ **ವ್ಯವಸ್ಥಾಪಕರು:** ಮಹಮ್ಮದ್ ರಫಿ ಆಯ್ದ ಹಿಂದಿ ಚಲನಚಿತ್ರ ಗೀತೆಗಳ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಾಹಿತಿ ಡಾ.ಕೆ.ಲೀಲಾಪ್ರಕಾಶ್, ಉದ್ಯಮಿ ರವಿಗೌಡ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಕಾಂಗ್ರೆಸ್ ಮುಖಂಡರಾದ ನವೀನ್ ಕುಮಾರ್, ಎಸ್.ರಾಮಪ್ರಸಾದ್ ಅಯ್ಯಂಗಾರ್, ಸಂಜಯ್, ಪುಟ್ಟಸ್ವಾಮಿ, ಶೇಖರ್, ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮೋಹನ್, ಸ್ಥಳ:ನಾದಬ್ರಹ್ಮ ವಾಸುದೇವಾಚಾರ್ಯ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ– ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಟಿ.ಎಸ್.ಸ್ನೇಹಾ, ಹಂಸಿನಿ ಎಸ್. ಕುಮಾರ್, ಎನ್. ಹೇಮಾ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.30 ವೃತ್ತಿ ಮಾರ್ಗದರ್ಶನ–ಕಾನೂನು ವಿಷಯದಲ್ಲಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ.ಕೆ.ಎಸ್. ಸುರೇಶ್ ಅವರೊಂದಿಗೆ ಮಾತುಕತೆ, 10.00 ಗಾನ ರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ.

ಮಧ್ಯಾಹ್ನ: 12.30 ದೇವರನಾಮ–ಟಿ.ಎನ್.ಶೇಷಗೋಪಾಲನ್, 12.45 ಎಲ್ಲಿ ಯಾವ ಗಿಡ ಮರ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ ಮನೋಜ್ ಕುಮಾರ್ ಅವರೊಡನೆ ಸಂದರ್ಶನ, 1.20 ಭಾವಗೀತೆ– ಕಸ್ತೂರಿ ಶಂಕರ್, 3.00 ತ್ರಿಚಿ ವಿ.ನಟರಾಜನ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಲವ ಕುಶ", ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ, ಹೈನುರಾಸುಗಳಲ್ಲಿ ಕೆಚ್ಚಲು ಬಾವು ಮತ್ತು ನಿರ್ವಹಣೆ ಕುರಿತು ಸವಿತಾ ಎಸ್.ಟಿ. ಅವರೊಂದಿಗೆ ಸಂದರ್ಶನ, 9.30 ಎಂ.ಎಸ್. ಗೋಪಾಲಕೃಷ್ಣನ್–ವಯೋಲಿನ್ ವಾದನ, 10.00 ಕಾವ್ಯವಾಚನ, ವಾಚನ– ಬಿ.ಹೆಚ್. ನಾಗರತ್ನಮ್ಮ, ವ್ಯಾಖ್ಯಾನ– ಕೃ.ಪಾ. ಮಂಜುನಾಥ್, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

ರಾಜ್ಯ ಹೆದ್ದಾರಿಗಳು ಸಂದಿಸುವಲ್ಲಿ ಮೈಸೂರು-ಬೆಂಗಳೂರು ಹೆದ್ದಾರಿ ಮಾರ್ಪಾಡಿಗೆ ಗಡ್ಕರಿಗೆ ಕೃಷ್ಣ ಪತ್ರ

ಮಂಡ್ಯ, ಜು.25– ಮಂಡ್ಯ ಜಿಲ್ಲೆಯ ನಾಲ್ಕು ರಾಜ್ಯ ಹೆದ್ದಾರಿಗಳು ಸಂದಿಸುವ ಮದ್ದೂರು ಹಾಗೂ ಎರಡು ಹೆದ್ದಾರಿಗಳು ಸಂದಿಸುವ ಮಂಡ್ಯದಲ್ಲಿ ಜನಸಂಚಾರ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ದಶಪಥ ಹೆದ್ದಾರಿ ನಿರ್ಮಾಣದಲ್ಲಿ ಮಾರ್ಪಾಡು ಮಾಡಬೇಕೆಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪತ್ರ ಬರೆದಿದ್ದಾರೆ.


ನಿತಿನ್ ಗಡ್ಕರಿ


ಎಸ್.ಎಂ.ಕೃಷ್ಣ

ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ತಮಗೆ (ಎಸ್.ಎಂ.ಕೃಷ್ಣ) ಸಲ್ಲಿಸಿರುವ ಮನವಿಯನ್ನು ಉಲ್ಲೇಖಿಸಿರುವ ಅವರು, ಮದ್ದೂರು ಬಳಿ ಮದ್ದೂರು-ಮಳವಳ್ಳಿ, ಮದ್ದೂರು-ನಾಗಮಂಗಲ, ಮದ್ದೂರು-ತುಮಕೂರು, ಮದ್ದೂರು-ಹಲಗೂರು ಹೆದ್ದಾರಿಗಳು ಸಂಪರ್ಕಿಸುತ್ತವೆ. ಅದೇ ರೀತಿ ಮಂಡ್ಯ ಬಳಿ ಮಂಡ್ಯ-ಶಿರಾ ಹಾಗೂ ಮಂಡ್ಯ-ಮೇಲುಕೋಟೆ-ಶ್ರವಣಬೆಳಗೊಳ ಹೆದ್ದಾರಿಗಳು ಸಂಪರ್ಕಿಸುತ್ತವೆ. ನಿರ್ಮಾಣವಾಗುತ್ತಿರುವ ದಶಪಥ ರಸ್ತೆಯು ಈ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನ ಹಾಗೂ ಜನರಿಗೆ ಅನುಕೂಲವಾಗುವಂತೆ ನಿರ್ಮಿಸಬೇಕಾಗುತ್ತದೆ. ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಆಡಳಿತ ವರ್ಗಕ್ಕೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಕೂಡ ಅವರು ಈ ಸಂಬಂಧ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ತಮಗೆ (ಗಡ್ಕರಿ) ಪತ್ರ ಬರೆಯುತ್ತಿರುವುದಾಗಿ ಎಸ್.ಎಂ.ಕೃಷ್ಣ ತಿಳಿಸಿದ್ದಾರೆ.

ನಿರ್ಮಾಣಗೊಳ್ಳುತ್ತಿರುವ ದಶಪಥ ರಸ್ತೆಗೆ ಜಿಲ್ಲೆಯ ಒಟ್ಟು ಇತರೆ 6 ಹೆದ್ದಾರಿಗಳ ಸಂಪರ್ಕ ಸಮರ್ಪಕವಾಗಿಲ್ಲದೇ ಇರುವುದನ್ನು ಗಮನಿಸಿದ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಎಸ್.ಎಂ.ಕೃಷ್ಣ ಅವರಿಗೆ ಮನವಿ ಸಲ್ಲಿಸಿದ್ದರು. ಈ ಮನವಿಯ ಬಗ್ಗೆ ನಿತಿನ್ ಗಡ್ಕರಿ ಅವರಿಗೆ ರವಾನಿಸುವ ಪತ್ರದಲ್ಲಿ ಎಸ್.ಎಂ.ಕೃಷ್ಣ ಉಲ್ಲೇಖಿಸಿದ್ದಾರೆ.

ಹೇಮಾವತಿ ಜಲಾಶಯಕ್ಕೆ ಸಚಿವ ಕೆ.ಗೋಪಾಲಯ್ಯ ಬಾಗಿನ

ಹಾಸನ, ಜು.25– ಹೇಮಾವತಿ ಜಲಾಶಯ ತುಂಬಿರುವ ಹಿನ್ನೆಲೆಯಲ್ಲಿ ಅಬಕಾರಿ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸೋಮವಾರ ಜಲಾಶಯಕ್ಕೆ ಬಾಗಿನ ಅರ್ಪಿಸಿದರು. ಬಳಿಕ ಮಾತನಾಡಿದ ಅವರು, ಈ ಬಾರಿ ಉತ್ತಮವಾಗಿ ಮಳೆಯಾಗಿದ್ದು ಕೆಆರ್‌ಎಸ್, ಹೇಮಾವತಿ, ಕಬಿನಿ ಸೇರಿದಂತೆ ಎಲ್ಲಾ ಜಲಾಶಯಗಳು ತುಂಬಿರುವುದು ಸಂತಸದ ವಿಷಯ ಎಂದರು.

ಶಾಸಕರಾದ ಹೆಚ್.ಕೆ.ಕುಮಾರಸ್ವಾಮಿ, ಎ.ಟಿ.ರಾಮಸ್ವಾಮಿ, ಜಿಲ್ಲಾಧಿಕಾರಿ ಆರ್.ಗಿರೀಶ್, ಜಿಪಂ ಸಿಇಓ ಕಾಂತರಾಜ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ಇಂಜಿನಿಯರ್ ಶಂಕರೇಗೌಡ, ಮುಖ್ಯ ಇಂಜಿನಿಯರ್ ಮಹೇಶ್, ಹೇಮಾವತಿ ಜಲಾಶಯ ವಿಭಾಗದ ಸೂಪರಿಂಟೆಂಡೆಂಟ್ ಇಂಜಿನಿಯರ್ ನಳಿನಿ, ಕಾರ್ಯಪಾಲಕ ಇಂಜಿನಿಯರ್ ಯೋಗೀಶ್ ಇದ್ದರು.





ಸಿದ್ದರಾಮೋತ್ಸವ ಅಗತ್ಯವಿರಲಿಲ್ಲ; ಅದಕ್ಕೆ ಬದಲು ಕಾಂಗ್ರೆಸ್ ಉತ್ಸವ ಮಾಡಬೇಕಿತ್ತು

● ಎಂಎಲ್ಸಿ ವಿಶ್ವನಾಥ್ ಅಭಿಮತ ● ಕಾಂಗ್ರೆಸ್‌ನಲ್ಲಿ ಎಂದೂ ವ್ಯಕ್ತಿ ಪೂಜೆ ನಡೆದಿಲ್ಲ

ಮೈಸೂರು,ಜು.25(ಎಂಟಿವೈ)–ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ 75ನೇ ಜನ್ಮದಿನದ ಅಂಗವಾಗಿ ನಡೆಸಲು ಉದ್ದೇಶಿಸಿರುವ ಸಿದ್ದರಾಮೋತ್ಸವದ ಅಗತ್ಯವಿರಲಿಲ್ಲ. ಅದರ ಬದಲು ಕಾಂಗ್ರೆಸ್ ಉತ್ಸವ ಮಾಡಬಹುದಾಗಿತ್ತು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು 3-4 ದಶಕಗಳ ಕಾಲ ಕಾಂಗ್ರೆಸ್‌ನಲ್ಲಿ ಇದ್ದು ಬಂದವನಾಗಿದ್ದೇನೆ. ನನ್ನ ಅನುಭವದಲ್ಲಿ ಕಾಂಗ್ರೆಸ್‌ನಲ್ಲಿ ವ್ಯಕ್ತಿ ಪೂಜೆ ನಡೆದಿರುವುದನ್ನು ಕಂಡಿರಲಿಲ್ಲ. ಆದರೆ, ಈಗ ಸಿದ್ದರಾಮೋತ್ಸವ ನಡೆಸಲಾಗುತ್ತಿದೆ. ಅದರ ಬದಲು ಕಾಂಗ್ರೆಸ್ ಉತ್ಸವ ಆಗಬೇಕು. ಇಂದಿರಾ ಗಾಂಧಿ, ಡಿ.ದೇವರಾಜ ಅರಸುರವರ ಸ್ಮರಣೆ ಮಾಡಬೇಕು. ಕಾಂಗ್ರೆಸ್‌ನಲ್ಲಿ ವ್ಯಕ್ತಿ ಪೂಜೆಗೆ ಅವಕಾಶ ಇರಬಾರದು ಎಂದು ಸಲಹೆ ನೀಡಿದರು.

ಅವನ ದಾರಿ ಅವನಿಗೆ: ಸಿದ್ದರಾಮೋತ್ಸವದ ಅಂಗವಾಗಿ ಮೈಸೂರಲ್ಲಿ ಕಾಂಗ್ರೆಸ್ ನಾಯಕರು ನಡೆಸಿದ ಪೂರ್ವಭಾವಿ ಸಭೆಯಲ್ಲಿ ಪುತ್ರ ಅಮಿತ್ ದೇವರಹಟ್ಟಿ ಪಾಲ್ಗೊಂಡಿದ್ದಕ್ಕೆ ಪ್ರತಿಕ್ರಿಯಿಸಿದ ಎ.ಹೆಚ್.ವಿಶ್ವನಾಥ್, ಅದು ಆತನ ವೈಯಕ್ತಿಕ ನಿರ್ಧಾರ. ಅವನಿಗೂ 42 ವರ್ಷ ಆಗಿದೆ, ಜಿ.ಪಂ ಸದಸ್ಯನಾಗಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನ ಸೇರಿದಂತೆ ವಿವಿಧ ಹುದ್ದೆ ನಿಭಾಯಿಸಿದ್ದಾನೆ. ಅವನಿಗೂ ಸ್ವಂತ ನಿರ್ಧಾರ ಕೈಗೊಳ್ಳುವ ಶಕ್ತಿಯಿದೆ. ಆದ್ದರಿಂದ ಆತನ ಸ್ವಂತ ನಿರ್ಧಾರದಿಂದ ಆ ಸಭೆಯಲ್ಲಿ ಪಾಲ್ಗೊಂಡಿದ್ದಾನೆ. ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಹೆಸರು ಯಾರೂ ಹೇಳಲಿಲ್ಲ: ಮೈಸೂರಿನ ಕಲಾಮಂದಿರದಲ್ಲಿ ಇತ್ತೀಚೆಗೆ ನಡೆದ ಸಿದ್ದರಾಮಯ್ಯ ಆಡಳಿತಾವಧಿ ಕುರಿತಾದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ 10-14 ಮಂದಿ ಮಾತನಾಡಿದರು. ನಾನು ಎಲ್ಲರ ಭಾಷಣ ಕೇಳಿದ್ದೇನೆ. ಆದರೆ ಅವರಲ್ಲಿ ಯಾರೊಬ್ಬರೂ ಕಾಂಗ್ರೆಸ್ ಬಗ್ಗೆ ಮಾತನಾಡಲಿಲ್ಲ. ಸ್ವತಃ ಸಿದ್ದರಾಮಯ್ಯ ಕೂಡ ಕಾಂಗ್ರೆಸ್ ಹೆಸರೇಳಲಿಲ್ಲ. ನಾಯಕತ್ವಕ್ಕೆ ವೇದಿಕೆ ಕಲ್ಪಿಸಿದ್ದೇ ಕಾಂಗ್ರೆಸ್. ಹಾಗಾಗಿ ಯಾರೂ ಕೂಡ ಕಾಂಗ್ರೆಸ್ ಬಗ್ಗೆ ಮಾತನಾಡದೇ ಇರುವುದು ವಿಷಾದನೀಯ. ಆ ಕಾರ್ಯಕ್ರಮದಲ್ಲಿ ಕೇವಲ ಸಿದ್ದರಾಮಯ್ಯರ ಪುಂಗಿ ಊದಿದರೇ ಹೊರತು, ಕಾಂಗ್ರೆಸ್‌ನ ಪುಂಗಿ ಊದಲಿಲ್ಲ ಎಂದು ವಿಶ್ವನಾಥ್ ಲೇವಡಿ ಮಾಡಿದರು.

ಜಾತಿ ರಾಜಕಾರಣ ಒಳ್ಳೆಯದ್ದಲ್ಲ

ರಾಜಕಾರಣಿಗಳು ಸೇವಕರಷ್ಟೇ. ಸೇವೆ ಮಾಡುವಾಗ ಜಾತಿ ನೋಡಬಾರದು. ಜಾತಿ ರಾಜಕಾರಣ ಒಳ್ಳೆಯದಲ್ಲ. ಕಾಂಗ್ರೆಸ್‌ನಲ್ಲಿ ಒಕ್ಕಲಿಗ ವರ್ಸಸ್ ಅಲ್ಪಸಂಖ್ಯಾತ ರಾಜಕಾರಣ ಮುನ್ನೆಲೆಗೆ ಬಂದಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಪ್ರತಿಯೊಬ್ಬರೂ ತಮ್ಮ ಸಮಾಜಕ್ಕೆ ನ್ಯಾಯ ದೊರಕಿಸಿ ಕೊಡಲು ಜಾತಿ ರಾಜಕಾರಣ ಮಾಡುವ ಅವಶ್ಯಕತೆ ಇದೆ. ಆದರೆ, ರಾಜಕಾರಣವೇ ಜಾತೀಯತೆಗೆ ಸೀಮಿತವಾಗಬಾರದು. ಎಲ್ಲ ಜಾತಿಗಳು, ಧರ್ಮೀಯರು ಬೆಂಬಲಿಸಿದರೆ ಮಾತ್ರ ರಾಜಕಾರಣ ಮಾಡಲು, ಚುನಾವಣೆಯಲ್ಲಿ ಗೆಲ್ಲಲು ಸಾಧ್ಯ. ಕರ್ನಾಟಕದಲ್ಲಿ ಹಲವಾರು ಮಹನೀಯರು, ನಾಯಕರು ಆಡಳಿತ ನಡೆಸಿದ್ದಾರೆ. ಆದರೀಗ ಜಾತಿಯ ಹೆಸರಿನಲ್ಲಿ ಸಮಾಜವನ್ನು ಒಡೆಯಲು ಮುಂದಾಗಿರುವುದು ಸರಿಯಲ್ಲ.



–ಎ.ಹೆಚ್.ವಿಶ್ವನಾಥ್, ಎಂಎಲ್‌ಸಿ

ಸಿದ್ದರಾಮಯ್ಯ ಮಾತೆತ್ತಿದರೆ, ಅನ್ನಭಾಗ್ಯದ ಬಗ್ಗೆ ಮಾತನಾಡುತ್ತಾರೆ. ಆದರೆ, ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ನಾನು ಶಿಕ್ಷಣ ಸಚಿವನಾಗಿದ್ದೆ. ಆ ವೇಳೆ ಶಾಲೆಯಲ್ಲಿ ಬಿಸಿಯೂಟ ಯೋಜನೆ ಜಾರಿಗೊಳಿಸಿದ್ದೆ. ಆ ಕಾರ್ಯಕ್ರಮದಲ್ಲಿ 85 ಲಕ್ಷ ಮಕ್ಕಳು ಬಿಸಿಯೂಟ ಸೇವಿಸುತ್ತಿದ್ದರು. ನಾವು ಯಶಸ್ವಿನಿ ಆರೋಗ್ಯ ಯೋಜನೆ ಜಾರಿಗೆ ತಂದಿದ್ದೆ. ಈಗ ಆ ಯೋಜನೆ ಸ್ಥಗಿತಗೊಳಿಸಲಾಗಿದೆ ಎಂದು ಕಿಡಿಕಾರಿದರು.

ಯಡಿಯೂರಪ್ಪ ಇಲ್ಲದ ರಾಜಕಾರಣ ಊಹೆಗೂ ಸಾಧ್ಯವಿಲ್ಲ: ಮಾಜಿ ಸಿಎಂ ಯಡಿಯೂರಪ್ಪ ಇಲ್ಲದ ಬಿಜೆಪಿಯನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ರಾಜ್ಯದಲ್ಲಿ ಬಿಜೆಪಿ ನೆಲೆಯೂರಲು ಯಡಿಯೂರಪ್ಪ ಅವರ ಶ್ರಮ ಹಾಗೂ ಕೊಡುಗೆ ಅಪಾರವಾಗಿದೆ. ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸದಿದ್ದರೂ ಪಕ್ಷಕ್ಕೆ ಅವರ ಮಾರ್ಗದರ್ಶನ ನೀಡುವ ಅವಶ್ಯಕತೆ ಇದೆ. ಹೀಗಾಗಿ ಯಡಿಯೂರಪ್ಪ ಸಕ್ರಿಯ ರಾಜಕಾರಣದಲ್ಲಿ ಮುಂದುವರಿಯಬೇಕು ಎಂದು ಒತ್ತಾಯಿಸಿದರು.

ವಿಜಯೇಂದ್ರನಿಗೆ ಟಿಕೆಟ್ ಕೇಳುವುದರಲ್ಲಿ ತಪ್ಪೇನಿದೆ: ಮುಂಬರುವ ಚುನಾವಣೆಯಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಪುತ್ರ ಬಿ.ವೈ.ವಿಜಯೇಂದ್ರ ಅವರಿಗೆ ಟಿಕೆಟ್ ಕೇಳಿರುವುದರಲ್ಲಿ ತಪ್ಪೇನಿದೆ. ಹಲವು ವರ್ಷ ಪಕ್ಷಕ್ಕಾಗಿ ದುಡಿದಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಇಷ್ಟು ದೊಡ್ಡಮಟ್ಟಕ್ಕೆ ಬೆಳೆಯಬೇಕಾದರು ಅವರ ಶ್ರಮವಿದೆ. ಹಾಗಾಗಿ ಮಗನಿಗೆ ಟಿಕೆಟ್ ಕೇಳಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮನೆಯಲ್ಲಿ ಮನೆ ಮಂದಿಯೆಲ್ಲಾ ರಾಜಕಾರಣದಲ್ಲಿದ್ದಾರೆ. ಅದನ್ನೇಕೆ ಯಾರೂ ಪ್ರಶ್ನಿಸುವುದಿಲ್ಲ. ಸತತ ಎಂಟು ಬಾರಿ ಪ್ರತಿನಿಧಿಸಿರುವ ಶಿಕಾರಿಪುರ ಕ್ಷೇತ್ರದಲ್ಲಿ ಪುತ್ರ ವಿಜಯೇಂದ್ರಗೆ ಯಡಿಯೂರಪ್ಪ ಟಿಕೆಟ್ ಕೇಳಿರುವುದರಲ್ಲಿ ತಪ್ಪೇನಿಲ್ಲ ಎಂದರು.

ಪುತ್ರೋತ್ಸವಕ್ಕೆ ರೆಡಿಯಾಗಿದ್ದಾರೆ: ರಾಜ್ಯ ರಾಜಕಾರಣದಲ್ಲಿ ಪುತ್ರೋತ್ಸವಕ್ಕೆ ಹಲವರು ರೆಡಿಯಾಗಿದ್ದಾರೆ. ಅದರ ಮುಂದುವರೆದ ಭಾಗವಾಗಿಯೇ ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಶಾಸಕರಾದ ಜಿ.ಟಿ.ದೇವೇಗೌಡ ಮತ್ತು ಸಾ.ರಾ.ಮಹೇಶ್ ಪರಸ್ಪರ ಭೇಟಿಯಾಗಿದ್ದಾರೆ. ಜೆಡಿಎಸ್‌ನಲ್ಲಿ ಪುತ್ರೋತ್ಸವಕ್ಕೆ ಎಲ್ಲ ಸಿದ್ಧತೆ ನಡೆದಿದೆ. ಇವರು ಎಷ್ಟು ದಿನ ಜೊತೆಯಲ್ಲಿರುತ್ತಾರೆ ಮುಂದೆ ನೋಡೋಣ ಎಂದರು.

ಯಾರು ಕೇಳಿದರೂ ನಾನೇ ನಾನೇ ಅಂತಿದ್ದಾರೆ: ಮೈಸೂರು ಜಿಲ್ಲೆಯ ಅಭಿವೃದ್ಧಿ ಕುರಿತಂತೆ ನಾನೇ ನಾನೇ ಅನ್ನುವವರ ಸಂಖ್ಯೆ ಹೆಚ್ಚಾಗಿದೆ. ಸಂಸದ ಪ್ರತಾಪಸಿಂಹ ಮೈಸೂರು ಮಹಾರಾಜರನ್ನು ಹೊರತುಪಡಿಸಿದರೇ ಅಭಿವೃದ್ಧಿ ಮಾಡಿದ್ದು ನಾನೇ ಎನ್ನುತ್ತಿದ್ದಾರೆ. ಇನ್ನಷ್ಟು ರಾಜಕಾರಣಿಗಳು ಕೂಡ ಅಭಿವೃದ್ಧಿ ವಿಚಾರದಲ್ಲಿ ನಾನೇ ಎನ್ನತೊಡಗಿದ್ದಾರೆ. ಕ್ರೆಡಿಟ್ ವಾರ್ ಸರಿಯಲ್ಲ. ಯಾವುದೇ ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ಎಲ್ಲರೂ ನನ್ನದು ನನ್ನದು ಎನ್ನುತ್ತಿದ್ದಾರೆ. ಸರ್ಕಾರಕ್ಕೆ ಜನರು ನೀಡುವ ತೆರಿಗೆಯಿಂದ ಖಜಾನೆಗೆ ಹಣ ಬರುತ್ತದೆ. ನಾವು ಟ್ರಸ್ಟಿಗಳಾಗಿ ಕೆಲಸ ಮಾಡುತ್ತೇವಷ್ಟೇ ಎಂದು ಸ್ವಪಕ್ಷೀಯರ ವಿರುದ್ಧ ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ಆ.21ರಂದು ರೈಲ್ವೆ ಪಿಂಚಣಿದಾರರ ವಾರ್ಷಿಕ ಮಹಾಸಭೆ

ಮೈಸೂರು,ಜು.25–ರೈಲ್ವೆ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘಟನೆಯ ವಾರ್ಷಿಕ ಸಭೆಯನ್ನು ಆ.21ರ ಭಾನುವಾರ ಬೆಳಗ್ಗೆ 10.30ಕ್ಕೆ ಒಂಟಿಕೊಪ್ಪಲಿನಲ್ಲಿರುವ ರೈಲ್ವೆ ಕಲ್ಯಾಣ ಮಂಟಪದಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಈ ಸಭೆಯಲ್ಲಿ 2022 ಇಸವಿಯಲ್ಲಿ 80 ವರ್ಷ ತುಂಬಿರುವ ಸದಸ್ಯರನ್ನು ಸನ್ಮಾನಿಸಲಾಗುವುದು. ಅಲ್ಲದೆ ಪ್ರಸ್ತುತ ವರ್ಷ ಎಸ್‌ಎಸ್‌ಎಲ್‌ಸಿ/ಪಿಯುಸಿ ಪರೀಕ್ಷೆಯಲ್ಲಿ ಶೇ.80 ಹಾಗೂ ಮೇಲ್ಪಟ್ಟು ಅಂಕ ಗಳಿಸಿರುವ ಸದಸ್ಯರ ಆಯ್ದ ಮಕ್ಕಳು ಮತ್ತು ಮೊಮ್ಮಕ್ಕಳನ್ನೂ ಸನ್ಮಾನಿಸಲಾಗುವುದು. ಆಸಕ್ತರು ತಮ್ಮ ಮಕ್ಕಳ/ಮೊಮ್ಮಕ್ಕಳ ಅಂಕಪಟ್ಟಿ ಹಾಗೂ ಗುರುತು ದೃಢಪಡಿಸುವ ದಾಖಲೆಗಳನ್ನು 5-8-2022ರೊಳಗೆ, ಸಂಘದ ಕೆಲಸದ ದಿನಗಳಲ್ಲಿ (ಸೋಮವಾರ, ಬುಧವಾರ ಮತ್ತು ಶುಕ್ರವಾರ) ತಲುಪಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವೀರಶೈವ ಲಿಂಗಾಯತ ವಧುವರರ ಸಮಾವೇಶ

ಮೈಸೂರು,ಜು.25–ವೀರಶೈವ ಲಿಂಗಾಯತ ವಧುವರರ ಮಾಸಿಕ ಮುಖಾಮುಖಿ ಸಮಾವೇಶ ಜು.31ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಬೆಂಗಳೂರಲ್ಲಿ ನಡೆಯಲಿದೆ. ಆಸಕ್ತರು ಮಾಹಿತಿಗೆ 080-2226923 ಸಂಪರ್ಕಿಸಿ.

ರೈಲಿಗೆ ಸಿಲುಕಿ ಅಪರಿಚಿತ ಸಾವು

ಮೈಸೂರು,ಜು.25–ಚಾಮರಾಜನಗರ-ನಂಜನಗೂಡು ರೈಲು ನಿಲ್ದಾಣಗಳ ನಡುವೆ 45 ವರ್ಷದ ವ್ಯಕ್ತಿ ರೈಲು ಗಾಡಿಗೆ ಸಿಲುಕಿ ಮೃತಪಟ್ಟಿದ್ದು, ಈತನ ವಾರಸುದಾರರಿದ್ದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂಖ್ಯೆ: 0821-2516579 ಸಂಪರ್ಕಿಸುವುದು.

ವ್ಯಕ್ತಿ ನಾಪತ್ತೆ



ಮೈಸೂರು, ಜು. 25– ಮೈಸೂರು ಲಷ್ಕರ್ ಮೊಹಲ್ಲಾದ ಖಾಕಿಜಾ ಮಸೀದಿಯಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದ ಮೇಟಗಳ್ಳಿ ಬಿಎಂಶ್ರೀ ನಗರದ ಅಬ್ದುಲ್ ರಹೀಂ ನಾಪತ್ತೆಯಾಗಿದ್ದು, ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಲಷ್ಕರ್ ಪೊಲೀಸ್ ಠಾಣೆ-2418107, 2418307, ಪೊಲೀಸ್ ಆಯುಕ್ತರು-2418100, ಮೈಸೂರು ನಗರ ಕಂಟ್ರೋಲ್ ರೂಂ- 2418339, 2418340 ಸಂಪರ್ಕಿಸಬಹುದು.

ಮಂಡ್ಯ ಜೈಲ್ ಒಳಗೆ ಗಾಂಜಾ, ಮೊಬೈಲ್ ಎಸೆದವರ ಬಂಧನ

ಮಂಡ್ಯ, ಜು.25– ಮಂಡ್ಯ ಕೇಂದ್ರ ಕಾರಾಗೃಹದಲ್ಲಿ ಗಾಂಜಾ ಮತ್ತು ಮೊಬೈಲ್‌ಗಳು ಪತ್ತೆಯಾಗಿವೆ. ಅಲ್ಲದೆ ಹೊರಗಿನಿಂದ ಜೈಲಿನೊಳಗೆ ಗಾಂಜಾ ಮತ್ತು ಮೊಬೈಲ್ ಎಸೆಯುತ್ತಿದ್ದ ಇಬ್ಬರನ್ನು ಬಂಧಿಸಲಾಗಿದೆ. ಜೈಲಿನ ಒಳಗೆ 2 ಮೊಬೈಲ್ ದೊರೆತರೆ, ಹೊರಗಿನಿಂದ ಎಸೆಯಲು ನಿಂತಿದ್ದ ವ್ಯಕ್ತಿ ಬಳಿ 6 ಮೊಬೈಲ್‌ಗಳು ದೊರೆತಿವೆ.



ವಿವರ: ಕಾರಾಗೃಹದ ಕಾಂಪೌಂಡ್ ಹೊರಗಿನಿಂದ ಒಳಭಾಗಕ್ಕೆ ನಿಷೇಧಿತ ವಸ್ತುಗಳನ್ನು ಎಸೆಯಲಾಗುತ್ತಿದೆ ಎಂಬ ಕಾರಣದಿಂದಾಗಿ ಅಧಿಕಾರಿಗಳು ಆಗಿಂದ್ದಾಗ್ಗೆ ಜೈಲಿನ ಹೊರಗೂ ಪಹರೆ ತಿರುಗುತ್ತಾರೆ. ಜು.23ರಂದು ಬೆಳಗ್ಗೆ 10.15ರ ಸುಮಾರಿನಲ್ಲಿ ಕಾರಾಗೃಹದ ವೀಕ್ಷಕ ಕಾರ್ತಿಕ್ ಅವರು ಪಹರೆ ಮಾಡುತ್ತಿದ್ದಾಗ ಮಂಡ್ಯ ಜಿಲ್ಲೆ ಹಾಲಹಳ್ಳಿಕೆರೆ ಗ್ರಾಮದ ಎಸ್. ಚಂದ್ರಶೇಖರ್ ಎಂಬಾತ ಸಿಕ್ಕಿಬಿದ್ದಿದ್ದಾನೆ. ಆತನನ್ನು ಹಿಡಿದು ವಿಚಾರಿಸಿದಾಗ ಕಾರಾಗೃಹದೊಳಗೆ ಮೊಬೈಲ್ ಮತ್ತು ಗಾಂಜಾ ಎಸೆದಿದ್ದಾಗಿ ತಿಳಿಸಿದ್ದಾನೆ. ಇದೇ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಹೊಸಹಳ್ಳಿ ಗ್ರಾಮದ ಸತೀಶ್‌ಚಂದ್ರ ಎಂಬಾತನನ್ನು ತಡೆದು ಪರಿಶೀಲಿಸಿದಾಗ ಆತನ ಬಳಿ ಪ್ಲಾಸ್ಟಿಕ್ ಕವರ್‌ನಲ್ಲಿ ಸುತ್ತಿದ್ದ ಗಾಂಜಾ ಮತ್ತು 5 ಸ್ಯಾಮ್‌ಸಂಗ್ ಮೊಬೈಲ್ ಹಾಗೂ ಒಂದು ನೋಕಿಯಾ ಮೊಬೈಲ್ ಪತ್ತೆಯಾಗಿದೆ.

ಇದಕ್ಕೆ ಸಂಚು ಮಾಡಿದ್ದ ಕೈದಿಗಳು ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲು

ಇವರಿಬ್ಬರನ್ನು ವಿಚಾರಣೆಗೊಳಪಡಿಸಿದಾಗ ಕಾರಾಗೃಹದಲ್ಲಿರುವ ವಿಚಾರಣಾಧೀನ ಖೈದಿಗಳಾದ ಧನುಷ್ ಮತ್ತು ಸ್ವರೂಪ್‌ಗೌಡ ಎಂಬುವರು ತಮಗೆ ಕರೆ ಮಾಡಿ ಮೊಬೈಲ್ ಹಾಗೂ ಗಾಂಜಾ ಕಾರಾಗೃಹದೊಳಗೆ ಎಸೆಯುವಂತೆ ತಿಳಿಸಿದ್ದರು. ಅದಕ್ಕಾಗಿ ಅವರು ನಮಗೆ ಹಣವನ್ನು ಸಂದಾಯವಾಗುವಂತೆ ನೋಡಿಕೊಳ್ಳುತ್ತಿದ್ದರು ಎಂದು ತಿಳಿಸಿದ ಮೇರೆಗೆ ಅಧಿಕಾರಿಗಳು ಈ ಇಬ್ಬರೂ ಕೈದಿಗಳಿರುವ ಎ ಬ್ಯಾರಕ್‌ನ ಎ-2 ಕೊಠಡಿ ತಪಾಸಣೆ ನಡೆಸಿದಾಗ ಕೊಠಡಿಯ ಶೌಚಾಲಯದ ಬಳಿ 2 ಮೊಬೈಲ್ ಪತ್ತೆಯಾಗಿದೆ. ಈ ಸಂಬಂಧ ವಿಚಾರಣಾಧೀನ ಕೈದಿಗಳಾದ ಧನುಷ್, ಸ್ವರೂಪ್‌ಗೌಡ ಹಾಗೂ ಕಾರಾಗೃಹದೊಳಗೆ ಗಾಂಜಾ ಮತ್ತು ಮೊಬೈಲ್ ಎಸೆಯುತ್ತಿದ್ದ ಚಂದ್ರಶೇಖರ್, ಸತೀಶ್‌ಚಂದ್ರ ವಿರುದ್ಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ಹಂಪ್ಸ್‌ನಲ್ಲಿ ವೇಗ ತಗ್ಗಿಸಿದ ಇನ್ನೋವಾಗೆ ಕಾರು ಡಿಕ್ಕಿ; ಓರ್ವ ಸಾವು

ಚನ್ನರಾಯಪಟ್ಟಣ,ಜು.25–ರಸ್ತೆ ಹಂಪ್ಸ್‌ನಲ್ಲಿ ವೇಗ ಕಡಿಮೆ ಮಾಡಿದ ಕಾರಿಗೆ ಹಿಂಬದಿಯಿಂದ ಮತ್ತೊಂದು ಕಾರು ಡಿಕ್ಕಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿದ ಘಟನೆ ಚನ್ನರಾಯಪಟ್ಟಣ ತಾಲೂಕು ಬರಗೂರು ಹ್ಯಾಂಡ್‌ಪೋಸ್ಟ್‌ನಲ್ಲಿ ಸಂಭವಿಸಿದೆ.

ಕೋಲಾರ ತಾಲೂಕು ಹಾರೋಹಳ್ಳಿ ಗ್ರಾಮದ ಹೆಚ್.ಪಿ. ಬಾಬು (43) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರ ಇಬ್ಬರು ಮಕ್ಕಳು ಮೂಡಬಿದರೆಯ ಆಳ್ವಾಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅವರನ್ನು ಭೇಟಿ ಮಾಡಲು ಬಾಬು ಪತ್ನಿ ಲೀಲಾವತಿ ಜೊತೆ ಸ್ವಿಫ್ಟ್ ಡಿಸೈರ್ (ಕೆಎ05, ಎಂಕೆ0164) ಕಾರಿನಲ್ಲಿ ಜುಲೈ 23ರಂದು ರಾತ್ರಿ 9.30ರ ಸುಮಾರಿನಲ್ಲಿ ಹಾರೋಹಳ್ಳಿಯಿಂದ ಹೊರಟಿದ್ದರು. ಕಾರನ್ನು ಎಸ್.ಎಂ. ನಾಗೇಂದ್ರ ಎಂಬಾತ ಚಾಲನೆ ಮಾಡುತ್ತಿದ್ದ.

ಜು.24ರಂದು ಬೆಳಗಿನ ಜಾವ 1.30ರ ಸುಮಾರಿನಲ್ಲಿ ಚನ್ನರಾಯಪಟ್ಟಣ ತಾಲೂಕು ಬರಗೂರು ಹ್ಯಾಂಡ್‌ಪೋಸ್ಟ್ ಬಳಿ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ರಸ್ತೆ ಹಂಪ್‌ನಲ್ಲಿ ಮುಂಬದಿ ಚಲಿಸುತ್ತಿದ್ದ ಇನ್ನೋವಾ ಕಾರ (ಕೆಎ20, ಝಡ್3255)ನ್ನು ಅದರ ಚಾಲಕ ವೇಗ ಕಡಿಮೆ ಮಾಡಿದಾಗ ಬಾಬು ಪ್ರಯಾಣಿಸುತ್ತಿದ್ದ ಸ್ವಿಫ್ಟ್ ಕಾರು ಅದಕ್ಕೆ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡ ಬಾಬು ಅವರನ್ನು ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಈ ಸಂಬಂಧ ಚನ್ನರಾಯಪಟ್ಟಣ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕೆಜಿ ಕೊಪ್ಪಲಲ್ಲಿ ರಸ್ತೆ, ಚರಂಡಿ ಕಾಮಗಾರಿಗೆ ಭೂಮಿ ಪೂಜೆ

ಮೈಸೂರು,ಜು.25(ಆರ್‌ಕೆ)–ಮೈಸೂರಿನ ಕೆಜಿ ಕೊಪ್ಪಲಿನಲ್ಲಿ ಕೈಗೊಂಡಿರುವ 1.53 ಕೋಟಿ ರೂ. ಅಂದಾಜು ವೆಚ್ಚದ ವಿವಿಧ ರಸ್ತೆಗಳು ಹಾಗೂ ಚರಂಡಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು ಮಹಾನಗರ ಪಾಲಿಕೆಯ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಕೆಜಿ ಕೊಪ್ಪಲಿನ ರಸ್ತೆಗಳು ಹಾಗೂ ಮಳೆ ನೀರು ಚರಂಡಿ ಕಾಮಗಾರಿ ಆರಂಭಿಸಲಾಗಿದ್ದು, 42ನೇ ವಾರ್ಡಿನಲ್ಲಿ ಹಲವು ಅಭಿವೃದ್ಧಿ ಕೆಲಸಗಳಿಗೂ ಚಂದ್ರಮೌಳೇಶ್ವರ ದೇವಸ್ಥಾನದ ಬಳಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ನಾಗೇಂದ್ರ ತಿಳಿಸಿದರು. ಕಾರ್ಪೊರೇಟರ್ ಶಿವಕುಮಾರ್, ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಇಂಜಿನಿಯರ್ ವೆಂಕಟೇಶ್, ಮುಖಂಡರಾದ ಶಿವಕುಮಾರ್, ಪುನೀತ್, ರಮೇಶ್, ದೇವರಾಜ್, ತನುಜಾ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ರುಡ್‌ಸೆಟ್ ಸಂಸ್ಥೆಯಲ್ಲಿ ಸ್ವ-ಉದ್ಯೋಗ ವಿಚಾರ ಸಂಕಿರಣ

ಮೈಸೂರು,ಜು.25(ಆರ್‌ಕೆ)–ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್‌ನಿಂದ ಮೈಸೂರಿನ ಹಿನಕಲ್ ಬಳಿ ಹುಣಸೂರು ರಸ್ತೆಯಲ್ಲಿರುವ ರುಡ್‌ಸೆಟ್ ಸಂಸ್ಥೆಯಲ್ಲಿ ಸಿಡ್ಬಿ ಸಮೃದ್ಧಿ ಸ್ವ-ಉದ್ಯೋಗ ಕುರಿತ ವಿಚಾರ ಸಂಕಿರಣ ನಡೆಯಿತು.



ಸ್ವ-ಸಹಾಯ ಸಂಘದ ಸದಸ್ಯರನ್ನು ತರಬೇತಿ ನೀಡಿ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಸೋಮವಾರ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಮೈಸೂರು ಪ್ರಾದೇಶಿಕ ವಿಭಾಗದ ನಿರ್ದೇಶಕ ಪಿ.ಗಂಗಾಧರ ರೈ ಉದ್ಘಾಟಿಸಿ, ನಿರುದ್ಯೋಗಿ ಮಹಿಳೆಯರು ಹಾಗೂ ಪುರುಷರಿಗೆ ಸಂಸ್ಥೆ ನೀಡುತ್ತಿರುವ ತರಬೇತಿ, ನೆರವಿನ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಿದರು.

ಹಿನಕಲ್ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೊನ್ನಪ್ಪ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಎಂ.ಲಕ್ಷ್ಮಣ್, ಎನ್.ಶಕುಂತಳಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಬೆಲವತ್ತ ಗ್ರಾಮ ಅಭಿವೃದ್ಧಿಗೆ ಶೀಘ್ರವೇ ಚಾಲನೆ

● ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ ● ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ



ಮೈಸೂರು,ಜು.25–ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಬೆಲವತ್ತ ಗ್ರಾಮದ ಸಮಗ್ರ ಅಭಿವೃದ್ಧಿ ನಿಟ್ಟಿನಲ್ಲಿ ಶೀಘ್ರದಲ್ಲೇ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಗ್ರಾಮದಲ್ಲಿ 75 ಲಕ್ಷ ರೂ. ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ನಂತರ ನಾಡಪ್ರಭು ಕೆಂಪೇಗೌಡರ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಾಕಿ ಒಳಚರಂಡಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ತಲಾ 1 ಕೋಟಿ ರೂ. ಅನುದಾನ ನೀಡಲಾಗಿದೆ. ಈ ಎರಡೂ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುವುದು ಎಂದರು.

ಗ್ರಾಮದ ಎಲ್ಲಾ ವರ್ಗ ಹಾಗೂ ಜಾತಿಯವರು ಸೇರಿ ಕೆಂಪೇಗೌಡರ ಜಯಂತಿ ಆಚರಿಸುತ್ತಿರುವುದು ಸಂತಸದ ವಿಚಾರ. ಈ ಕಾರ್ಯಕ್ರಮ ಸಮಾಜಕ್ಕೆ ಮಾದರಿ. ಬೆಂಗಳೂರು ನಗರವನ್ನು ವೈಜ್ಞಾನಿಕವಾದ ಬೆಳೆಸಬೇಕೆಂಬ ಮಹದಾಕಾಂಕ್ಷೆ ಹೊಂದಿದ್ದ ಕೆಂಪೇಗೌಡರು, ಕೃಷಿ ಚಟುವಟಿಕೆ ಹಾಗೂ ಕುಡಿಯುವ ನೀರು ಕಲ್ಪಿಸುವ ಸದುದ್ದೇಶದಿಂದ ಸಾಕಷ್ಟು ಶ್ರಮಿಸಿದರು. ಧರ್ಮಾಂಬುಧಿ, ಕೆಂಪಾಂಬುಧಿ, ಸಂಪಂಗಿರಾಮನ ಕೆರೆ, ಚೆನ್ನಮ್ಮನ ಕೆರೆ, ಹಲಸೂರು ಕೆರೆ, ಮತ್ತಿಕೆರೆ ಹೀಗೆ ನಗರದೆಲ್ಲೆಡೆ ಕೆರೆಗಳನ್ನು ನಿರ್ಮಿಸಿ 'ಸಾವಿರ ಕೆರೆಗಳ ನಾಡ'ನ್ನಾಗಿ ಮಾಡಿದರು ಎಂದು ಜಿ.ಟಿ.ದೇವೇಗೌಡರು ಸ್ಮರಿಸಿದರು.

ವ್ಯಾಪಾರ ವಹಿವಾಟು ಹಾಗೂ ಕಸುಬುಗಳನ್ನು ಆಧರಿಸಿದ ದೊಡ್ಡಪೇಟೆ, ಚಿಕ್ಕಪೇಟೆ, ತಿಗಳರ ಪೇಟೆ, ಕುರುಬರ ಪೇಟೆ, ಅರಳೇಪೇಟೆ, ಬಳೇಪೇಟೆ, ತರಗುಪೇಟೆ, ಅಕ್ಕಿಪೇಟೆ, ರಾಗಿಪೇಟೆ, ಕುಂಬಾರರ ಪೇಟೆ, ನಗರ್ತರ ಪೇಟೆ, ಗಾಣಿಗರ ಪೇಟೆ, ಮಡಿವಾಳ ಪೇಟೆ, ಉಪ್ಪಾರ ಪೇಟೆ ಹೀಗೆ ಹಲವು ಪೇಟೆಗಳನ್ನು ನಿರ್ಮಿಸಿದ್ದರು. ಕೆಂಪೇಗೌಡರ ಆದರ್ಶವನ್ನು ಅನುಸರಿಸಿದರೆ ಸಮಾಜದಲ್ಲಿ ಸಾಕಷ್ಟು ಸುಧಾರಣೆ ಸಾಧ್ಯವಿದೆ ಎಂದರು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಮಾತನಾಡಿ, ವಿಶ್ವ ಭೂಪಟದಲ್ಲಿ ಬೆಂಗಳೂರು ಪ್ರಸಿದ್ಧಿ ಪಡೆಯಲು ಕೆಂಪೇಗೌಡರ ದೂರದೃಷ್ಟಿತ್ವವೇ ಕಾರಣ. ಅವರು ಯಾವುದೇ ಸಮಾಜ, ಜಾತಿ, ಧರ್ಮಕ್ಕೆ ಸೀಮಿತವಾಗದೆ ಎಲ್ಲಾ ವರ್ಗದ ಜನರಿಗಾಗಿ ದುಡಿದರು ಎಂದು ಹೇಳಿದರು. ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ದಿನೇಶ್, ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಇಂದು ಸಂಗೀತ ಸಾಮ್ರಾಟ್ ಡಾ.ಮಹಮದ್ ರಫಿ ರಸಮಂಜರಿ

ಮೈಸೂರು,ಜು.25–ನಗರದ ನಾದಬ್ರಹ್ಮ ವಾಸುದೇವಾಚಾರ್ಯ ಸಂಗೀತ ಸಭಾಂಗಣದಲ್ಲಿ ದಿ.26ರಂದು ಮಂಗಳವಾರ ಸಂಜೆ 6 ಗಂಟೆಗೆ ಸಂಗೀತ ಸಾಮ್ರಾಟ್ ಡಾ.ಮಹಮದ್ ರಫಿ ಹಾಗೂ ಲತಾ ಮಂಗೇಶ್ಕರ್ ಅವರ ಚಲನಚಿತ್ರ ಗೀತೆಗಳ ಆಯ್ದ ಸುಪ್ರಸಿದ್ಧ ಗೀತೆಗಳನ್ನು ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಗಾಯಕರಾಗಿ ಸುಪ್ರಸಿದ್ಧ ಗಾಯಕರಾಗಿ ಡಾ.ಪ್ರೀತಂ ರಾಘವೇಂದ್ರ, ಜ್ಯೂನಿಯರ್ ರಫಿ ಎಂದೇ ಖ್ಯಾತರಾದ ರಾಘವೇಂದ್ರ ರತ್ನಾಕರ್ ಹಾಗೂ ಕು.ಶ್ರೇಷ್ಠಾ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮೇಲುಕೋಟೆ ವೆಂಗೀಮಠದ ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ಡಾ.ರಘುರಾಂ ಕೆ.ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಾಹಿತಿಗಳಾದ ಡಾ.ಕೆ.ಲೀಲಾಪ್ರಕಾಶ್, ಉದ್ಯಮಿ ರವಿಗೌಡ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯಂ, ಮುಖಂಡ ನವೀನ್‌ಕುಮಾರ್ ಕೆ.ಎಂ., ಮುಕ್ತಕ ಅಕಾಡೆಮಿಯ ಎಸ್.ರಾಮಪ್ರಸಾದ್ ಹಾಗೂ ಕವಯತ್ರಿ ಲತಾಮೋಹನ್ ಭಾಗವಹಿಸಲಿದ್ದಾರೆ.


ರಾಘವೇಂದ್ರ ರತ್ನಾಕರ್ ಡಾ.ಪ್ರೀತಂ ರಾಘವೇಂದ್ರ ಕು.ಶ್ರೇಷ್ಠಾ


ಡಾ.ಮಹಮದ್ ರಫಿ ಲತಾ ಮಂಗೇಶ್ಕರ್

ಕಾರ್ಯಕ್ರಮದಲ್ಲಿ ಸಂಗೀತ ಸಾಮ್ರಾಟ್ ಮಹಮದ್ ರಫಿ ಹಾಗೂ ಲತಾ ಮಂಗೇಶ್ಕರ್ ಅವರ ಸುಪ್ರಸಿದ್ಧ ಗೀತೆಗಳಾದ 'ಮೇರೆ ಮೆಹೆಬೂಬುತುಜೇ', 'ರಾಹಿಮನ್‌ವಾದುದುಖಿಕೆ ಚಿಂತಾ ದೋಸ್ತಿ' 'ಲಗ್‌ಜಾಗಲೆ', 'ನೀನೆಲ್ಲಿ ನಡೆವೆ ದೂರ', 'ತೇರೆ ಮೇರೆ ಸಪ್ನೆ', 'ತೇರಿ ಬಿಂದಿಯಾರೆ', 'ಕ್ಯಾಹುವಾ ತೇರಾ ವಾದಾ' ಮುಂತಾದ ಗೀತೆಗಳನ್ನು ಹಾಡಲಿದ್ದಾರೆ. ರಸಮಂಜರಿ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	124.72 ಅಡಿ
ಒಳಹರಿವು	13530 ಕ್ಯೂಸೆಕ್
ಹೊರಹರಿವು	12055 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2282.28 ಅಡಿ
ಒಳ ಹರಿವು	15786 ಕ್ಯೂಸೆಕ್
ಹೊರ ಹರಿವು	15683 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2856.38 ಅಡಿ
ಒಳ ಹರಿವು	4137 ಕ್ಯೂಸೆಕ್
ಹೊರ ಹರಿವು	2800 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಸೋಮವಾರ	2922 ಅಡಿ
ಒಳ ಹರಿವು	5214 ಕ್ಯೂಸೆಕ್
ಹೊರ ಹರಿವು	11300 ಕ್ಯೂಸೆಕ್

ನಕ್ಕರೆ ಅದೇ ಸ್ವರ್ಗ

ಆತ : "ನನ್ನ ಹೆಂಡತಿ ತುಂಬಾ ಆಶಾವಾದಿ"
ಈತ : "ಹೌದಾ! ಒಂದು ಉದಾಹರಣೆ ಕೊಡು"
ಆತ : "ಮುಂದಿನ ಜನ್ಮದಲ್ಲಿ ಒಳ್ಳೇ ಗಂಡನನ್ನು ಕರುಣಿಸು ದೇವರೇ ಅಂತಾ ಅವಳು ಈಗ್ಲಿಂದಾನೆ ಉಪವಾಸ, ವ್ರತ, ಪೂಜೆ, ಪುನಸ್ಕಾರದಲ್ಲಿ ತೊಡಗಿದ್ದಾಳೆ"

ಮೈಸೂರು ಮಿತ್ರ

ಮಂಗಳವಾರ, 26 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜೀವನದ ಉದ್ದೇಶ ಚೆನ್ನಾಗಿ ಬಾಳುವುದು – ಟಾಲ್‌ಸ್ಟಾಯ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅನ್ನವಿದ್ದರೆ ಸಾರಿಲ್ಲ, ಸಾರಿದ್ದರೆ ಅನ್ನವಿಲ್ಲ

ನಿಮ್ಮ ಪತ್ರಗಳು

ಕರ್ತವ್ಯ ನಿರ್ವಹಿಸದೆ ಪಗಾರ ಪಡೆಯುವುದು ನೈತಿಕತೆಯಲ್ಲ!

ಮಾನ್ಯರೆ,

ಭ್ರಷ್ಟರೇ ಇಂದಿನ ಸಮಾಜದಲ್ಲಿ ತುಂಬಿ ತುಳುಕುತ್ತಿರುವ ಕಾಲಘಟ್ಟದಲ್ಲಿ, ಹಣ ಎಂದರೆ ಸತ್ತ ಹೆಣವು ಬಾಯಿ ಬಿಡುತ್ತದೆ ಎನ್ನುವ ಮಾತೇ ಇದೆ. ಇಂದಿನ ಸಮಾಜದಲ್ಲಿ ಹಣಕ್ಕಾಗಿ ದರೋಡೆ, ಕೊಲೆ, ಸುಲಿಗೆ, ತಾಂಡವವಾಡುತ್ತಿದೆ ಅನೇಕ ಇಲಾಖೆಗಳಲ್ಲಿ ಅಧಿಕಾರಿಗಳಿಗೆ ಲಂಚ ಕೊಡದಿದ್ದರೆ ಕೆಲಸಗಳೇ ಆಗುವುದಿಲ್ಲ. ಭ್ರಷ್ಟಾಚಾರವೆನ್ನುವುದು ಕೆನ್ನಾಲಿಗೆಯಂತೆ ಹಬ್ಬುತ್ತಿರುವ, ದುಡ್ಡೇ ದೊಡ್ಡಪ್ಪ ದುಡ್ಡಿನಿಂದಲೇ ಎಲ್ಲವನ್ನೂ ಮಾನದಂಡದ ಮೂಲಕ ಅಳೆಯುವ ದಿನಗಳು, ಮನುಷ್ಯನಿಂದಲೇ ತಯಾರಾದ ಹಣವು ಮನುಷ್ಯನ ಎಷ್ಟೋ ಸಂಬಂಧಗಳನ್ನು ಹಾಳು ಮಾಡುತ್ತಾ ಕೊಲೆ ಮಾಡುವ ಮಟ್ಟಕ್ಕೆ ಅನೇಕ ಘಟನೆಗಳು ಪ್ರಸ್ತುತ ದಿನಗಳಲ್ಲಿ ನಮ್ಮ ಕಣ್ಣ ಮುಂದೆಯೇ ರಾರಾಜಿಸುತ್ತಿವೆ. ಆಸ್ಪತ್ರೆಗಳಲ್ಲಿ ಹಣ ಕಟ್ಟದಿದ್ದರೆ ಹೆಣವನ್ನು ಕೂಡ ವಾಪಸ್ ಕೊಡುವುದಿಲ್ಲ. ಅನೇಕ ಸರ್ಕಾರಿ ಇಲಾಖೆಗಳಲ್ಲಿ ಸುಮ್ಮನೆ ಕಾಲ ಕಳೆದು ಅದೆಷ್ಟೋ ನೌಕರರು ಪಗಾರವನ್ನು ತಮ್ಮ ಜೇಬಿಗಿಳಿಸಿಕೊಳ್ಳುವ ಇಂತಹ ದಿನಗಳಲ್ಲಿ ಬಿಹಾರದ ಮುಜಾಫರ್ ಪುರದ ನಿತೀಶ್ವರ ಕಾಲೇಜಿನ ಹಿಂದಿ ಪ್ರಾಧ್ಯಾಪಕರಾದ ಲಲಲ್ ಕುಮಾರ ಅವರು, ತರಗತಿಗೆ ಯಾರೊಬ್ಬರೂ ವಿದ್ಯಾರ್ಥಿಗಳು ಬರುತ್ತಿಲ್ಲ ಎಂದು 32 ತಿಂಗಳ 24 ಲಕ್ಷ ರೂಗಳನ್ನು ಕಾಲೇಜಿಗೆ ಹಿಂದಿರುಗಿಸಿರುವುದು, ದೇಶದ ಕೋಟ್ಯಾಂತರ ಮಂದಿಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಮಕ್ಕಳಿಗೆ ಪಾಠ ಪ್ರವಚನಗಳನ್ನು ಮಾಡದೆ ಸಂಬಳ ಪಡೆಯುವುದು ನನಗೆ ಮನಸ್ಸು ಒಪ್ಪುತ್ತಿಲ್ಲ. ಬೋಧಿಸದೆ ಸಂಬಳ ಪಡೆಯುವುದು ನೈತಿಕತೆ ಅನ್ನಿಸುವುದಿಲ್ಲ ಎಂಬುದು ಇವರ ವಾದವಾಗಿದ್ದು, ಇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾಲಹರಣ ಮಾಡಿ ಸಂಬಳ ಪಡೆಯುವ ಇತರ ನೌಕರ ವರ್ಗದವರಿಗೆ ಸ್ಫೂರ್ತಿ ಮತ್ತು ಮಾದರಿಯಾಗಿದ್ದಾರೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಚರಂಡಿ ಸರಿಪಡಿಸಿ

ಮಾನ್ಯರೆ,

ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ಮಲಿಯೂರು ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ತುಂಬಾ ಹದಗೆಟ್ಟಿದೆ. ನಿಂತ ನೀರು ನಿಂತಲ್ಲಿಯೇ ನಿಂತಿದೆ. ಇದರಿಂದ ಜನರಿಗೆ ಮತ್ತು ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಈ ವಿಚಾರವನ್ನು ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಈ ವ್ಯವಸ್ಥೆಯನ್ನು ಬೇಗ ಬಗೆಹರಿಸಬೇಕೆಂದು ಮನವಿ.

– ವಿನೋದ್ ಎನ್., ಮಲಿಯೂರು, ನರಸೀಪುರ ತಾ.

ಗ್ರಾಮ ಒನ್ ಕಾರ್ಯರೂಪಕ್ಕೆ ಬರಲಿ

ಮಾನ್ಯರೆ,

ಗ್ರಾಮೀಣ ಭಾಗದ ಜನರು ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೆ ಅಲೆಯುವುದನ್ನು ತಪ್ಪಿಸಲು ರಾಜ್ಯ ಸರಕಾರವು ಕಳೆದ ವರ್ಷ– 'ಗ್ರಾಮ ಒನ್' ಕೇಂದ್ರ ಸ್ಥಾಪಿಸುವ ಯೋಜನೆ ಜಾರಿ ಮಾಡಿತು. ಆದರೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಓ)ಗಳ ನಿರ್ಲಕ್ಷ್ಯದಿಂದಾಗಿ ರಾಜ್ಯದ ಹಲವು ಪಂಚಾಯಿತಿಗಳಲ್ಲಿ ಈ ಯೋಜನೆ ಕಾರ್ಯರೂಪಕ್ಕೆ ಬಾರದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ಸಕಾಲ, ಮಾಹಿತಿ ಹಕ್ಕು, ಮುಖ್ಯಮಂತ್ರಿಗಳ ಪರಿಹಾರ ನಿಧಿ, ಸಣ್ಣ–ಬ್ಯಾಂಕಿಂಗ್ ಸೇವೆಗಳು ಸೇರಿದಂತೆ 750ಕ್ಕೂ ಹೆಚ್ಚು ಸೇವೆಗಳು ಈ ಯೋಜನೆ ಅಡಿಯಲ್ಲಿ ಗ್ರಾಮೀಣ ಮಟ್ಟದಲ್ಲಿ ದೊರೆಯಲಿವೆ. ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಲಿದೆ. ಗ್ರಾಮಸ್ಥರ ಅತ್ಯಾವಶ್ಯಕ ಸೇವೆಗಳನ್ನು ಪೂರೈಸುವ ಮಹತ್ತರ ಯೋಜನೆಯಾಗಿದೆ. ಹೀಗಾಗಿ ಆಯಾ ತಾಲೂಕು ದಂಡಾಧಿಕಾರಿಗಳು ಪ್ರತಿ ಗ್ರಾಮ ಪಂಚಾಯಿತಿಗೆ ಈ ಯೋಜನೆ ಅಳವಡಿಕೆ ಕುರಿತು ಖಡಕ್ ಆದೇಶ ನೀಡುವುದು ಸೂಕ್ತ.

– ಅಭಿನಿತ್ ಗೌಳಿ, ಮಹಾರಾಜ ಕಾಲೇಜು, ಮೈಸೂರು.

ನರೇಗಾ ಕೂಲಿಗಿಂತಲೂ ಅತಿಥಿ ಶಿಕ್ಷಕರ ವೇತನ ಕಮ್ಮಿ!

ಮಾನ್ಯರೇ

ರಾಜ್ಯದಲ್ಲಿ ನರೇಗಾ ಕೂಲಿಗಿಂತಲೂ ಕಡಿಮೆ ವೇತನಕ್ಕೆ ಅತಿಥಿ ಶಿಕ್ಷಕರು ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದೊಂದು ರೀತಿ ದಯನೀಯ ಪರಿಸ್ಥಿತಿ. ಇದನ್ನು ನೋಡಿದರೆ ಹಲವು ವರ್ಷ ಶ್ರಮಪಟ್ಟು ಓದಿ ಬಿಎ, ಬಿಇಡಿ ಪದವಿ ಪಡೆದು, ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುವುದಕ್ಕಿಂತ ಯಾವುದೇ ಖರ್ಚು ವೆಚ್ಚವಿಲ್ಲದೆ ಕೂಲಿ ಮಾಡಿ ಜೀವನ ಮಾಡುವುದು ಲೇಸು. ಪ್ರಸ್ತುತ ನರೇಗಾ ಕೂಲಿ ದಿನವೊಂದಕ್ಕೆ 289 ರೂ. ನೀಡಲಾಗುತ್ತಿದೆ. ಆದರೆ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುವವರಿಗೆ ದಿನವೊಂದಕ್ಕೆ 250ರೂ ಮಾತ್ರ ನೀಡಲಾಗುತ್ತಿದೆ. ಇದು ಕನಿಷ್ಠ ವೇತನದ ಅರ್ಧದಷ್ಟು ಕೂಡ ಇಲ್ಲದಂತಾಗಿದೆ. ಕೇವಲ ರೂ.7500 ಗಳಿಗೆ ಕಾರ್ಯನಿರ್ವಹಿಸಿದರೆ ಜೀವನ ನಿರ್ವಹಣೆ ಹೇಗೆ ಎಂಬುದು ಶಿಕ್ಷಕರಿಗೆ ಎದುರಾಗುವ ಬಹುದೊಡ್ಡ ಆತಂಕವಾಗಿದೆ

– ಪುಟ್ಟಸ್ವಾಮಿ ಹೆಚ್‌ಎಂ, ಮಹಾರಾಜ ಕಾಲೇಜು, ಮೈಸೂರು

ಹೊರೆ ಹೊರುವವರು ಬರೀ ಸಾಮಾನ್ಯರೇ?

ಮಾನ್ಯರೆ,

ಸಾಮಾನ್ಯ ಜನರೆಲ್ಲ ಕತ್ತೆಗಳೇ? ಪಾಪ! ಅವು ಕೂಡ ಪ್ರಾಣಿಗಳೇ! ಸರ್ಕಾರ ಯಾರಿಗಾಗಿ ಆಡಳಿತ ನಡೆಸುತ್ತಿದೆ? ಏತಕ್ಕಾಗಿ ಆಡಳಿತ ನಡೆಸುತ್ತಿದೆ? ಹಣದ ಮೌಲ್ಯ ಕುಸಿದಿರುವ ಇಂತಹ ದಿನಗಳಲ್ಲಿ ಸರ್ಕಾರ ಕಾರ್ಮಿಕ ವರ್ಗದ ಮೇಲೆ ಜಿಎಸ್‌ಟಿ ಹೊರೆಯನ್ನು ಹೇರಿರುವುದು ಖಂಡನೀಯ.

ದುಡಿಮೆಗೆ ಸಿಗುವ ಹಣ ಮುಂಚೆ ಎಷ್ಟಿತ್ತೋ ಈಗಲೂ ಕೂಡ ಅಷ್ಟೇ ಇದೆ. ಆದರೆ ದಿನನಿತ್ಯ ಉಪಯೋಗಿಸುವ ಪದಾರ್ಥಗಳು ಕೈಗೆಟಕದಷ್ಟು ಎತ್ತರದಲ್ಲಿವೆ.

ಸರ್ಕಾರ ಮೊದಲು ಆರ್ಥಿಕ ತಜ್ಞರಿಂದ ಸದ್ಯದ ಸ್ಥಿತಿಯ ಹಣದುಬ್ಬರದ ಬಗ್ಗೆ ಚರ್ಚಿಸಿ, ಹಣದ ಮೌಲ್ಯತೆಯನ್ನು ಹೆಚ್ಚಿಸಿದ ನಂತರದ ಕ್ರಮವನ್ನು ಒಪ್ಪಿಕೊಳ್ಳಬಹುದೇನೋ? ಸಾಮಾನ್ಯ ಜನರು ಕೆರಳಿ ನಿಂತರೆ ನಿಮ್ಮ ಸರ್ಕಾರವೇ ಖಲಾಸ್ ! ಇದಕ್ಕೆ ಶ್ರೀಲಂಕಾದ ಉದಾಹರಣೆ ನಿಮ್ಮ ಮುಂದೆಯೇ ಇದೆ. ಪ್ರತಿಯೊಂದಕ್ಕೂ ಎದೆ ಕೊಟ್ಟು ನಿಲ್ಲುವ ನಮ್ಮ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವ ರೀತಿಯ ಹೋರಾಟ ನಡೆಸಿ, ಸಾಮಾನ್ಯರ ಮೇಲಿನ ಈ ಹೊರೆಯನ್ನು ಇಳಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕಾಗಿದೆ.

–ಕಾಳಿಂಗಚಾರ್, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ದೀಪ ಸಾಲು

ಎದೆಯಗೂಡಲ್ಲಿ ಜೋಗುಳದ ಹಾಡು

ಭಾರತ ಬದಲಾಗುತ್ತಿದೆ. ಜಗತ್ತು ಭಾರೀ ಸದ್ದು ಮಾಡುತ್ತಾ ವಾಯುವೇಗದಲ್ಲಿ ಓಡುತ್ತಿದೆ. ತಾಂತ್ರಿಕವಾಗಿ, ಮಾಂತ್ರಿಕವಾಗಿ ಕಿಲೋ ಮೀಟರ್‌ಗಳ ವೇಗದಲ್ಲಿ ಜಗತ್ತು ಓಡುತ್ತಿದ್ದರೂ ನಮ್ಮ ಬದುಕು, ಬವಣೆಗಳು ಮಾತ್ರ ಬೇರಿನ ಬುಡದಲ್ಲೇ ಜಾಗ ಹುಡುಕುತ್ತಿವೆ. ನಮ್ಮ ಸಾಮಾಜಿಕ ಸಂದರ್ಭದಲ್ಲಿ ಏನೆಲ್ಲಾ ಬದಲಾವಣೆಗಳಾದವು!

ದೇಸಿಯತೆಯ ವಿದ್ಯಮಾನದಲ್ಲೇ ಮಿನುಗುತ್ತಿದ್ದ ಭಾರತೀಯರ ಬದುಕು ಅದೆಷ್ಟೋ ಹೋರಾಟ, ಕ್ರಾಂತಿ, ಬದಲಾವಣೆಯ ಹೆಜ್ಜೆಗಳಿಗೆ ತಕ್ಕಂತೆ ಹೊಂದಿಕೊಳ್ಳುತ್ತಾ ಹೊರಟಿದೆ. ಹಾಗೆ ಹೊಂದಿಕೊಳ್ಳುತ್ತಾ ಹೋದಲ್ಲೆಲ್ಲಾ ಬದಲಾವಣೆಯ ಹೆಜ್ಜೆ ಗುರುತುಗಳನ್ನು ಚಾರಿತ್ರಿಕವಾಗಿ ಉಳಿಸಿ ಹೋಗಿದೆ. ಸ್ವಾತಂತ್ರ್ಯ ಬಂದ ಈ ಎಪ್ಪತ್ತೈದು ವರ್ಷಗಳಲ್ಲಿ ಹಲವು ಮೈಲಿಗಲ್ಲುಗಳನ್ನು ನಮ್ಮ ಹಿರಿಯ ತಲೆಮಾರು ಕಂಡಿದೆ. ಒಂದೊಂದು ಹೊಸತನಕ್ಕೂ ಒಂದೊಂದು ತಲೆಮಾರು ಸಾಕ್ಷಿಯಾಗಿದೆ. ದೇಶಕ್ಕಾಗಿ ಪ್ರಾಣ ಕೊಡುವುದೇ ದೊಡ್ಡ ಭಾಗ್ಯದಂತೆ ಕಂಡ ಜನಸಮೂಹ, ಸೇನೆ ಸೇರಿರಲಿಲ್ಲ. ಕೈಯ್ಯಲ್ಲಿ ತುಪಾಕಿ ಹಿಡಿದಿರಲಿಲ್ಲ. ಗ್ರೆನೇಡ್ ಬಾಂಬುಗಳನ್ನು ಸ್ಫೋಟಿಸಲಿಲ್ಲ.

ಶಾಲೆಗೆ ಹೊರಟ ಬಾಲಕ ಸ್ವರಾಜ್ಯ ಚಳುವಳಿಯ ನೇತಾರರನ್ನು ಕಂಡರೆ ಮೈಮರೆಯುತ್ತಿದ್ದ. ಬೇಲಿಯ ಮರೆಗೆ ಪುಸ್ತಕದ ಚೀಲ ಬಿಸಾಡಿ ತಾನೂ ಕೂಡ ಕೈಯ್ಯಲ್ಲಿ ತ್ರಿವರ್ಣಧ್ವಜ ಹಿಡಿದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳುತ್ತಿದ್ದ. ಸಮರ ಸೇನಾನಿಗಳ ಗುಂಪು ಸೇರಿಕೊಳ್ಳುತ್ತಿದ್ದ. ಅಂದರೆ ದೊಡ್ಡವರ ನಡೆ ನೋಡಿ ಚಿಕ್ಕವರು ಪ್ರಭಾವಿತರಾಗುತ್ತಿದ್ದರು. ನಾವೀಗ ನೈತಿಕ ಪ್ರಜ್ಞೆಯ ಕಾಲದಲ್ಲಿಲ್ಲ. ತಾಂತ್ರಿಕ ಸಂಜ್ಞೆಗಳ ಕಾಲದಲ್ಲಿದ್ದೇವೆ. ಅಂದರೆ, ನಾವೆಲ್ಲಾ ಈಗ ಡಿಜಿಟಲ್ ಇಂಡಿಯಾದ ಪ್ರಜೆಗಳು, ದೇಶಪ್ರೇಮದಲ್ಲೂ 'ಹುಸಿ ದೇಶಪ್ರೇಮ' ಎಂಬ ಅತೀ ಬುದ್ಧಿವಂತಿಕೆಯ ಶೋಧನೆಯ ಹಾದಿಯ ಪ್ರಜೆಗಳು ನಾವು. ದೇಶ ಪ್ರೇಮದಲ್ಲಿ ಹುಸಿಯೋ! ಹಸಿಯೋ! ಅದು ಬೇರೆ ಮಾತು. ಆದರೆ ಒಂದು ಮಾತಂತು ಸ್ಪಷ್ಟ, ನಮ್ಮ ಕಿರಿಯ ತಲೆಮಾರು ನಾವು ಹೇಳಿದ್ದೆಲ್ಲವನ್ನೂ ಕೇಳಿಕೊಂಡು ಬೆಳೆಯುವುದಿಲ್ಲ, ನಮ್ಮ ನಡವಳಿಕೆಗಳನ್ನು ನೋಡಿಯೇ ಬೆಳೆಯುತ್ತಿರುತ್ತದೆ. ಹಾಗಾಗಿ ದೇಶ ಪ್ರೇಮವೇ ಇರಲಿ ಮಾತೃ ಪ್ರೇಮವೇ ಇರಲಿ, ಯಾವುದೋ concernಗಳು, moralityಗಳು ಹೇಳಿಕೆ, ಕೇಳಿಕೆಗಳಿಂದ ಸೃಷ್ಟಿಯಾಗುವುದಿಲ್ಲ. ಇವತ್ತಿನ ಸಾಮಾಜಿಕ ಜಾಲತಾಣಗಳ ಸಮಸ್ಯೆಯೇ ಅದು. ಎಲ್ಲರೂ ಎಲ್ಲರಿಗೂ ತಾವು ಮಾತ್ರ ತಮ್ಮ ತಮ್ಮ ಮಾತುಗಳನ್ನು ಹೇಳುವ ತವಕದಲ್ಲೇ ತಮ್ಮ ತಮ್ಮ ಬ್ಲಾಗ್‌ಗಳನ್ನು, ಟ್ವಿಟರ್ ಖಾತೆಗಳನ್ನು, ವಾಟ್ಸಪ್‌ಗಳನ್ನು, ಮೆಸೇಜ್ ಬಾಕ್ಸ್‌ಗಳನ್ನು ತುಂಬಿಸಿ ಬಿಟ್ಟಿರುತ್ತಾರೆ. ಹಾಗಾದರೆ ಕೇಳುವ ಸರದಿ ಯಾರದು? ನೈತಿಕ ಪ್ರಜ್ಞೆಯ ಕಾಲದಲ್ಲಿ ಹುಟ್ಟಿ ಬ್ರಿಟೀಷರ ಗುಂಡಿಗೆ ಎದೆಕೊಟ್ಟು ಪ್ರಾಣಬಿಟ್ಟವರನ್ನು ಅಭಿಮಾನಿಸುವ ನಾವು, ಅದೇ ವ್ಯಕ್ತಿ ಬದುಕಿ ಉಳಿದು ಬಿಟ್ಟರೆ, ಆತ ಅಸಲಿಯ! ನಕಲಿಯ! ಅಂತ ಪ್ರಶ್ನಿಸುವ ಮಟ್ಟಕ್ಕೆ ಇಳಿದುಬಿಡುತ್ತೇವೆ.

ತಾಂತ್ರಿಕ ಶ್ರೀಮಂತಿಕೆಯಲ್ಲಿ ನರಳುವ ನಾವು, ನಾಗರಿಕತೆಯ ನಾಗಾಲೋಟದಲ್ಲಿ ನೈತಿಕತೆಯಲ್ಲಿ ಅರಳುವ ಆಲೋಚನೆಗಳಿಗೆ ಪಕ್ಕ ಆಗಲಿಕ್ಕೆ ತಡವರಿಸುತ್ತಿರುವುದೇಕೆ? ಕಾರಣ ಇಷ್ಟೆ, ಹಣ ವರ್ಗಾವಣೆಯಿಂದ ಹಿಡಿದು ಗೂಗಲ್‌ಪೇ, ಫೋನ್‌ಪೇ ಮುಂತಾದ ಡಿಜಿಟಲ್ ಆ್ಯಪ್‌ಗಳ ಮೂಲಕ ವ್ಯಾಪಾರ ವಹಿವಾಟುಗಳನ್ನು, ಸರಕಾರಿ ಸೇವೆಗಳ ಅಪ್‌ಡೇಟ್ ಮಾಹಿತಿ ಮತ್ತು ಅನುಕೂಲಗಳನ್ನು ಪಡೆಯುವ ಕಾಲದಲ್ಲಿ ಇರುವ ನಾವು, ದೇಶ–ದೇಶಗಳಲ್ಲಿ ಐಟಿ–ಬಿಟಿ ಮತ್ತು ಮೊಬೈಲ್ ಮೂಲಕವೇ ಎಲ್ಲವನ್ನೂ ನಡೆಸುವ, ನಡೆದಾಡುವ ಯಂತ್ರ ನಾಗರಿಕತೆಯ ಜೊತೆ ಜೀವನ ಕಟ್ಟಿಕೊಂಡಿದ್ದೇವೆ. ಅಂದ ಮೇಲೆ ನಾವು ಡಿಜಿಟಲ್ ಇಂಡಿಯಾದ ಪ್ರಜೆಗಳು. ಸರ್ವೋದಯ ಕಾಲದ ತಲೆಮಾರಿಗಿಂತ ತಾಂತ್ರಿಕತೆಯಲ್ಲಿ ನಾವು ಸಿದ್ಧಹಸ್ತರು. ಅಂಗೈಯಲ್ಲೇ ಆಕಾಶ ನೋಡುವಲ್ಲಿ ಪ್ರಸಿದ್ಧರು.

> ಮಕ್ಕಳ ಮನಸ್ಸಿನಲ್ಲಿ ಪೋಷಕರು ಹೇಳಿಕೊಟ್ಟಿದ್ದು ಬಲವಾಗಿ ಬೇರೂರುವುದಕ್ಕಿಂತ ಪೋಷಕರ ಗುಣ-ಪ್ರವೃತ್ತಿಗಳೇ ಅವರ ಮನಸ್ಸನ್ನು ರೂಪಿಸುತ್ತಿರುತ್ತವೆ. ಪೋಷಕರಾಗಲೀ, ಗುರುವಾಗಲೀ ಕುಶಲಕರ್ಮಿಯಾಗಲೀ, ರೈತನಾಗಲೀ, ವಿಜ್ಞಾನಿಯಾಗಲೀ, ಚಾಲಕನಾಗಲೀ, ಬಾಲಕನಾಗಲೀ, ತಮ್ಮ ಹಿರಿಯರ ಗುಣಪ್ರವೃತ್ತಿಗಳಿಂದ ಆಕರ್ಷಿತರಾಗುತ್ತಾರೆಯೇ ವಿನಃ ಅವರ ಉಪದೇಶಗಳಿಂದಲ್ಲ; ಹೇಳಿಕೆ-ಕೇಳಿಕೆಗಳು, ಮಕ್ಕಳ ಮನಸ್ಸಿನಲ್ಲಿ ಬಲವಾಗಿ ಬೇರೂರಲು ಅವರ ಶಿಕ್ಷಣ, ಅವರ ಬೆಳವಣಿಗೆಗಳು ಕೂಡ ನೈತಿಕತೆಯ ಆವರಣದಲ್ಲೇ ಅನಾವರಣಗೊಂಡು ಕೆಲವರು ಸಾಧಕರಾಗುತ್ತಾರೆ ಮತ್ತೆ ಕೆಲವರು ಶೋಧಕರಾಗುತ್ತಾರೆ.

ಇಷ್ಟಾದರೂ ಸಾಮಾಜಿಕ ಬದ್ಧತೆ ನಿರ್ವ್ಯಾಜ್ಯ ದೇಶಪ್ರೇಮ, ಸಮಾಜಮುಖಿ ಚಿಂತನೆ, ಸಾತ್ವಿಕ ಜೀವನ ಪದ್ಧತಿಗಳ ಸರ್ವೋದಯ ಕಾಲದ ಗಾಂಧಿಯುಗವನ್ನು 75ರ ಈ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ದಿನಗಳಲ್ಲಿ ನೆನೆಸಿಕೊಂಡೇ ಅಭಿಮಾನಿಸುತ್ತೇವೆ. ಅಂದ ಮೇಲೆ ಅಂದಿನ ತಲೆಮಾರು ತನ್ನ ನೇತಾರರನ್ನು ನೋಡಿ ಕಲಿಯುತ್ತಿತ್ತು. ಅಂದಿನ ಮಕ್ಕಳು ಅವರವರ ತಂದೆ–ತಾಯಿಗಳ ಗುಣ–ಸ್ವಭಾವ–ನಡವಳಿಕೆಗಳನ್ನು ನೋಡಿ ಕಲಿಯುತ್ತಿದ್ದರು. ಯಾರೇ ಆಗಲಿ ಹೇಳಿ ಕೇಳಿಸುವುದಕ್ಕಿಂತ ನಮ್ಮ ನಡಾವಳಿಕೆಗಳನ್ನು ನೋಡಿ ಕಲಿವ ಮಗು ಡಿಜಿಟಲ್ ಇಂಡಿಯಾದಲ್ಲೇ ಹುಟ್ಟಿದ್ದರೂ ಆತ ಮಾತ್ರ ತಾಂತ್ರಿಕವಾಗಿಯೂ ಶ್ರೀಮಂತನಾಗುತ್ತಾನೆ. ನೈತಿಕವಾಗಿಯೂ, ಎಚ್ಚರದಿಂದಿರುತ್ತಾನೆ. ಇಂಗ್ಲೀಷ್‌ನಲ್ಲಿ ಒಂದು ಹೇಳಿಕೆ ಓದಿದೆ.

The attitude that you have as a parent is what your kids will learn from. More than what you tell them. They don't remember what you try to teach them, they remember what you are.

ಮಕ್ಕಳ ಮನಸ್ಸಿನಲ್ಲಿ ಪೋಷಕರು ಹೇಳಿಕೊಟ್ಟಿದ್ದು ಬಲವಾಗಿ ಬೇರೂರುವುದಕ್ಕಿಂತ ಪೋಷಕರ ಗುಣ–ಪ್ರವೃತ್ತಿಗಳೇ ಅವರ ಮನಸ್ಸನ್ನು ರೂಪಿಸುತ್ತಿರುತ್ತವೆ. ಪೋಷಕರಾಗಲೀ, ಗುರುವಾಗಲೀ ಕುಶಲಕರ್ಮಿಯಾಗಲೀ, ರೈತನಾಗಲೀ, ವಿಜ್ಞಾನಿಯಾಗಲೀ, ಚಾಲಕನಾಗಲೀ, ಬಾಲಕನಾಗಲೀ, ತಮ್ಮ ಹಿರಿಯರ ಗುಣ ಪ್ರವೃತ್ತಿಗಳಿಂದ ಆಕರ್ಷಿತರಾಗುತ್ತಾರೆಯೇ ವಿನಃ ಅವರ ಉಪದೇಶಗಳಿಂದಲ್ಲ; ಹೇಳಿಕೆ– ಕೇಳಿಕೆಗಳು, ಮಕ್ಕಳ ಮನಸ್ಸಿನಲ್ಲಿ ಬಲವಾಗಿ ಬೇರೂರಲು ಅವರ ಶಿಕ್ಷಣ, ಅವರ ಬೆಳವಣಿಗೆಗಳು ಕೂಡ ನೈತಿಕತೆಯ ಆವರಣದಲ್ಲೇ ಅನಾವರಣಗೊಂಡು ಕೆಲವರು ಸಾಧಕರಾಗುತ್ತಾರೆ ಮತ್ತೆ ಕೆಲವರು ಶೋಧಕರಾಗುತ್ತಾರೆ.

ಇಷ್ಟೆಲ್ಲಾ ಯೋಚಿಸಲು ಕಾರಣವಿಷ್ಟೆ, ಮೊನ್ನೆ ಬೆಂಗಳೂರಿನಿಂದ ಮೈಸೂರಿಗೆ ಬರುವಾಗ ರೈಲಿನಲ್ಲಿ ತಾಯಿಯೊಬ್ಬರು ಅಳುವ ಮಗುವಿನ ಮುಂದೆ ಮೊಬೈಲಿಟ್ಟು ವಿಡಿಯೋ ಗೇಮ್ ಪ್ಲೇ ಮಾಡಿ, ಮಗುವಿನ ಅಳುವನ್ನೆ ನಿಲ್ಲಿಸಿಬಿಟ್ಟರು. ಆ ಮಗು ಮೈಸೂರು ತಲುಪುವವರೆಗೂ ಮೊಬೈಲ್, ಮತ್ತದರ ವಿಡಿಯೋ ಗೇಮಿನ ಗೆಲುವಿನ ದಾರಿಯಲ್ಲೇ ಮೈಮರೆಯುತ್ತಿತ್ತು. ಇದು ಡಿಜಿಟಲ್ ಇಂಡಿಯಾದ ಮೊಬೈಲ್ ಕ್ರಾಂತಿ ಮುಂದೆ ಇದೇ ಮಗು ತಾಂತ್ರಿಕ ಶ್ರೀಮಂತಿಕೆಯೊಂದಿಗೆ ದಾಪುಗಾಲಿಟ್ಟು ದೊಡ್ಡ ತಜ್ಞನಾಗುತ್ತಾನೆ. ಅದರ ಅಭಿರುಚಿಯಲ್ಲಿ ತಾಂತ್ರಿಕ ಶ್ರೀಮಂತಿಕೆಯ ಜೊತೆ, ತಾಯ್ತನದ ಮಮಕಾರ, ವಾತ್ಸಲ್ಯದ ಅಸಲೀಯತ್ತು, ಕುಟುಂಬದ ಜೊತೆಗಿನ ಬೆಚ್ಚಗಿನ ಒಡನಾಟ, ಅಮ್ಮನ ಸೆರಗಿನ ಅಳು–ನಗು ಕೇಕೆಗಳು ವಿಜೃಂಭಿಸದೆ ತಾಂತ್ರಿಕತೆ–ನೈತಿಕತೆಗಳು ಮೇಳೈಸುತ್ತವೆ. ನಾಗರಿಕತೆ ಮತ್ತು ಬೌದ್ಧಿಕತೆಗಳು ಆ ಮಗುವನ್ನು ರೂಪಿಸುತ್ತವೆ.

ಯಾರೋ ಹೇಳಿದ ನೆನಪು ರೈಲಿನಲ್ಲಿ ತಾಯಿ ಮಗಳು ಇಬ್ಬರೂ ಪ್ರಯಾಣಿಸುತ್ತಿದ್ದರಂತೆ. ಏಳೆಂಟು ವರ್ಷದ ಮಗಳು ಕೈಯ್ಯಲ್ಲಿ ಪುಸ್ತಕ ಹಿಡಿದು ಓದಲು ಕುಳಿತವಳು, ಮದ್ದೂರು ವಡೆಯ ವಾಸನೆ, ಬಿಸಿಬಿಸಿ ಕಾಫಿಯ ಘಮಲಿನ ಕಡೆಗೂ, ಆ ಹುಡುಗಿಯ ಗಮನ ಹೋಗಲಿಲ್ಲವಂತೆ. ಎದುರಿಗೆ ಕುಳಿತಿದ್ದ ಹಿರಿಯ ನಾಗರಿಕರೊಬ್ಬರು ಆ ಮಗು ಪುಸ್ತಕದ ಓದಿನಲ್ಲೇ ಮಗ್ನಳಾಗಿರುವುದನ್ನು ಕುರಿತು ಅದರ ತಾಯಿಯನ್ನು ಕೇಳಿದರಂತೆ, ನಿಮ್ಮ ಮಗಳಿಗೆ ಓದುವ ಹವ್ಯಾಸವನ್ನು ನೀವು ಹೇಳಿಕೊಟ್ಟಿರ? ಅದಕ್ಕೆ ಆಕೆಯ ತಾಯಿ ಕೊಟ್ಟ ಉತ್ತರ ಹೇಗಿತ್ತು ನೋಡಿ–ನೋಡಿ ಇಲ್ಲ ನಾನು ಏನನ್ನೂ ಹೇಳಿ ಕೊಟ್ಟಿಲ್ಲ, ನಾನು ಮನೆಯಲ್ಲಿ ಹೆಚ್ಚು ಸಮಯ ಪುಸ್ತಕದ ಜೊತೆ ಇರುತ್ತೇನೆ, ಬಹುಶಃ ಇದರಿಂದ ಅವಳು ಸಹ ಪುಸ್ತಕ ಓದುವುದನ್ನು ಕಲಿತಿದ್ದಾಳೆ ಎಂದರು. ಆ ತಾಯಿ. ಅಂದರೆ ಮಕ್ಕಳು ಹೇಳಿ ಕಲಿಯುವುದಕ್ಕಿಂತ ನೋಡಿ ಕಲಿಯುವುದೇ ಹೆಚ್ಚು. ನಮಗೆ ಗೊತ್ತಿಲ್ಲದ ಹಾಗೆಯೇ ನಮ್ಮ ಮಕ್ಕಳು ನಮ್ಮ ನಡೆ–ನುಡಿ–ಗುಣ–ಸ್ವಭಾವ ಪ್ರವೃತ್ತಿಗಳನ್ನು ಗಮನಿಸಿ ಕಲಿಯುತ್ತಿರುತ್ತಾರೆ ಎಂಬುದು ಲೋಕಾನುಭವದ ಮಾತು. ಇದಕ್ಕೆ ಅನುರೂಪವೋ ಎಂಬಂತೆ ಪ್ರಸಿದ್ಧ ತತ್ವಜ್ಞಾನಿ ಗುರು ಪ್ಲೇಟೋನ ಪ್ರಸಂಗವೊಂದಿದೆ.

ಒಮ್ಮೆ ಬೀದಿಯಲ್ಲಿ ಪ್ಲೇಟೋ ನಡೆದು ಹೋಗುವಾಗ ಚಿಕ್ಕ ಮಗುವೊಂದು ಸಿಕ್ಕಾಪಟ್ಟೆ ಚೇಷ್ಟೆ ಮಾಡುತ್ತಿತ್ತಂತೆ. ಅದನ್ನು ನೋಡಿದ ಪ್ಲೇಟೋ ಆ ಮಗುವನ್ನು ಗದರಿಸುವುದಿಲ್ಲ. ಅಲ್ಲಿದ್ದವರಿಗೆಲ್ಲಾ ಆ ಮಗುವಿನ ಚೇಷ್ಟೆ ನಿಲ್ಲಿಸಲು ಆಗಲಿಲ್ಲ. ಪ್ಲೇಟೋ ಆ ಮಗುವಿನ ತಂದೆ ಯಾರು ಎಂದು ವಿಚಾರಿಸಿದರಂತೆ. ಆ ಮಗುವಿನ ತಂದೆಯ ಬಳಿ ಹೋಗಿ ಅವರಿಗೆ ಬುದ್ಧಿಹೇಳಿ ಬಂದರಂತೆ. ಇದನ್ನು ನೋಡಿದ ಅಲ್ಲೇ ಇದ್ದ ಕೆಲವರು ಜಗತ್ತಿನ ದೊಡ್ಡ ತತ್ವಜ್ಞಾನಿ ಪ್ಲೇಟೋ ತಂಟೆ ಮಾಡುತ್ತಿದ್ದ ಮಗುವನ್ನು ತಿದ್ದಿ ಸರಿಪಡಿಸದೆ, ತಂದೆಗೆ ಬುದ್ಧಿ ಹೇಳಿದ್ದು ಸರಿಯೇ? ಎಂದು ಪ್ರಶ್ನಿಸಿದರಂತೆ. ಅದಕ್ಕೆ ಪ್ಲೇಟೋ ಹೇಳಿದ ಮಾತೇನು ಗೊತ್ತ? "ಮಕ್ಕಳು ನಮ್ಮನ್ನು ನೋಡಿಯೇ ಎಲ್ಲವನ್ನೂ ಕಲಿಯುತ್ತವೆ. ಅವರು ಸರಿಯಾದ ರೀತಿಯಲ್ಲಿ ಬೆಳೆಯಲು ತಂದೆ–ತಾಯಿಗಳೂ ಕಾರಣರಾಗುತ್ತಾರೆ, ದೊಡ್ಡವರನ್ನು ನೋಡಿಯೇ ಮಕ್ಕಳು ಕಲಿತುಕೊಳ್ಳುತ್ತಾರೆ. ಪೋಷಕರು ತಾವು ಒಳ್ಳೆಯ ರೀತಿ–ನೀತಿ, ಗುಣ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳದೆ ಮಕ್ಕಳಿಂದ ಮಾತ್ರ ಅದನ್ನು ನಿರೀಕ್ಷಿಸುವುದು ವ್ಯರ್ಥವಾಗುತ್ತದೆ ಎಂದರಂತೆ.

ಸಾಂಸ್ಕೃತಿಕ ಶಿಕ್ಷಣ, ಸಂಸ್ಕಾರದ ನಡೆ, ಹದವರಿತ ನುಡಿ, ಸದಾಚಾರದ ನಡವಳಿಕೆಗಳು, ಒಂದು ತಲೆಮಾರನ್ನು ಬೆಳೆಸುತ್ತವೆ. ಡಿಜಿಟಲ್ ಇಂಡಿಯಾದ ತಾಂತ್ರಿಕ ಜೀವನದ ಶ್ರೀಮಂತಿಕೆಗೆ ನಮ್ಮ ಜನನಾಯಕರೂ ಕೂಡ ತಮ್ಮ ಗುಣ–ಪ್ರವೃತ್ತಿ, ನಡೆ–ನುಡಿಗಳಿಂದ ಶ್ರೀಮಂತರಾದರೆ, ಅನುಮಾನವೇ ಇಲ್ಲದೆ ಇಡೀ ದೇಶ ಅವರನ್ನು ಹಿಂಬಾಲಿಸುತ್ತದೆ. ಮಕ್ಕಳು ಅಪ್ಪ ಅಮ್ಮನನ್ನು ನೋಡಿ ಕಲಿತ ಹಾಗೆ! ಇಲ್ಲದಿದ್ದರೆ, ವಾಟ್ಸಪ್, ಫೇಸ್ಬುಕ್‌ಗಳ ಹೇಳಿಕೆಗಳಂತೆ ಕಲಿವ ಕ್ರಿಯೆ ದಿನವೂ ಮೊಬೈಲಿನಲ್ಲಿ ಡಿಲೀಟ್ ಆದಂತೆ ಜೀವನದ ಕಲಿಯುವ ಹಂತದಲ್ಲೂ ಡಿಲೀಟ್ ಆಗುತ್ತಾ ಹೋಗುತ್ತವೆ. ಭರತಖಂಡದಲ್ಲಿ ತಲೆಮಾರಿನ ಮೈಲಿಗಲ್ಲುಗಳಿವೆ. ಅದು ಡಿಜಿಟಲ್ ಇಂಡಿಯಾವೇ ಇರಲಿ, ಪಾರಂಪರಿಕ ಭಾರತವಿರಲಿ ತಾಂತ್ರಿಕ ಶ್ರೀಮಂತಿಕೆಯ ಜೊತೆ ನೈತಿಕ ಶಿಕ್ಷಣದ ಹೆಜ್ಜೆ ಗುರುತುಗಳು ಅಮ್ಮನ ಸೆರಗಿನಿಂದ, ಅಪ್ಪನ ಹೆಗಲಿನಿಂದ ಶುರುವಾಗಲಿ, ಭಾರತೀಯತೆಯ ನೈಜ ಗುಣಸಂಪನ್ನತೆಗೆ ಚರಿತ್ರೆಯ ಪುಟಗಳಲ್ಲೇ ಜಾಗವಿದೆ ಎಂದ ಮೇಲೆ ಎದೆಯಗೂಡಲ್ಲಿ ಜೋಗುಳದ ಹಾಡಿಲ್ಲವೇ? ಏನಂತೀರಿ.

ರಾಷ್ಟ್ರಪತಿಯವರಿಗೆ ದ್ರೌಪದಿ ಹೆಸರೇಕೆ ಬಂತು; ಬಾಲ್ಯದ ನೆನಪು ಮೆಲುಕು ಹಾಕಿದ ಮುರ್ಮು





ಭುವನೇಶ್ವರ: 2022ರ ರಾಷ್ಟ್ರಪತಿ ಹುದ್ದೆಗೆ ಎನ್‌ಡಿಎ ಮೈತ್ರಿಕೂಟ ದ್ರೌಪದಿ ಮುರ್ಮು ಅವರ ಹೆಸರನ್ನು ಘೋಷಿಸಿದಾಗ ಸೋಷಿಯಲ್ ಮೀಡಿಯಾದಲ್ಲಿ ಅವರ ಹೆಸರಿನ ಬಗ್ಗೆ ಭಾರೀ ಕಮೆಂಟ್‌ಗಳು ವ್ಯಕ್ತವಾದವು. ಭಾರತಕ್ಕೆ ದ್ರೌಪದಿ ರಕ್ಷೆ, ದುಷ್ಟರ ಸಂಹಾರಕ್ಕೆ ದ್ರೌಪದಿ ಬರುತ್ತಿದ್ದಾರೆ ಎಂದೆಲ್ಲ ಮಹಾಭಾರತದ ಪ್ರಮುಖ ಪಾತ್ರಧಾರಿ, ಪಂಚ ಪಾಂಡವರ ಪತ್ನಿ ದ್ರೌಪದಿಯನ್ನಿಟ್ಟುಕೊಂಡು ಕಮೆಂಟ್ ಮಾಡುತ್ತಿದ್ದರು.

ದ್ರೌಪದಿ ಮುರ್ಮು ಬಹು ಅಪರೂಪದ ಹೆಸರು, ಬುಡಕಟ್ಟು ಜನಾಂಗದ ಮಹಿಳೆ ದೇಶದ 15ನೇ ರಾಷ್ಟ್ರಪತಿಯಾಗಿದ್ದಾರೆ. ಅವರಿಗೆ ಈ ದ್ರೌಪದಿ ಹೆಸರನ್ನು ಸೂಚಿಸಿದ್ದು ಶಾಲೆಯಲ್ಲಿ ಶಿಕ್ಷಕರೊಬ್ಬರಂತೆ. ಇದರ ಹಿಂದೆ ಆಸಕ್ತಿಕರ ವಿಷಯವಿದೆ.

ಕೆಲವು ಸಮಯಗಳ ಹಿಂದೆ ಒಡಿಯಾ ವಿಡಿಯೊ ಮ್ಯಾಗಜಿನ್‌ಗೆ ನೀಡಿದ್ದ ಸಂದರ್ಭದಲ್ಲಿ ತಮ್ಮ ಪೋಷಕರು ಇಟ್ಟಿದ್ದ 'ಪುಟಿ' ಹೆಸರನ್ನು ಶಾಲೆಯಲ್ಲಿ ಶಿಕ್ಷಕರು ಬದಲಿಸಿದರಂತೆ. ನಾನು ಮಯೂರ್ ಭಂಜ್ ಜಿಲ್ಲೆಯಲ್ಲಿ ಹುಟ್ಟಿದ್ದು ಮತ್ತೊಂದು ಜಿಲ್ಲೆಯ ಶಿಕ್ಷಕರು ನನ್ನ ಹೆಸರನ್ನು ದ್ರೌಪದಿ ಎಂದು ಬದಲಿಸಿದರು, ಪುಟಿ ಹೆಸರು ಚೆನ್ನಾಗಿಲ್ಲ ದ್ರೌಪದಿ ಎಂದಿಟ್ಟುಕೋ ಎಂದು ಅಧ್ಯಾಪಕರು ಸೂಚಿಸಿದರು ಎಂದು ಅಂದು ಸಂದರ್ಶನದಲ್ಲಿ ಹೇಳಿಕೊಂಡಿದ್ದರು.

1960ರ ದಶಕದಲ್ಲಿ ನಾವು ಶಾಲೆಗೆ ಹೋಗುತ್ತಿದ್ದಾಗ ಬಲಸೋರೆ ಅಥವಾ ಕಟಕ್ ಜಿಲ್ಲೆಯಿಂದ ಶಿಕ್ಷಕರು ನಮ್ಮೂರಿಗೆ ಕಲಿಸಲು ಬರುತ್ತಿದ್ದರು. ಒಬ್ಬ ಶಿಕ್ಷಕರು ನನ್ನ ಮೊದಲಿನ ಹೆಸರು ಚೆನ್ನಾಗಿಲ್ಲ ಎಂದು ದ್ರೌಪದಿ ಎಂದಿಟ್ಟರು. ದ್ರೌಪದಿಯಿಂದ ದೋರ್ಪ್ದಿ ಎಂದಾಗಿತ್ತಂತೆ.

ಇನ್ನು ದ್ರೌಪದಿಯವರ ಸರ್ ನೇಮ್ ಆರಂಭದಲ್ಲಿ ಟುಡು ಆಗಿತ್ತಂತೆ. ನಂತರ ಅವರು ಶ್ಯಾಮ್ ಚರಣ್ ಟುಡು ಅವರನ್ನು ಮದುವೆಯಾದ ಬಳಿಕ ಸರ್ ನೇಮ್ ಮುರ್ಮು ಎಂದು ಬದಲಾಯಿತಂತೆ.


ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ: ಪುರುಷರ ಪ್ರಾಬಲ್ಯವಿರುವ ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಬೇಕು. ರಾಜಕೀಯ ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್‌ಗಳನ್ನು ನೀಡುವುದರಲ್ಲಿ ಬದಲಾವಣೆ ಮಾಡುವುದರಿಂದ ಈ ಪರಿಸ್ಥಿತಿಯನ್ನು ಬದಲಾಯಿಸಬಹುದು ಎಂದು ಹೇಳಿದ್ದಾರೆ. ಮಹಿಳೆಯರು ಗುಣಾತ್ಮಕ ರಾಜಕೀಯದತ್ತ ಗಮನಹರಿಸಬೇಕು. ಸಂಸತ್ತು ಅಥವಾ ರಾಜ್ಯ ವಿಧಾನಸಭೆಗಳಲ್ಲಿ ಸಬಲೀಕರಣಕ್ಕಾಗಿ ಧ್ವನಿ ಎತ್ತಬೇಕು ಎಂದು ಮುರ್ಮು ಹೇಳುತ್ತಾರೆ. ಮಹಿಳೆಯರು ಜನರ ಸಮಸ್ಯೆಗಳನ್ನು ಸರಿಯಾದ ವೇದಿಕೆಗಳಲ್ಲಿ ಪ್ರಸ್ತುತಪಡಿಸುವ ಮೂಲಕ ತಮ್ಮ ಗುಣಾತ್ಮಕ ಕುಶಾಗ್ರಮತಿಯನ್ನು ಬಲಪಡಿಸಬೇಕು ಎಂದಿದ್ದರು.

2020ರ ಫೆಬ್ರವರಿ 18ರಂದು ಬ್ರಹ್ಮಾಕುಮಾರಿ ಗಾಡ್ಲಿವುಡ್ ಸ್ಟುಡಿಯೋಗೆ ನೀಡಿದ ಮತ್ತೊಂದು ಸಂದರ್ಶನದಲ್ಲಿ, ಮುರ್ಮು ತನ್ನ 25 ವರ್ಷದ ಹಿರಿಯ ಮಗ ಲಕ್ಷ್ಮಣ್ ಸಾವಿನ ನಂತರದ ಪರಿಸ್ಥಿತಿಯನ್ನು ಹಂಚಿಕೊಂಡಿದ್ದರು. ನನ್ನ ಮಗನ ಸಾವಿನ ನಂತರ ನಾನು ಸಂಪೂರ್ಣವಾಗಿ ಕುಸಿದುಹೋಗಿದ್ದೆ. ಸುಮಾರು ಎರಡು ತಿಂಗಳ ಕಾಲ ನಾನು ಖಿನ್ನತೆಗೆ ಒಳಗಾಗಿದ್ದೆ. ಜನರನ್ನು ಭೇಟಿಯಾಗುವುದನ್ನು ನಿಲ್ಲಿಸಿ ಮನೆಯಲ್ಲಿಯೇ ಇದ್ದೆ. ನಂತರ ನಾನು ಈಶ್ವರಿ ಪ್ರಜಾಪತಿ ಬ್ರಹ್ಮಕುಮಾರಿಯಲ್ಲಿ ಸೇರಿಕೊಂಡು ಯೋಗ ಮತ್ತು ಧ್ಯಾನಕ್ಕೆ ಒಳಗಾದೆ ಎಂದಿದ್ದರು.


ಮುರ್ಮು ಅವರು 2013ರಲ್ಲಿ ತಮ್ಮ ಕಿರಿಯ ಮಗ ಸಿಪುನ್ ಅವರನ್ನು ರಸ್ತೆ ಅಪಘಾತದಲ್ಲಿ ಕಳೆದುಕೊಂಡರು. ತರುವಾಯ ಅವರ ಸಹೋದರ ಮತ್ತು ತಾಯಿ ನಿಧನರಾದರು. ನಾನು ನನ್ನ ಜೀವನದಲ್ಲಿ ಸುನಾಮಿಯನ್ನು ಎದುರಿಸಿದ್ದೇನೆ. ಆರು ತಿಂಗಳ ಅವಧಿಯಲ್ಲಿ ಕುಟುಂಬದ ಮೂರು ಸಾವುಗಳನ್ನು ನೋಡಿದ್ದೇನೆ ಎಂದರು. ಅವರ ಪತಿ ಶ್ಯಾಮ್ ಚರಣ್ ಕೂಡ ಅನಾರೋಗ್ಯಕ್ಕೆ ತುತ್ತಾಗಿ 2014ರಲ್ಲಿ ತೀರಿಕೊಂಡಿದ್ದರು.

ಒಕ್ಕಲಿಗರ ಬಗ್ಗೆ ಹೇಳಿಕೆ: ಜಮೀರ್‌ಗೆ ಎಐಸಿಸಿ ನೋಟಿಸ್

ಬೆಂಗಳೂರು: ಒಕ್ಕಲಿಗ ಸಮಾಜದ ಬಗ್ಗೆ ಶಾಸಕ ಜಮೀರ್ ಅಹಮದ್ ನೀಡಿರುವ ಹೇಳಿಕೆ ಕಾಂಗ್ರೆಸ್‌ಗೆ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸಿದ್ದು, ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿಯೂ ಆದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಜಮೀರ್‌ಗೆ ಎಚ್ಚರಿಕೆ ನೋಟಿಸ್ ನೀಡಿದ್ದಾರೆ.



ALL INDIA CONGRESS COMMITTEE



ಇತ್ತೀಚೆಗೆ ನಿಮ್ಮ ಸಾರ್ವಜನಿಕ ಹೇಳಿಕೆಗಳು ಅನಗತ್ಯ ಹಾಗೂ ಕೀಳು ಅಭಿರುಚಿಯಿಂದ ಕೂಡಿದೆ. ಈ ಮೂಲಕ ನೀವು ಪಕ್ಷದ ಶಿಸ್ತು ಹಾಗೂ ಲಕ್ಷ್ಮಣ ರೇಖೆಯನ್ನು ಉಲ್ಲಂಘಿಸಿರುವುದನ್ನು ಅನುಭವಿ ಕಾಂಗ್ರೆಸ್ ನಾಯಕರು ಮನಗಂಡಿದ್ದಾರೆ. ನಿಮ್ಮ ಹೇಳಿಕೆಗಳು ಪಕ್ಷದ ತತ್ವಕ್ಕೆ ವಿರುದ್ಧವಾಗಿದೆ. ಯಾರೊಬ್ಬರೂ ವಿವಾದ ಸೃಷ್ಟಿಸುವುದನ್ನು ತಡೆಯುವ ಕಾರ್ಯ ಮಾಡುವಂತಹ ಅಗತ್ಯ ಕಂಡುಬಂದಿದೆ. ನೀವು ಅನಾವಶ್ಯಕವಾಗಿ ಸಾರ್ವಜನಿಕವಾಗಿ ಹೇಳಿಕೆಗಳನ್ನು ನೀಡಿರುವುದು ವಿಷಾದಕರ ಸಂಗತಿ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಜಾತೀವಾರು, ಧರ್ಮವಾರು ವಿಚಾರವನ್ನು ಪ್ರತಿಪಾದಿಸುವುದಿಲ್ಲ. ಸಮಗ್ರ ಸಮಾಜದ ವಿರುದ್ಧವಾಗಿ ಯಾವೊಬ್ಬ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯನೂ ಹೇಳಿಕೆ ನೀಡಬಾರದು. ಭವಿಷ್ಯದಲ್ಲಿ ಹೇಳಿಕೆಗಳನ್ನು ಎಚ್ಚರಿಕೆಯಿಂದ ನೀಡುವುದರೊಂದಿಗೆ ಕಾಂಗ್ರೆಸ್‌ನ ಶಿಸ್ತು ಮತ್ತು ತತ್ವವನ್ನು ಪಾಲಿಸಬೇಕೆಂದು ನಿಮಗೆ ಸೂಚಿಸಲಾಗಿದೆ ಎಂದು ಶಾಸಕ ಜಮೀರ್ ಅಹಮದ್ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ರಣದೀಪ್ ಸಿಂಗ್ ಸುರ್ಜೇವಾಲ ತಿಳಿಸಿದ್ದಾರೆ.

ಜು.30ಕ್ಕೆ ಸಿಇಟಿ ಫಲಿತಾಂಶ

ಬೆಂಗಳೂರು, ಜು.25 (ಕೆಎಂಶಿ)–ಜೂನ್ ಮಧ್ಯಭಾಗದಲ್ಲಿ ನಡೆಸಲಾಗಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶವನ್ನು ಇದೇ 30ರಂದು ಪ್ರಕಟಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿರುವ ಅವರು, ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದುಕೊಳ್ಳಲು ನಡೆದಿದ್ದ ಸಿಇಟಿ ಪರೀಕ್ಷೆಯನ್ನು ಬಿಗಿ ಭದ್ರತೆ ನಡುವೆ ಕಟ್ಟುನಿಟ್ಟಾಗಿ ನಡೆಸಲಾಗಿತ್ತು ಎಂದು ತಿಳಿಸಿದರು.

ಸಿಇಟಿ ಪರೀಕ್ಷೆ ನಡೆಸುವಾಗ ಸಿಬಿಎಸ್‌ಸಿ ಮತ್ತು ಐಸಿಎಸ್‌ಇ ಪಠ್ಯಕ್ರಮದಲ್ಲಿ 12ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೂ ಅವಕಾಶ ಕೊಡಲಾಗಿತ್ತು. ಈಗ ಅವರ ಫಲಿತಾಂಶ ಬಂದಿದ್ದು, ಸಿಇಟಿ ಬರೆದಿದ್ದ ಈ ವಿದ್ಯಾರ್ಥಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ತಮ್ಮ ಅಂಕಗಳನ್ನು ನಾಳೆ (ಜು.26) ಸಂಜೆಯೊಳಗೆ ಅಪ್ಲೋಡ್ ಮಾಡಬೇಕು ಎಂದು ಹೇಳಿದ್ದಾರೆ. ಫಲಿತಾಂಶ ಪ್ರಕಟಗೊಂಡ ನಂತರ ವೈದ್ಯಕೀಯ ಶಿಕ್ಷಣ ಹೊರತುಪಡಿಸಿ, ಉಳಿದ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರವೇಶ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಸ್ತೂರಿ ರಂಗನ್ ವರದಿ ಆತಂಕ: ರಾಜ್ಯದ ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದಲ್ಲಿ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಭೇಟಿಯಾದ ಸಂಸದರ ನಿಯೋಗ

ಪರಿಸ್ಥಿತಿ ಅಧ್ಯಯನಕ್ಕೆ ಸಮಿತಿ ರಚನೆ



ಮೈಸೂರು, ಜು.25(ಎಸ್‌ಬಿಡಿ)– ಕಸ್ತೂರಿ ರಂಗನ್ ವರದಿ ಜಾರಿಯ ಬಗ್ಗೆ ಆತಂಕದಲ್ಲಿದ್ದ ಮಲೆನಾಡು ಭಾಗದ ಜನರಿಗೆ ಸ್ವಲ್ಪ ಮಟ್ಟಿಗೆ ಸಮಾಧಾನ ನೀಡುವ ನಿರ್ಣಯವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ. ಕಸ್ತೂರಿ ರಂಗನ್ ವರದಿ ಸಂಬಂಧ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರ ನೇತೃತ್ವದಲ್ಲಿ ಪಶ್ಚಿಮಘಟ್ಟಗಳ ವ್ಯಾಪ್ತಿಯ ಸಂಸದರ ನಿಯೋಗ ಇಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವರಾದ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾಗಿ ಚರ್ಚಿಸಿದ ಸಂದರ್ಭದಲ್ಲಿ ಪರಿಸ್ಥಿತಿ ಅಧ್ಯಯನ ನಡೆಸಲು ನಿವೃತ್ತ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿರುವುದಾಗಿ ಅವರು ತಿಳಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ, ಸೆಟಲೈಟ್ ಚಿತ್ರಗಳ ಆಧಾರದಲ್ಲಿ ಹಸಿರು ತೋರಿದ್ದನ್ನೆಲ್ಲಾ ಕಾಡು ಎಂದು ಗುರುತಿಸಲಾಗಿದೆ. ಕಾಫಿ ತೋಟ, ತೆಂಗಿನ ತೋಟ, ರಬ್ಬರ್ ತೋಟವನ್ನೂ ಕಾಡು ಎಂದು ಪರಿಗಣಿಸಲಾಗಿದೆ ಇದೊಂದು ಅವೈಜ್ಞಾನಿಕ ಮಾದರಿಯಾಗಿದೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಭೌತಿಕ ಸರ್ವೇ ನಡೆಯಬೇಕೆಂಬುದು ಹಲವು ವರ್ಷಗಳ ಒತ್ತಾಯವಾಗಿತ್ತು. ಆದರೆ ಹಿಂದಿನ ಸರ್ಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಚಿವ ಭೂಪೇಂದ್ರ ಯಾದವ್ ನೇತೃತ್ವದಲ್ಲಿ ಇಂದು ಮಹತ್ವದ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.


ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ನಿಯೋಗ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾದಾಗ ಕಸ್ತೂರಿ ರಂಗನ್ ವರದಿ ಸಂಬಂಧ ಅಧ್ಯಯನ ನಡೆಸಲು ಸಮಿತಿ ರಚಿಸಿರುವುದು ತಿಳಿಯಿತು. ಕರ್ನಾಟಕ, ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಕರ್ನಾಟಕ ಗುಜರಾತ್‌ನ ಸ್ವಲ್ಪಭಾಗ ಸೇರಿದಂತೆ ವರದಿಯಲ್ಲಿ ಉಲ್ಲೇಖಿಸಿರುವ ಪ್ರದೇಶಗಳಲ್ಲಿ ಸಮಿತಿ ಅಧ್ಯಯನ ನಡೆಸಲಿದೆ. ಆ ಭಾಗದ ರೈತರು, ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು ಹೀಗೆ ಸ್ಥಳೀಯರಿಂದಲೂ ಮಾಹಿತಿ ಪಡೆದು ಒಂದು ವರ್ಷದಲ್ಲಿ ವರದಿ ನೀಡುವಂತೆ ಸಮಿತಿಗೆ ಸೂಚಿಸಿರುವುದಾಗಿ ಸಚಿವರು ತಿಳಿಸಿದ್ದಾರೆ. ಇದರಿಂದ ನಾವು ಸ್ವಲ್ಪ ಉಸಿರಾಡುವಂತಾಗಿದೆ. ಮುಂದಿನ ಒಂದು ವರ್ಷದಲ್ಲಿ ಮಲೆನಾಡು ಭಾಗದ ಜನರ ಸಮಸ್ಯೆಗೆ ಪರಿಹಾರದ ವಿಶ್ವಾಸ ಕಾಣಬಹುದು. ಜನಹಿತ ನಿರ್ಧಾರ ಕೈಗೊಂಡ ಪ್ರಧಾನಿ ಮೋದಿ ಹಾಗೂ ಸಚಿವ ಭೂಪೇಂದ್ರ ಯಾದವ್ ಅವರಿಗೆ ಕೃತಜ್ಞತೆಗಳು ಎಂದಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಇನ್ನಿತರ ಸಂಸದರ ನಿಯೋಗ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾಗಿದ್ದು, ಮುಖ್ಯಮಂತ್ರಿಗಳೇ ಸವಿಸ್ತಾರವಾಗಿ ಮಾತನಾಡಿದರು. ಅಧ್ಯಯನಕ್ಕೆ ನಿಯೋಜಿಸಿರುವ ಐವರು ಅಧಿಕಾರಿಗಳ ಸಮಿತಿ, ಗ್ರಾಮ ಸಭೆ ನಡೆಸಿ, ಸಾಂಸ್ಕೃತಿಕ ಹಾಗೂ ಭೌತಿಕ ಸರ್ವೆ ನಡೆಸಲಿದೆ. ಜೊತೆಗೆ ರಾಜ್ಯದಲ್ಲೂ ಒಂದು ಸಮಿತಿಯನ್ನು ರಚಿಸಿ ಅಧ್ಯಯನ ನಡೆಸಿ, ಕೇಂದ್ರದ ಕಮಿಟಿಗೆ ಮಾಹಿತಿ ನೀಡುವ ಬಗ್ಗೆ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಒಟ್ಟಾರೆ ಸಮಿತಿ ವರದಿ ಸಿದ್ಧಪಡಿಸಲು ಒಂದು ವರ್ಷ ಕಾಲಾವಕಾಶ ಬೇಕಾಗುವುದರಿಂದ ಜನ ಆತಂಕ ಪಡುವುದು ಬೇಡ ಎಂದು ತಿಳಿಸಿದರು.

ಕಸ್ತೂರಿ ರಂಗನ್ ಸಮಿತಿ ಗುರುತಿಸಿರುವ ಪಶ್ಚಿಮ ಘಟ್ಟ ವ್ಯಾಪ್ತಿಯ ಪ್ರದೇಶದಲ್ಲಿ ಗಣಿಗಾರಿಕೆ, ಕ್ವಾರಿ, ಮರಳುಗಾರಿಕೆ ಮಾತ್ರವಲ್ಲದೆ ಕೈಗಾರಿಕೆ, ಜಲವಿದ್ಯುತ್, ಪವನ ವಿದ್ಯುತ್ ಯೋಜನೆಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ. ಅದರಲ್ಲೂ ಪರಿಸರ ಸೂಕ್ಷ್ಮ ಪ್ರದೇಶದ ಸೂಚಿತ ಅಂತರದಲ್ಲಿ ದೊಡ್ಡ ಕಟ್ಟಡವನ್ನೂ ಕಟ್ಟುವಂತಿಲ್ಲ. ಹೀಗೆ ನಿರ್ಬಂಧಗಳಿರುವುದರಿಂದ ಮಲೆನಾಡು ಪ್ರದೇಶದ ಅಭಿವೃದ್ಧಿಗೆ ಅಡ್ಡಿಯಾಗಿತ್ತು. ಈ ವರದಿಯನ್ನು ಕೈಬಿಡುವಂತೆ ಹಲವು ವರ್ಷಗಳಿಂದ ಒತ್ತಾಯ ಕೇಳಿಬಂದಿತ್ತು. ಇತ್ತೀಚೆಗೆ ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರ ಸರ್ಕಾರ ಮತ್ತೆ ಮುಂದಾಗಿದ್ದರಿಂದ ಕೊಡಗು, ಚಿಕ್ಕಮಗಳೂರು ಮತ್ತಿತರ ಕಡೆ ಜನಾಂದೋಲನ ನಡೆಸಲಾಗುತ್ತಿತ್ತು.

ಆಷಾಢ ಮಾಸದಲ್ಲಿ ಚಾಮುಂಡೇಶ್ವರಿ ಹುಂಡಿಯಲ್ಲಿ ದಾಖಲೆಯ 2.33 ಕೋಟಿ ರೂ. ಸಂಗ್ರಹ

ಮೈಸೂರು, ಜು.25(ಎಂಕೆ)– ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಹುಂಡಿ ಎಣಿಕೆ ಕಾರ್ಯ ಸೋಮವಾರ ನಡೆದಿದ್ದು, ಆಷಾಢ ಮಾಸದಲ್ಲಿ 2,33,51,270(ಎರಡು ಕೋಟಿ ಮೂವತ್ಮೂರು ಲಕ್ಷದ ಐವತ್ತೊಂದು ಸಾವಿರದ ಎರಡು ನೂರ ಎಪ್ಪತ್ತು) ರೂ. ಕಾಣಿಕೆ ಸಂಗ್ರಹವಾಗಿದೆ.



ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದ ಬಳಿಕ ಆಷಾಢ ಮಾಸದ ವಿಶೇಷ ಪೂಜೆ ಮತ್ತು ದರ್ಶನಕ್ಕೆ ಲಕ್ಷಾಂತರ ಭಕ್ತರು ಭೇಟಿ ನೀಡಿದ್ದು, ಕಾಣಿಕೆ ಸಂಗ್ರಹದಲ್ಲಿ ಹೊಸ ದಾಖಲೆ ನಿರ್ಮಾಣವಾಗಿದೆ. ಕಳೆದ ವರ್ಷಕ್ಕಿಂತ ಎರಡುಪಟ್ಟು ಹೆಚ್ಚಾಗಿದ್ದು, ಅಪಾರ ಭಕ್ತ ಸಮೂಹ ಹೊಂದಿರುವ ಸುಪ್ರಸಿದ್ಧ ಯಾತ್ರಾಸ್ಥಳ ಎಂಬುದಕ್ಕೆ ಶ್ರೀ ಚಾಮುಂಡೇಶ್ವರಿ ಸನ್ನಿಧಿ ಸಾಕ್ಷಿಯಾಗಿದೆ. ಇಲ್ಲಿಯವರೆಗೆ 1.59 ಕೋಟಿ ರೂ. ಅತೀ ಹೆಚ್ಚಿನ ಸಂಗ್ರಹಣೆಯಾಗಿತ್ತು. ಈ ವರ್ಷದ ಆಷಾಢ ಮಾಸದಲ್ಲಿ 2 ಕೋಟಿ ರೂ. ದಾಟುವ ಮೂಲಕ ಹೊಸ ದಾಖಲೆ ನಿರ್ಮಾಣವಾಗಿದೆ ಎಂದು ಮುಜರಾಯಿ ಇಲಾಖೆ ತಹಸೀಲ್ದಾರ್ ಸಿ.ಜಿ.ಕೃಷ್ಣ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

2,33,51,270 ರೂ.ಗಳಲ್ಲಿ 2,29,93,739 ರೂ. ನೋಟುಗಳು ಹಾಗೂ 3,57,531 ರೂ., ನಾಣ್ಯಗಳ ಸಂಗ್ರಹವಾಗಿದೆ. ಅಲ್ಲದೆ ಟಿಕೆಟ್ ಕೌಂಟರ್(300 ಮತ್ತು 50 ರೂ. ಟಿಕೆಟ್)ನಿಂದ 1,03,69,270 ರೂ. ಆದಾಯ ಸಂಗ್ರಹವಾಗಿದೆ ಎಂದರು.

ಮುಂದಿನ ಪೀಳಿಗೆಗೆ ಉತ್ತಮ ಪರಿಸರಕ್ಕಾಗಿ ಗಿಡನೆಟ್ಟು ಪೋಷಿಸಿ

ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಸಲಹೆ

ಮೈಸೂರು, ಜು.25(ಎಸ್‌ಪಿಎನ್)–ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು, ಪರಿಸರ ಉಳಿವಿಗೆ ಎಲ್ಲರೂ ಗಿಡ ನೆಟ್ಟು ಪೋಷಿಸಬೇಕು ಎಂದು ರಾಜ್ಯ ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಅಭಿಪ್ರಾಯಪಟ್ಟರು.



ಮೈಸೂರು ನಿವೇದಿತಾ ನಗರದಲ್ಲಿ ರೋಟರಿ ಮೈಸೂರು ಉತ್ತರದ ವತಿಯಿಂದ ವನಸಿರಿ ಯೋಜನೆಯಡಿ ಆಯೋಜಿಸಿದ್ದ ವಿವಿಧ ಜಾತಿಯ 500 ಸಸಿಗಳನ್ನು ವಿತರಿಸಿ, ಮಾತನಾಡಿದರು. ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿ ಕೃಪೆಯಿಂದ ಮೈಸೂರಿನ ಜನತೆ ಉತ್ತಮ ಪರಿಸರದಲ್ಲಿ ಜೀವನ ಕಟ್ಟಿಕೊಂಡಿದ್ದೀರಿ, ಮುಂದಿನ ಪೀಳಿಗೆಗೆ ಇದೇ ಪರಿಸರ ಉಳಿಸಿಕೊಳ್ಳಬೇಕಾದರೆ, ನಿಮ್ಮ ಮಕ್ಕಳ ಕೈಯಲ್ಲಿ ನಿಮ್ಮ ಮನೆ ಮುಂದೆ ಅಥವಾ ಜಮೀನಿನಲ್ಲಿ ಒಂದು ಗಿಡನೆಟ್ಟು ಪೋಷಿಸುವಂತೆ ಸಲಹೆ ನೀಡಿದರು.

ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಸ್.ಹೆಚ್.ಜಗದೀಶ್ ಮಾತನಾಡಿ, ನೆರಳೆ, ಹಲಸು, ಆಲದ ಗಿಡ ಹಾಗೂ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ಇಂದು ಆಕ್ಮಿ ವಿದ್ಯಾಸಂಸ್ಥೆಗೆ 500 ಹಾಗೂ ಕುಂಬಾರಕೊಪ್ಪಲು ಸರ್ಕಾರಿ ಪ್ರೌಢಶಾಲೆಗೆ 500 ಗಿಡ ವಿತರಿಸಲಾಗಿದ್ದು, ಮೈಸೂರು ತಾಲೂಕಿನಲ್ಲಿ 4 ಸಾವಿರ ಗಿಡಗಳನ್ನು ರೈತರಿಗೆ ವಿತರಣೆ ಮಾಡಲಾಗಿದೆ ಎಂದರು.

ಈ ವೇಳೆ ರೋಟರಿ ಮೈಸೂರು ಉತ್ತರ ಕಾರ್ಯದರ್ಶಿ ರೊ.ಕೆ.ಲೋಕನಾಥ್, ವನಸಿರಿ ಕಾರ್ಯಾಧ್ಯಕ್ಷ ರೊ.ಡಿ.ಬಿ.ರಾಜಶೇಖರ ಮೂರ್ತಿ, ವಲಯ ಸೇನಾನಿ ರೊ.ರಾಜಶೇಖರ್ ಕದಂಬ, ಮಾಜಿ ಅಧ್ಯಕ್ಷ ರೊ.ಎಂ.ಕೆ.ನಂಜಯ್ಯ, ರೊ.ವೀರರಾಜೇಂದ್ರ, ರೊ.ವೆಂಕಟೇಶಯ್ಯ, ರೊ.ರಾಜು, ರೊ.ಪುಟ್ಟಸಿದ್ದಪ್ಪ, ರೊ.ಶಿವಲಿಂಗಸ್ವಾಮಿ ಸೇರಿದಂತೆ ಇತರರಿದ್ದರು.

ಆಕ್ಮಿ ಶಾಲೆಯಲ್ಲಿ ಗಿಡನೆಟ್ಟ ಸಾಲುಮರದ ತಿಮ್ಮಕ್ಕ: ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಅವರು ಆಕ್ಮಿ ಶಾಲಾ ಆವರಣದಲ್ಲಿ ಪರಿಸರ ಜಾಗೃತಿ ಮೂಡಿಸಲು ಹಲಸಿನ ಗಿಡ ನೆಟ್ಟು, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ವೇಳೆ ಆಕ್ಮಿ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಶರತ್ ಕುಮಾರ್, ರೊ.ಮೋಹನ್, ಉಮೇಶ್, ಬೋಧಕ ವರ್ಗ ಹಾಗೂ ಬೋಧಕೇತರ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ವೇಳೆ ಸಾಲುಮರದ ತಿಮ್ಮಕ್ಕನವರಿಗೆ ಸಾಮೂಹಿಕ ಚಪ್ಪಾಳೆ ಮೂಲಕ ಗೌರವ ನೀಡಲಾಯಿತು.

ಮೈಸೂರು ರಾಜಪ್ರಭುತ್ವ ಜನತೆಗೆ ಕೊಡುಗೆ ನೀಡಿದರೆ, ನಮ್ಮ

ಪ್ರಜಾಪ್ರಭುತ್ವದ ಆಡಳಿತ ಬರೀ ಆಶ್ವಾಸನೆಗೆ ಸೀಮಿತ

- ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ವಿಷಾದ ; 'ಅರಮನೆಯ ದೃಶ್ಯಕಲೆ ಮತ್ತು ಕಲಾವಿದರು', 'ಕನ್ನಡ ನಾಡಿನ ವಚನಕಾರರು' ಕೃತಿಗಳ ಬಿಡುಗಡೆ
- ಮೈಸೂರು ರಾಜಮನೆತನದ ಆಡಳಿತದ ಸಿರಿವಂತಿಕೆ, ದಸರಾ ಆಚರಣೆಗೆ ಹೊಸ ದಿಕ್ಕು ತೋರಿದ ದಿನಗಳ ಮೆಲುಕು ಹಾಕಿದ ವಿಶ್ವನಾಥ್

ಮೈಸೂರು,ಜು.25(ಪಿಎಂ)– ಮೈಸೂರು ರಾಜಪ್ರಭುತ್ವ ಜನತೆಯ ಶ್ರೇಯೋಭಿವೃದ್ಧಿಗೆ ಅಪಾರ ಕೊಡುಗೆ ನೀಡಿದೆ. ಆದರೆ ಈಗ ಪ್ರಜಾಪ್ರಭುತ್ವ ಆಡಳಿತ ನಡೆಸುತ್ತಿರುವ ನಾವು ಸುಮ್ಮನೆ ಆಶ್ವಾಸನೆ ಕೊಡುವುದಕ್ಕೆ ಸೀಮಿತವಾಗಿದ್ದೇವೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ವಿಷಾದಿಸಿದರು.

ಮೈಸೂರಿನ ಶಂಕರಮಠದ ರಸ್ತೆಯ ಶ್ರೀ ನಟರಾಜ ಸಭಾಭವನದಲ್ಲಿ ಶ್ರೀ ಹೊಸಮಠದ ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು, ಕನ್ನಡ ಸಾಹಿತ್ಯ ಕಲಾಕೂಟ, ಮೈಸೂರು ಆರ್ಟ್ ಗ್ಯಾಲರಿ ಸಂಯುಕ್ತಾಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಿರಿಯ ಕಲಾವಿದರೂ ಆದ ಲೇಖಕ ಎಲ್.ಶಿವಲಿಂಗಪ್ಪ ಅವರ 'ಅರಮನೆಯ ದೃಶ್ಯಕಲೆ ಮತ್ತು ಕಲಾವಿದರು' ಮತ್ತು 'ಕನ್ನಡ ನಾಡಿನ ವಚನಕಾರರು ; ಸಚಿತ್ರ ಕಥಾ ಮಾಲಿಕೆ–1' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ವಚನಕಾರರ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ರಾಜಪ್ರಭುತ್ವ ಕೊನೆಯಾಗಿ ಇಂದು ನಾವೆಲ್ಲಾ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಆದರೂ ಇಂದಿಗೂ ಎಲ್ಲೋ ಒಂದು ಕಡೆ ಮೈಸೂರು ಸಂಸ್ಥಾನದ ಜನತೆ ರಾಜಪ್ರಭುತ್ವದ ಸ್ಮರಣೆ ಮಾಡುತ್ತಾರೆ. ಏಕೆಂದರೆ ನಮ್ಮ ಮಹಾರಾಜರು ಅಪಾರ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಶಿಕ್ಷಣ, ಆರೋಗ್ಯ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳ ಪ್ರಗತಿಗೆ ಕೊಡುಗೆ ನೀಡಿದ್ದಾರೆ. ಹಾಗಾಗಿ ಈಗಲೂ ಮಹಾರಾಜರು ಎಂದಾಕ್ಷಣ ಜನ ಎದ್ದುನಿಂತು ಕೈ ಮುಗಿಯುತ್ತಾರೆ. ನಮ್ಮ ಅರಸರು ಅಳಿದರು ಅವರ ಅಭಿವೃದ್ಧಿ ಕಾರ್ಯ ಇಂದಿಗೂ ಅಜರಾಮರ ಎಂದು ಸ್ಮರಿಸಿದರು.

ಪ್ರಜಾಪ್ರಭುತ್ವದಲ್ಲಿ ನಾವು ಸುಮ್ಮನೆ ಆಶ್ವಾಸನೆ ಕೊಡುತ್ತಾ ಹೋಗುತ್ತಿದ್ದೇವೆ. ಮುಂದಿನ ಕುರ್ಚಿ ನನಗೆ, ಹಿಂದಿನ ಕುರ್ಚಿ ನಿನಗೆ ಎಂದು ಲೆಕ್ಕಾಚಾರದಲ್ಲಿ ತೊಡಗಿದ್ದೇವೆ. 250 ವರ್ಷಗಳ ಕಾಲ ನಮ್ಮನ್ನು ಆಳಿದ ಬ್ರಿಟಿಷರು ಇಲ್ಲಿ ಹಲವು ಹೆಜ್ಜೆ ಬಿಟ್ಟಿದ್ದಾರೆ. ನಾನು ಸಂಸದನಾಗಿದ್ದ ಹಿನ್ನೆಲೆಯಲ್ಲಿ ಇಂಗ್ಲೆಂಡ್ ಸಂಸತ್ತು ಮತ್ತು ನಮ್ಮ ಸಂಸತ್ತಿನ ವ್ಯತ್ಯಾಸ ಕುರಿತು ಪುಸ್ತಕ ಬರೆಯಲು ಅಲ್ಲಿಗೆ ಹೋಗಿದ್ದೆ. ನಮ್ಮ ಪಾರ್ಲಿಮೆಂಟ್, ಲಂಡನ್ ಪಾರ್ಲಿಮೆಂಟ್‌ನ ಪ್ರತಿರೂಪ ಅಲ್ಲಿ ಪ್ರತಿ ಜೂ.5ರಂದು ರಾಣಿಯವರನ್ನು ಮೆರವಣಿಗೆಯಲ್ಲಿ ಸಂಸತ್ತಿಗೆ ಕರೆತಂದು ವಾರ್ಷಿಕ ಯೋಜನೆಗೆ ಅವರಿಂದ ಚಾಲನೆ ನೀಡಲಾಗುತ್ತದೆ. ಅವರು ಘೋಷಣೆ ಮಾಡಿದ್ದಕ್ಕೆ ಪೂರಕವಾಗಿ ಬಜೆಟ್ ಅನ್ನು ಸರ್ಕಾರ ಸಿದ್ಧಪಡಿಸುತ್ತದೆ. ಅಲ್ಲಿ ಇಂದಿಗೂ ರಾಜಪ್ರಭುತ್ವಕ್ಕೆ ಬಹಳ ಬೆಲೆ ಕೊಡಲಾಗಿದೆ ಎಂದು ಹೇಳಿದರು.

ಗಜಪಯಣ ಆರಂಭದ ಹಿನ್ನೆಲೆ: ಅಲ್ಲದೆ, ದಸರಾ ಮಹೋತ್ಸವಕ್ಕಾಗಿ ಮೈಸೂರಿಗೆ ಆನೆಗಳನ್ನು ಕರೆತರುವಾಗ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳುವ ಸಂಪ್ರದಾಯ ಆರಂಭಿಸಿದ್ದೂ ಈ ಅವಧಿಯಲ್ಲಿಯೇ. 'ಗಜಪಯಣ' ಶೀರ್ಷಿಕೆಯಡಿ ಈ ಕಾರ್ಯಕ್ರಮ ಜಾರಿಗೊಳಿಸಲಾಯಿತು. ಸ್ವತಃ ಮಹಾರಾಜರೇ ಕಾಡಿಗೆ ಹೋಗಿ ಮಾವುತರಿಗೆ ಫಲತಾಂಬೂಲ ನೀಡಿ ನಾಡಿಗೆ ಬಂದು ದಸರಾ ನಡೆಸಿಕೊಡಬೇಕು ಎಂದು ನಮಸ್ಕರಿಸಿ ಆಹ್ವಾನ ನೀಡುತ್ತಿದ್ದರು. ಅದೇ ರೀತಿಯಲ್ಲಿ ನಾವು 'ಗಜಪಯಣ' ಶುರು ಮಾಡಿದೆವು. ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಎಲ್ಲರೂ ಒಟ್ಟಿಗೆ ಹೋಗಿ ಆಹ್ವಾನ ನೀಡುವುದು ಪ್ರಾರಂಭಗೊಂಡು ಇಂದಿಗೂ ಇದು ನಡೆಯುತ್ತಿದೆ. ಆದರೆ ಒಂದು ವ್ಯತ್ಯಾಸ ಮಾಡಿದ್ದು, ಆನೆಗಳನ್ನು ನಡೆಸಿಕೊಂಡು ಬರುವುದು ಬಿಟ್ಟು ಲಾರಿಯಲ್ಲಿ ತರಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವೀರನಹೊಸಳ್ಳಿಯಿಂದ ಅರಮನೆಗೆ 75 ಕಿ.ಮೀ. ನಡೆಸಿಕೊಂಡು ಕರೆತರಬೇಕು. ಇದರಿಂದ ಮಾವುತರು ಮತ್ತು ಅವರ ಕುಟುಂಬದವರಿಗೆ ಒಂದು ವರ್ಷಕ್ಕೆ ಆಗುವಷ್ಟು ಧಾನ್ಯ ಸಿಗುತ್ತದೆ. ದಾರಿಯುದ್ದಕ್ಕೂ ಸಾರ್ವಜನಿಕರು ದಾನ ನೀಡುತ್ತಾರೆ ಎಂದರು.

ಸರ್ಕಾರದ ಅನುದಾನವಿಲ್ಲದೆ ದಸರಾ: ವಿಶ್ವವಿಖ್ಯಾತ ದಸರಾ ಯಾಕೋ ಕ್ಷೀಣಿಸುವಂತೆ ಕಾಣುತ್ತಿದೆ. ಅರಮನೆ ಎದುರು ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ನಾವಿದ್ದಾಗ ಹಣ ಕೊಡುತ್ತಿರಲಿಲ್ಲ. ಮೈಸೂರು ಅರಮನೆ ಎದುರು ಕಾರ್ಯಕ್ರಮ ಕೊಡುವುದೇ ಒಂದು ಪ್ರತಿಷ್ಠೆ ಎನ್ನುವಂತಿತ್ತು ಆದರೆ ಈಗ ಯಾರ್ಯಾರನ್ನು ಕರೆತಂದು ಹಾಡು ಹೇಳಿಸುತ್ತಿದ್ದಾರೆ. 10ರಿಂದ 15 ಲಕ್ಷ ಖರ್ಚು ಮಾಡುತ್ತಿದ್ದಾರೆ. ಅಲ್ಲದೆ, ದಸರಾ ಆಚರಣೆಗೆ ಈಗ 20ರಿಂದ 25 ಕೋಟಿ ರೂ. ಬೇಡಿಕೆ ಇಡುತ್ತಾರೆ. ಆದರೆ ನಾನು ದಸರಾ ಮಾಡುವಾಗ ಸರ್ಕಾರದಿಂದ ಹಣ ಪಡೆಯಲಿಲ್ಲ. ಬದಲಿಗೆ ಪ್ರಾಯೋಜಕತ್ವದಲ್ಲಿ ದಸರಾ ಆಚರಣೆ ಮಾಡಲಾಯಿತು ಎಂದು ಹೇಳಿದರು.

ಅರಮನೆ ಆವರಣದಲ್ಲಿನ ದೃಶ್ಯಕಲೆಯ ಕಲಾವಿದರ ಬಗ್ಗೆ ಪುಸ್ತಕ ಹೊರತಂದಿರುವುದು ನಿಜಕ್ಕೂ ಉಪಯುಕ್ತ. ಸದರಿ ಪುಸ್ತಕದಲ್ಲಿ ಮೈಸೂರಿನ ಶಿಲ್ಪಿ ನಾಗೇಂದ್ರ ಸ್ಥಪತಿ ಅವರ ಬಗ್ಗೆಯೂ ಲೇಖಕರು ಬರೆದಿದ್ದಾರೆ. ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಸ್ಥಪತಿ ಅವರಿಂದಲೇ ವಿಧಾನಸೌಧಕ್ಕೆ ಕಲಾತ್ಮಕ ವಿನ್ಯಾಸ ಕೊಡಿಸಿದ್ದಾರೆ. ಪುಸ್ತಕದ ಮೂಲಕ ಲೇಖಕರು ಹಲವು ಮಹತ್ವದ ಘಟನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಮೈಸೂರಿನ ಕಲೆ ಸಮೃದ್ಧಿಗೆ ಹೇಗೆ ಕಲಾವಿದರು ಕಾರಣರಾದರೂ ಎಂಬುದನ್ನು ಶಿವಲಿಂಗಪ್ಪ ಅನಾವರಣ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುಸ್ತಕ ಪ್ರಕಟಣೆಗೆ ಸಹಕಾರ: ಇಂದು ಬಿಡುಗಡೆಗೊಂಡ ವಚನಕಾರರ ಪುಸ್ತಕಗಳನ್ನು ಉಚಿತವಾಗಿ ಶಾಲಾ–ಕಾಲೇಜು ಮಕ್ಕಳಿಗೆ ನೀಡುವ ಸಂಬಂಧ ಪ್ರಕಟಣೆಗೆ ಎಂಎಲ್‌ಸಿ ಅನುದಾನದಲ್ಲಿ ಹಣ ಕಲ್ಪಿಸಬೇಕೆಂಬ ಮನವಿಗೆ ಅಗತ್ಯ ಸಹಕಾರ ನೀಡುವುದಾಗಿ ವಿಶ್ವನಾಥ್ ಆಶ್ವಾಸನೆ ನೀಡಿದರು. 'ಅರಮನೆಯ ದೃಶ್ಯಕಲೆ ಮತ್ತು ಕಲಾವಿದರು' ಪುಸ್ತಕವನ್ನು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು. ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೃತಿಗಳ ಕುರಿತು ಲೇಖಕ ಡಾ.ಸಿ.ನಾಗಣ್ಣ ಮಾತನಾಡಿದರು. ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕೃತಿಗಳ ಕರ್ತೃ ಎಲ್.ಶಿವಲಿಂಗಪ್ಪ ಮತ್ತಿತರು ಹಾಜರಿದ್ದರು.



ಮೈಸೂರಿನ ಶ್ರೀ ನಟರಾಜ ಸಭಾಭವನದಲ್ಲಿ ಸೋಮವಾರ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

> 'ಅರಮನೆ ದೃಶ್ಯಕಲೆ ಮತ್ತು ಕಲಾವಿದರು' ಕೃತಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಬಗ್ಗೆಯೂ ಬರೆದಿದ್ದಾರೆ. ಮೈಸೂರಲ್ಲಿ ಕಲೆ ಅರಳಲು ಮುಮ್ಮಡಿಯವರ ಪ್ರೋತ್ಸಾಹ ಅಪಾರ. ಎಷ್ಟೊಂದು ಕಲಾವಿದರು ಮೈಸೂರಿನವರೇ ಎಂಬುದು ನಮ್ಮ ಹೆಮ್ಮೆ. ಕಲೆಗೆ ಮೈಸೂರು ಉತ್ತಮ ವಾತಾವರಣ ಹೊಂದಿದೆ. ಅದನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಿದೆ. ಈ ನಿಟ್ಟಿನಲ್ಲಿ ಸಹಕಾರ ನೀಡಲು ಅರಮನೆ ಸದಾ ಸಿದ್ಧವಾಗಿದೆ.
> -ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ರಾಜವಂಶಸ್ಥ

'ಏಯ್ ಅರಮನೆ ಖಾಲಿ ಮಾಡಿ' ಎಂದಿದ್ದರು

> ಇಂಗ್ಲೆಂಡ್ ರಾಜಮನೆತನಕ್ಕೆ ಅಲ್ಲಿ ಅಷ್ಟೊಂದು ಗೌರವ ಕೊಡಲಾಗುತ್ತಿದೆ. ಆದರೆ ನಾವಿಲ್ಲಿ ನಮ್ಮ ರಾಜವಂಶಸ್ಥರನ್ನು ಕೋರ್ಟ್‌ಗೆ ಅಲೆಯುವಂತೆ ಮಾಡಿದ್ದೇವೆ. ನಮ್ಮ ಊರಿನವರೇ ಮುಖ್ಯಮಂತ್ರಿ ಆಗಿದ್ದವರು ರಾಜಮನೆತನ ದವರನ್ನು 'ಏಯ್ ಅರಮನೆ ಖಾಲಿ' ಮಾಡಿ ಎಂದಿದ್ದರು ಎಂದು ಬೇಸರ ವ್ಯಕ್ತಪಡಿಸಿದರು. ಅರಮನೆಯಲ್ಲಿ ಒಬ್ಬರು ಆಸ್ಥಾನ ವಿದ್ವಾನ್ ಇರುತ್ತಿದ್ದ ಮಾದರಿಯಲ್ಲಿ ನಾನು 1994–95ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವನಾಗಿದ್ದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರಿಗೆ ಹೇಳಿ ಅರಮನೆ ಮುಂಭಾಗದಲ್ಲಿ ಆಸ್ಥಾನ್ ವಿದ್ವಾನ್ ಒಬ್ಬರನ್ನು ಆಯ್ಕೆ ಮಾಡುವ ಯೋಜನೆ ಜಾರಿಗೊಳಿಸಲಾಯಿತು. ಅವರು ಇಡೀ ವರ್ಷ ರಾಜ್ಯದ ಅತಿಥಿಯಾಗಿ ಪ್ರವಾಸ ಮಾಡಬೇಕು ಎಂಬ ಯೋಜನೆಯಾಗಿರುವ ಇದು ಇಂದಿಗೂ ನಡೆದುಕೊಂಡು ಬರುತ್ತಿದೆ ಎಂದು ಹೇಳಿದರು.
> -ಎ.ಹೆಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

ಜಮೀರ್ ಹೇಳಿಕೆ ಖಂಡಿಸಿ ಒಕ್ಕಲಿಗ ಸಮುದಾಯ ಪ್ರತಿಭಟನೆ



ಮೈಸೂರು, ಜು.25(ಎಂಕೆ)– ಒಕ್ಕಲಿಗ ಸಮುದಾಯ ಹಾಗೂ ನಾಯಕರ ವಿರುದ್ಧ ಶಾಸಕ ಜಮೀರ್ ಅಹ್ಮದ್ ಖಾನ್ ಅವಹೇಳನಕಾರಿ ಹೇಳಿಕೆ ನೀಡುತ್ತಿದ್ದಾರೆ ಎಂದು ಆರೋಪಿಸಿ ರಾಜ್ಯ ಹಾಗೂ ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿ ವೃತ್ತದಲ್ಲಿ ಜಮಾವಣೆಗೊಂಡ ಸಂಘದ ಸದಸ್ಯರು ಶಾಸಕ ಜಮೀರ್ ಅಹ್ಮದ್ ಖಾನ್ ವಿರುದ್ಧ ಘೋಷಣೆ ಕೂಗಿ, ಭಾವಚಿತ್ರವುಳ್ಳ ಕರಪತ್ರಗಳನ್ನು ಹರಿದು ಆಕ್ರೋಶ ವ್ಯಕ್ತಪಡಿಸಿದರು. ಒಕ್ಕಲಿಗ ಸಮುದಾಯವನ್ನು ಗುರಿಯಾಗಿಸಿಕೊಂಡು ಮಾತನಾಡಿದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್ ಮಾತನಾಡಿ, ರಾಜಕೀಯ ಅಸ್ಮಿತೆ ಉಳಿಸಿಕೊಳ್ಳಲು ಯಾವುದೇ ಸಮುದಾಯ ಹಾಗೂ ನಾಯಕರ ವಿರುದ್ಧ ಹಗುರವಾಗಿ ಮಾತನಾಡಬಾರದು. ಶಾಸಕ ಜಮೀರ್ ಅಹ್ಮದ್ ಖಾನ್ ಒಕ್ಕಲಿಗ ಸಮುದಾಯದ ನಾಯಕರ ವಿರುದ್ಧ ನಾಲಿಗೆ ಹರಿಬಿಟ್ಟಿದ್ದಾರೆ. ಕೂಡಲೇ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನಲ್ಲಿ ಜಮೀರ್ ಅವರನ್ನು ಮೂಲೆಗುಂಪು ಮಾಡಲಾಗಿದೆ ಹೀಗಾಗಿಯೇ ಬೀಸು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಒಕ್ಕಲಿಗ ಸಮುದಾಯದ ನಾಯಕರು. ಅವರನ್ನು ಅವಹೇಳನ ಮಾಡುವುದನ್ನು ಮುಂದುವರೆಸಿದರೆ ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಂಘದ ರಾಜ್ಯ ಕಾರ್ಯದರ್ಶಿ ಸಿ.ಜಿ.ಗಂಗಾಧರ ಮಾತನಾಡಿ, ಜಮೀರ್ ಅಹ್ಮದ್ ಹೇಳಿಕೆಯನ್ನು ಕಾಂಗ್ರೆಸ್ ಗಂಭೀರವಾಗಿ ಪರಿಗಣಿಸಬೇಕು. ಜತೆಗೆ ಯಾವುದೇ ಪಕ್ಷದ ನಾಯಕರು ಮುಂದಿನ ದಿನಗಳಲ್ಲಿ ಹಗುರ ಹೇಳಿಕೆ ನೀಡಿದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಗೌರವಾಧ್ಯಕ್ಷ ಜಯರಾಮ್, ನಿಕಟಪೂರ್ವ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಉಪಾಧ್ಯಕ್ಷರಾದ ರವಿ ರಾಜಕೀಯ, ಬನ್ನೂರು ಮಹೇಶ್, ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಗುರುರಾಜ್, ಎ ರವಿ, ಸುಶೀಲಾ ನಂಜಪ್ಪ, ಗಿರೀಶ್ ಗೌಡ, ಪ್ರಶಾಂತ್ ಗೌಡ, ಕೆ.ಪಿ.ನಾಗಣ್ಣ, ಬಿ.ಪಿ.ಬೋರೇಗೌಡ, ಸಿದ್ಧಾರ್ಥನಗರ ಒಕ್ಕಲಿಗ ಸಂಘದ ಅಧ್ಯಕ್ಷ ಸುರೇಶ್ ಗೌಡ, ಕಾರ್ಯದರ್ಶಿ ಪ್ರತಾಪ್, ಒಕ್ಕಲಿಗ ವಿಕಾಸ ವೇದಿಕೆ ಅಧ್ಯಕ್ಷೆ ಯಮುನಾ, ಎನ್‌ಆರ್ ಮೊಹಲ್ಲಾ ರಾಮಣ್ಣ ಹಿನಕಲ್ ರಾಜ್ ಕುಮಾರ್, ನಾಗೇಂದ್ರ ಚಲನಚಿತ್ರ ನಟ ನೀನಾಸಂ ಅಶ್ವತ್, ಒಕ್ಕಲಿಗ ಸಮುದಾಯದ ಮುಖಂಡರಾದ ಕೆ.ಉಮಾಶಂಕರ್, ಪಾಲಾಕ್ಷ, ವಿಜಯನಗರ ಮಂಜು ಮತ್ತಿತರರಿದ್ದರು.

ಒಂಟಿಕೊಪ್ಪಲು ಶಾರದ ನ್ಯಾಯಬೆಲೆ ಅಂಗಡಿ ಮುಂದೆ ಮಹಿಳೆಯರ ಪ್ರತಿಭಟನೆ



ಮೈಸೂರು, ಜು.25(ಎಂಕೆ)– ಮೈಸೂರಿನ ಒಂಟಿಕೊಪ್ಪಲಿನ ಆದಿಪಂಪ ರಸ್ತೆಯಲ್ಲಿರುವ ಶಾರದ ನ್ಯಾಯಬೆಲೆ ಅಂಗಡಿ ಸಿಬ್ಬಂದಿ ವಿರುದ್ಧ ಸ್ಥಳೀಯ ಮಹಿಳಾ ನಿವಾಸಿಗಳು ಸೋಮವಾರ ಪ್ರತಿಭಟನೆ ನಡೆಸಿದರು. ಒಂಟಿಕೊಪ್ಪಲು ಹಾಗೂ ಪಡುವಾರಹಳ್ಳಿ ವ್ಯಾಪ್ತಿಯ ಶಾರದ ನ್ಯಾಯಬೆಲೆ ಅಂಗಡಿ ಎದುರು ಜಮಾಯಿಸಿ ನಿವಾಸಿಗಳು ಸಿಬ್ಬಂದಿಯ ಕಾರ್ಯವೈಖರಿಗೆ ತೀವ್ರ ಬೇಸರ ವ್ಯಕ್ತಪಡಿಸಿದರಲ್ಲದೆ ಸರಿಯಾದ ಸಮಯಕ್ಕೆ ಪಡಿತರ ವಿತರಣೆ ಮಾಡದೆ ಸತಾಯಿಸುತ್ತಿದ್ದಾರೆ ಎಂದು ದೂರಿದರು.


ಅಲ್ಲದೆ ಪಡಿತರ ನೀಡುವಾಗ ತೂಕ ಸರಿಯಾಗಿ ಮಾಡುವುದಿಲ್ಲ. ಬೇಕಾಬಿಟ್ಟಿಯಾಗಿ ವಿತರಣೆ ಮಾಡುತ್ತಿದ್ದಾರೆ. ಕಳೆದ ಐದಾರು ದಿನಗಳಿಂದ ಬಾಗಿಲು ಮುಚ್ಚಿದ್ದಾರೆ. ಇದೇ ರೀತಿ ಮುಂದುವರಿದರೆ ಬಡವರ ಗತಿಯೇನು ಎಂದು ಪ್ರಶ್ನಿಸಿದರಲ್ಲದೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮಗೊಳ್ಳದಿದ್ದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಎದುರೇ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ನಿವಾಸಿಗಳಾದ ವರಲಕ್ಷ್ಮಿ ಅಜಯ್, ಲಕ್ಷ್ಮಮ್ಮ, ಸೌಭಾಗ್ಯ, ನಳಿನಿ, ಲಲಿತಮ್ಮ, ಭಾಗ್ಯ, ಅನುಸೂಯ, ಗಿರಿಜ, ಮಹದೇವಮ್ಮ, ಪ್ರಮೀಳಾ, ರಂಜಿನಿ ಇನ್ನಿತರರಿದ್ದರು.

ನಾಳೆ ಪ್ರತಿಭಟನೆ

ಮೈಸೂರು, ಜು.25– ಒಪ್ಪಂದದಂತೆ ವಿವೇಕ ಸ್ಮಾರಕದ ಜೊತೆಗೆ ಎನ್‌ಟಿಎಂ ಶಾಲೆ ನಿರ್ಮಿಸುವಂತೆ ಒತ್ತಾಯಿಸಿ ಜು.27ರಂದು ಬೆಳಗ್ಗೆ 11 ಗಂಟೆಗೆ ಅದೇ ಸ್ಥಳದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸುವ ಮೂಲಕ ಮತ್ತೆ ಹೋರಾಟ ಮುಂದುವರೆಸಲಾಗುವುದು ಎಂದು ಮಹಾರಾಣಿ(ಎನ್‌ಟಿಎಂ) ಶಾಲೆ ಉಳಿಸಿ ಹೋರಾಟ ಒಕ್ಕೂಟದ ಎಂ.ಮೋಹನ್ ಕುಮಾರ್ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರಪತಿಗಳ ಪ್ರಮಾಣ ವಚನ ವೇಳೆ ಮಲ್ಲಿಕಾರ್ಜುನ ಖರ್ಗೆಗೆ ಅಗೌರವ : ರಾಜ್ಯಸಭೆಗೆ ಕಾಂಗ್ರೆಸ್ ದೂರು

ನವದೆಹಲಿ: ರಾಷ್ಟ್ರಪತಿಗಳ ಪ್ರಮಾಣ ವಚನ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಅನುಗುಣವಾಗಿ ಸ್ಥಾನ ನೀಡಿಲ್ಲ ಎಂದು ಕಾಂಗ್ರೆಸ್ ಪಕ್ಷ ರಾಜ್ಯಸಭೆ ಅಧ್ಯಕ್ಷ ಎಂ ವೆಂಕಯ್ಯ ನಾಯ್ಡು ಅವರಿಗೆ ಪತ್ರ ಬರೆದು ದೂರಿದೆ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಷ್ಟ್ರಪತಿಗಳ ಪದಗ್ರಹಣ ಸಮಾರಂಭದಲ್ಲಿ ಅವರ ಸ್ಥಾನಕ್ಕೆ ಅನುಗುಣವಾದ ಜಾಗವನ್ನು ನೀಡಿರಲಿಲ್ಲ ಎಂದಿದ್ದಾರೆ.



ಕಾಂಗ್ರೆಸ್ ರಾಜ್ಯಸಭಾ ಸಂಸದ ಜೈರಾಮ್ ರಮೇಶ್ ಅವರು ಎಲ್ಲಾ ವಿರೋಧ ಪಕ್ಷಗಳು (ತೃಣಮೂಲ ಸೇರಿದಂತೆ) ಸಹಿ ಮಾಡಿದ ಪತ್ರವನ್ನು ಟ್ವೀಟ್ ಮಾಡಿದ್ದಾರೆ. ಅದರಲ್ಲಿ ಅವರು ಹಿರಿಯ ನಾಯಕನಿಗೆ 'ಉದ್ದೇಶಪೂರ್ವಕ ಅಗೌರವ' ತೋರಿಸಲಾಗಿದೆ ಎಂದು ದೂರಿದ್ದಾರೆ.

ಅತ್ಯಂತ ಹಿರಿಯ ನಾಯಕನಿಗೆ ತೋರಿದ ಈ ಉದ್ದೇಶಪೂರ್ವಕ ಅಗೌರವದ ಬಗ್ಗೆ ನಮ್ಮ ಆಘಾತ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಲು ನಾವು ಬರೆಯುತ್ತಿದ್ದೇವೆ. ಖರ್ಗೆ ಅವರಿಗೆ ನೀಡಬೇಕಾದ ಪ್ರೋಟೋಕಾಲ್‌ಗೆ ಅನುಗುಣವಾಗಿ ಇರಲಿಲ್ಲ ಎಂದು ಕಾಂಗ್ರೆಸ್ ನಾಯಕ ಪತ್ರದಲ್ಲಿ ಬರೆದಿದ್ದಾರೆ.

ಇಂದು ಬೆಳಿಗ್ಗೆ ದ್ರೌಪತಿ ಮುರ್ಮು ಅವರು ರಾಷ್ಟ್ರಪತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ಸಮಾರಂಭದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಸಂಸತ್ತಿನ ಸೆಂಟ್ರಲ್ ಹಾಲ್‌ನ ಮುಂದಿನ ಸಾಲಿನ ಎಡ ಮೂಲೆಯಲ್ಲಿ ಕುಳಿತಿದ್ದರು. ಬಿಜೆಪಿ ಮುಖ್ಯಸ್ಥ ಜೆಪಿ ನಡ್ಡಾ ಮತ್ತು ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಹೆಚ್ಚು ಪ್ರಮುಖ ಸ್ಥಾನಗಳನ್ನು ಹೊಂದಿದ್ದರು ಎಂದು ಕಾಂಗ್ರೆಸ್ ಆರೋಪಿಸಿದೆ. ಇದು ಗೃಹ ಸಚಿವಾಲಯದಿಂದ ಉದ್ದೇಶಪೂರ್ವಕ ಅವಮಾನ ಎಂದು ಕಾಂಗ್ರೆಸ್ ಆರೋಪಿಸಿದೆ. ಆರೋಪಕ್ಕೆ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಅಧಿಕಾರಿಗಳು ಖರ್ಗೆ ಅವರನ್ನು ಮುಂದಿನ ಸಾಲಿನಲ್ಲಿ ಕೂರಿಸಲಾಗಿತ್ತು ಆದ್ದರಿಂದ ಯಾವುದೇ ಪ್ರೋಟೋಕಾಲ್ ಉಲ್ಲಂಘನೆಯಾಗಿಲ್ಲ ಎಂದು ಹೇಳಿದ್ದಾರೆ.

100 ಕೋಟಿ ರೂ.ಗೆ ರಾಜ್ಯಪಾಲರ ಹುದ್ದೆ, ರಾಜ್ಯಸಭಾ ಸ್ಥಾನದ ಭರವಸೆ

ನಾಲ್ವರ ಬಂಧಿಸಿದ ಸಿಬಿಐ

ನವದೆಹಲಿ: ರಾಜ್ಯಸಭಾ ಸ್ಥಾನ ಮತ್ತು ರಾಜ್ಯಪಾಲರ ಹುದ್ದೆ ಕೊಡಿಸುವುದಾಗಿ ಸುಳ್ಳು ಭರವಸೆ ನೀಡಿ 100 ಕೋಟಿ ರೂಪಾಯಿ ವಂಚಿಸಲು ಯತ್ನಿಸಿದ ಆರೋಪದ ಮೇಲೆ ಸಿಬಿಐ ಬಹು ರಾಜ್ಯಗಳ ವಂಚಕರ ಜಾಲವನ್ನು ಭೇದಿಸಿದ್ದು, ನಾಲ್ವರನ್ನು ಬಂಧಿಸಿದೆ ಎಂದು ಸೋಮವಾರ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಸಿಬಿಐ ಶೋಧ ನಡೆಸಿದ್ದು, ಗ್ಯಾಂಗ್‌ನ ನಾಲ್ವರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಶೋಧ ಕಾರ್ಯಾಚರಣೆ ವೇಳೆ ಆರೋಪಿಯೊಬ್ಬ ಸಿಬಿಐ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಬಿಐ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದಕ್ಕಾಗಿ ಆತನ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನ್ನ ಎಫ್‌ಐಆರ್‌ನಲ್ಲಿ ಮಹಾರಾಷ್ಟ್ರದ ಲಾತೂರ್‌ನ ಕಮಲಾಕರ್ ಪ್ರೇಮಕುಮಾರ್ ಬಂಡಗರ್, ಕರ್ನಾಟಕದ ಬೆಳಗಾವಿಯ ರವೀಂದ್ರ ವಿಠಲ್ ನಾಯಕ್ ಮತ್ತು ದೆಹಲಿ–ಎನ್‌ಸಿಆರ್ ಮೂಲದ ಮಹೇಂದ್ರ ಪಾಲ್ ಅರೋರಾ, ಅಭಿಷೇಕ್ ಬೂರಾ ಮತ್ತು ಮೊಹಮ್ಮದ್ ಐಜಾಜ್ ಖಾನ್ ಅವರನ್ನು ಹೆಸರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. "ಹಣ ನೀಡಿದರೆ ರಾಜ್ಯಸಭೆಯ ಸ್ಥಾನಗಳ ವ್ಯವಸ್ಥೆ, ರಾಜ್ಯಪಾಲರ ಹುದ್ದೆ, ಕೇಂದ್ರ ಸರ್ಕಾರದ ಸಚಿವಾಲಯ ಮತ್ತು ಇತರೆ ಇಲಾಖೆಗಳ ಅಡಿಯಲ್ಲಿ ಬರುವ ಸರ್ಕಾರದ ವಿವಿಧ ಸಂಸ್ಥೆಗಳ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು ಎಂದು ಜನರಿಗೆ ಸುಳ್ಳು ಭರವಸೆ ನೀಡಿ ವಂಚಿಸುವ ಏಕೈಕ ಉದ್ದೇಶ ಹೊಂದಿದ್ದರು" ಎಂದು ಎಫ್‌ಐಆರ್ ನಲ್ಲಿ ಸಿಬಿಐ ಉಲ್ಲೇಖಿಸಿದೆ.

ಪಾಸ್ವಾನ್ ಬಂಗಲೆ ಈಗ ಮಾಜಿ ರಾಷ್ಟ್ರಪತಿ ಕೋವಿಂದ್ ಅಧಿಕೃತ ನಿವಾಸ

ನವದೆಹಲಿ: ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೂತನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಅಧಿಕಾರ ಹಸ್ತಾಂತರಿಸಿದ ಬಳಿಕ, ತಮ್ಮ ಅಧಿಕೃತ ನಿವಾಸವನ್ನು ಜನಪಥ್‌ನ ಬಂಗಲೆಗೆ ವರ್ಗಾಯಿಸಿದ್ದಾರೆ.



ಜನಪಥ್‌ನಲ್ಲಿ ಈ ಹಿಂದೆ ಮಾಜಿ ಕೇಂದ್ರ ಸಚಿವ ರಾಮ್ ವಿಲಾಸ್ ಪಾಸ್ವಾನ್ ಅವರಿದ್ದ ಬಂಗಲೆಯಲ್ಲಿ ಇನ್ನು ಮುಂದೆ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ವಾಸವಿರಲಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ಅಧಿಕಾರ ಹಸ್ತಾಂತರಿಸಿದ ಬಳಿಕ ಕೋವಿಂದ್ ತಮ್ಮ ಹೊಸ ನಿವಾಸಕ್ಕೆ ಪ್ರವೇಶಿಸಿದ್ದು, ಈ ಬಂಗಲೆಯಲ್ಲಿ ಪಾಸ್ವಾನ್ ಮೂರು ದಶಕಗಳ ಕಾಲ ವಾಸವಿದ್ದರು. ಈ ಬಂಗಲೆಯನ್ನು ಖಾಲಿ ಮಾಡುವಂತೆ ರಾಮ್ ವಿಲಾಸ್ ಪಾಸ್ವಾನ್ ಅವರ ಪುತ್ರ ಚಿರಾಗ್ ಪಾಸ್ವಾನ್‌ಗೆ ನೋಟೀಸ್ ಜಾರಿಗೊಳಿಸಿದ ಬಳಿಕ ಏಪ್ರಿಲ್‌ನಲ್ಲಿ ಬಂಗಲೆ ಖಾಲಿಯಾಗಿತ್ತು. ಬಳಿಕ ಅದನ್ನು ಮಾಜಿ ರಾಷ್ಟ್ರಪತಿಗಳ ವಾಸ್ತವ್ಯಕ್ಕೆ ಸಿದ್ಧಪಡಿಸಲಾಗಿತ್ತು.

ಯುವ ಸ್ವ ಸಹಾಯ ಗುಂಪುಗಳ ರಚನೆಗೆ ಅರ್ಜಿ ಆಹ್ವಾನ

ಮೈಸೂರು, ಜು.25– ಜಿಲ್ಲಾ ಪಂಚಾಯತ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಜಿಲ್ಲಾ ತಾಲ್ಲೂಕುವಾರು ಸರ್ಕಾರೇತರ ಸಂಸ್ಥೆಗಳು ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯಭರಿತ ಯುವಸಂಘಟನೆಯಲ್ಲಿ ಆಸಕ್ತಿಯುಳ್ಳ ಯುವಕರು ತಮ್ಮ ಹೆಸರು, ಆಧಾರ್‌ಕಾರ್ಡ್ ನೀಡಿ ಸ್ಥಳೀಯ ಗ್ರಾಮ ಪಂಚಾಯತ್ ಮತ್ತು ಕ್ರೀಡಾ ಇಲಾಖೆಯಲ್ಲಿ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಕ್ಷೇತ್ರ ಸಂಪರ್ಕ ಅಧಿಕಾರಿಯಾದ ಎಂ.ಚೇತನ್ ದೂ.ಸಂ:0821–2444922, ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 26 ಜುಲೈ 2022

ವಚನ ಸಾಹಿತ್ಯ ಇಂದಿಗೂ ಪ್ರಸ್ತುತ: ಜಿಟಿಡಿ



ಮೈಸೂರು, ಜು.25(ಎಸ್‌ಪಿಎನ್)– 12ನೇ ಶತಮಾನದ ವಚನ ಚಳವಳಿ ಪ್ರಜಾಪ್ರಭುತ್ವದ ಬುನಾದಿಯಾಗಿದ್ದು, ವಚನ ಸಾಹಿತ್ಯ ಇಂದಿಗೂ ಪ್ರಸ್ತುತವಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಬೋಗಾದಿ ಬಸವೇಶ್ವರ ಸಮುದಾಯದ ಭವನದಲ್ಲಿ ಬೋಗಾದಿ ಬಸವ ಬಳಗ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕೆಎಎಸ್ ಅಧಿಕಾರಿಗಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡಿದರು. ಬಸವಣ್ಣ ಮತ್ತು ಶರಣರ ತತ್ವಾದರ್ಶಗಳನ್ನು ಪಾಲಿಸಿದರೆ, ಜೀವನದಲ್ಲಿ ನೆಮ್ಮದಿ, ಶಾಂತಿ, ಸಹಬಾಳ್ವೆ ಮೂಡಿಸಲು ಸಾಧ್ಯವಾಗುತ್ತದೆ. ಹಾಗಾಗಿ ಪ್ರತಿಯೊಬ್ಬರು ಶರಣ ತತ್ವ ಪಾಲನೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ತಂತ್ರಜ್ಞಾನ ಮುಂದುವರೆದಂತೆ ಇಂದಿನ ಯುವಕರು ಹಣ ಗಳಿಸುವ ಉದ್ಯೋಗಗಳ ಹಿಂದೆ ಓಡುತ್ತಿದ್ದಾರೆ. ಆದರೆ, ಬದುಕಿನ ಮಾನವೀಯ ಮೌಲ್ಯಗಳನ್ನು ಮರೆತು ಜೀವನ ಸಾಗಿಸುತ್ತಿರುವುದು ಬೇಸರದ ಸಂಗತಿ ಎಂದರು.

ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯ ಹೆಚ್ಚುವರಿ ಆಯುಕ್ತ ಪಿ.ಶಿವರಾಜು ಮಾತನಾಡಿ,ಬಸವಣ್ಣನವರ ಚಿಂತನೆಗಳನ್ನು ಇಂದಿಗೂ, ಮುಂದಕ್ಕೂ ಪ್ರಸ್ತುತ, ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಉತ್ತಮ ಸಮಾಜ ಕಟ್ಟಲು ಸಾಧ್ಯವಿದೆ ಎಂದು ತಿಳಿಸಿದರು. ಮಕ್ಕಳು ಪೋಷಕರ ಅಭಿಲಾಷೆಯಂತೆ ವಿದ್ಯಾಭ್ಯಾಸ ಮಾಡಿ, ಸಾಧನೆ ಮಾಡುವ ಮೂಲಕ ದೇಶಕ್ಕೆ ಉನ್ನತಿಗೆ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.

ಪ್ರಾದೇಶಿಕ ಆಯುಕ್ತರ ಕಚೇರಿಯ ಹೆಚ್ಚುವರಿ ಆಯುಕ್ತ ಪಿ.ಶಿವರಾಜು, ನಿವೃತ್ತ ಕೆಎಎಸ್ ಅಧಿಕಾರಿ ಹಾಗೂ ಜೆಎಸ್‌ಎಸ್ ಕಾರ್ಯನಿರ್ವಾಹಕಕಾರ್ಯದರ್ಶಿ ಡಾ. ಸಿ.ಜಿ.ಬೆಟ್ಸೂರ್ ಮಠ, ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತ ಆರ್.ಎಸ್.ಪೂಜಾ, ವಾಣಿಜ್ಯ ತೆರಿಗೆ ಅಧಿಕಾರಿ ಡಾ.ಆರ್.ಭಾವನಾ ಹಾಗೂ ತಹಸೀಲ್ದಾರ್ ಎನ್.ಎಸ್.ನರಗುಂದ ಅವರನ್ನು ಸನ್ಮಾನಿಸಲಾಯಿತಲ್ಲದೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ವೇದಿಕೆಯಲ್ಲಿ ಬೋಗಾದಿ ಬಸವ ಬಳಗ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ನಾಗರಾಜು, ಕಾರ್ಯದರ್ಶಿ ಕೆ.ವಿ.ನಾಗರಾಜು ಉಪಸ್ಥಿತರಿದ್ದರು.

ರಾಜಕೀಯ ತೊರೆಯಬೇಕೆಂದು ಯೋಚಿಸಿದ್ದೆ: ನಿತಿನ್ ಗಡ್ಕರಿ ಅಚ್ಚರಿಯ ಹೇಳಿಕೆ



ಮುಂಬೈ: ನನಗೆ ಆಗಾಗ್ಗೆ ರಾಜಕೀಯ ತೊರೆಯಬೇಕು ಅನ್ನಿಸುತ್ತದೆ. ಬಹಳಷ್ಟು ಬಾರಿ ಈ ಬಗ್ಗೆ ಯೋಚಿಸಿದ್ದೇನೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಮಹಾರಾಷ್ಟ್ರದ ನಾಗ್ಪುರದಲ್ಲಿ ನಡೆದ ಸಾಮಾಜಿಕ ಕಾರ್ಯಕರ್ತ ಗಿರೀಶ್ ಗಾಂಧಿ ಅವರ ಗೌರವ ಸಮರ್ಪಣಾ ಸಮಾರಂಭದಲ್ಲಿ ಮಾತನಾಡಿದ ಅವರು, ನನಗೆ ಆಗಾಗ ರಾಜಕೀಯ ತೊರೆಯಬೇಕು ಅನ್ನಿಸುತ್ತದೆ. ರಾಜಕೀಯ ತ್ಯಜಿಸುವ ಬಗ್ಗೆ ಬಹಳಷ್ಟು ಬಾರಿ ಯೋಚಿಸಿಯೂ ಇದ್ದೇನೆ. ಏಕೆಂದರೆ ರಾಜಕೀಯಕ್ಕಿಂತ ಜೀವನದಲ್ಲಿ ಹೆಚ್ಚಿನದ್ದನ್ನು ಮಾಡಬೇಕಿದೆ ಎಂದು ಹೇಳಿದ್ದಾರೆ.

ರಾಜಕೀಯವು ಸಾಮಾಜಿಕ ಬದಲಾವಣೆ ತರುವ ಅಸ್ತ್ರ ಎಂಬುದು ನನ್ನ ನಂಬಿಕೆ. ಆದರೆ ರಾಜಕೀಯಕ್ಕೆ ಬಂದ ಮೇಲೆ ಅಧಿಕಾರವನ್ನೇ ಹೆಚ್ಚಾಗಿ ಹುಡುಕುತ್ತೇವೆ ಎಂದು ಹೇಳಿದ್ದಾರೆ. ರಾಜಕೀಯವು ಸಾಮಾಜಿಕ, ಆರ್ಥಿಕ ಸುಧಾರಣೆಯ ನಿಜವಾದ ಸಾಧನವಾಗಿದೆ. ಅದಕ್ಕಾಗಿಯೇ ನಾವು ನೂರಕ್ಕೆ ನೂರರಷ್ಟು ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತೇವೆ. ಅಧಿಕಾರಕ್ಕೆ ಬಂದ ನಂತರ ರಾಜಕಾರಣಿಗಳು ಶಿಕ್ಷಣ, ಕಲೆ ಇತ್ಯಾದಿಗಳ ಅಭಿವೃದ್ಧಿಗೆ ಶ್ರಮಿಸಬೇಕು. ರಾಜಕೀಯ ಎಂಬ ಪದದ ಅರ್ಥವನ್ನು ಅರ್ಥ ಮಾಡಿಕೊಳ್ಳಬೇಕು. ಅದು ಸಮಾಜ, ದೇಶದ ಹಿತಕ್ಕಾಗಿಯೇ ಅಥವಾ ಸರ್ಕಾರದಲ್ಲಿ ಇರುವುವರ ಹಿತಕ್ಕಾಗಿಯೇ ಎಂಬುದನ್ನು ಅವಲೋಕನ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಂದನೇ ಪುಟದಿಂದ

ಭಾರೀ ಪ್ರಮಾಣದ ಪಡಿತರ ಅಕ್ಕಿ ವಶ

ಬಂಕರ್‌ಗಳ ನಿರ್ಮಿಸಿರುವುದು ದಾಳಿ ವೇಳೆ ಪತ್ತೆಯಾಗಿದೆ. ಈ ಬಂಕರ್‌ಗಳಲ್ಲಿ ಒಟ್ಟು 124 ಕ್ವಿಂಟಾಲ್ ಅಕ್ಕಿ ದೊರೆತಿದೆ. ಒಟ್ಟಾರೆ ರೈಸ್‌ಮಿಲ್‌ನಲ್ಲಿ 16,60,750 ರೂ. ಮೌಲ್ಯದ 365 ಕ್ವಿಂಟಾಲ್ ಅಕ್ಕಿ ದೊರೆತಿದೆ. ಈ ರೈಸ್‌ಮಿಲ್ ಅನ್ನು ಸಂಪೂರ್ಣವಾಗಿ ಪರಿಶೀಲಿಸಿದಾಗ ಭತ್ತವನ್ನು ಹಲ್ಲಿಂಗ್ ಮಾಡಿರುವ ಯಾವುದೇ ಕುರುಹುಗಳಾಗಲೀ ಪತ್ತೆಯಾಗಿಲ್ಲ. ಆದರೆ, ಅಕ್ಕಿಯನ್ನು ಪಾಲಿಶ್ ಮಾಡಿರುವ ಕುರುಹುಗಳು ಮಾತ್ರ ಪತ್ತೆಯಾಗಿದೆ. ಈ ಮಿಲ್ ದಿವಂಗತ ಬೆಟ್ಟೇಗೌಡ ಎಂಬುವವರಿಗೆ ಸೇರಿದ್ದಾಗಿದ್ದು, ಹಾಲಿ ಸುಮಂತ್ ಎಂಬಾತ ನಡೆಸುತ್ತಿದ್ದಾನೆ. ಕೊಪ್ಪಳ ಜಿಲ್ಲೆಯ ಗಂಗಾವತಿಯ ಬಾಷಾ ಎಂಬಾತ ಸೂಪರ್‌ವೈಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾನೆ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ಪಡಿತರ ಅಕ್ಕಿಯನ್ನು ಅಕ್ರಮವಾಗಿ ಖರೀದಿಸಿ ಪಾಲಿಶ್ ಮಾಡಿದ ನಂತರ ವಿವಿಧ ಬ್ರಾಂಡ್‌ಗಳಲ್ಲಿ ರೀ ಪ್ಯಾಕಿಂಗ್ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿದೆ. ಬಾಲಾಜಿ ರೈಸ್‌ಮಿಲ್ ಅಕ್ಕಿ ಗಿರಾಣಿಯಾಗಿದ್ದು, ಭತ್ತವನ್ನು ಹಲ್ಲಿಂಗ್ ಮಾಡಿ ಅಕ್ಕಿ ಮಾಡುವುದು ಈ ಮಿಲ್ಲಿನ ಕೆಲಸವಾಗಿದ್ದರು ಕೂಡ ಅಂತಹ ಯಾವುದೇ ಕೆಲಸ ಮಾಡದೆ ಪಡಿತರ ಅಕ್ಕಿ ಪಾಲಿಶ್ ಮಾಡಿ ಮಾರಾಟ ಮಾಡುವ ದಂಧೆ ಇಲ್ಲಿ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಡಿತರ ಅಕ್ಕಿಯನ್ನು ವ್ಯವಸ್ಥಿತವಾಗಿ ಪಾಲಿಶ್ ಮಾಡಲು ಆಧುನಿಕ ತಂತ್ರಜ್ಞಾನವನ್ನು ಬಳಸಲಾಗುತ್ತಿತ್ತು. ನೆಪ ಮಾತ್ರಕ್ಕೆ ಸ್ವಲ್ಪ ಪ್ರಮಾಣದ ಭತ್ತದ ದಾಸ್ತಾನು ಇಟ್ಟುಕೊಂಡು ಭತ್ತವನ್ನು ಹಲ್ಲಿಂಗ್ ಮಾಡುತ್ತಿರುವಂತೆ ಅಧಿಕಾರಿಗಳಿಗೆ ತೋರಿಸುವ ತಂತ್ರವನ್ನು ಈ ಮಿಲ್‌ನವರು ಮಾಡುತ್ತಿದ್ದರು ಎಂದು ಆಹಾರ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂಬಂಧ ಬಾಲಾಜಿ ರೈಸ್‌ಮಿಲ್ ಮಾಲೀಕರು, ಮಿಲ್ ನಡೆಸುತ್ತಿದ್ದ ಸುಮಂತ್, ಟಿಎನ್–29, ಬಿಸಿ6113 ಸಂಖ್ಯೆಯ ಲಾರಿ ಚಾಲಕ, ಮಾಲೀಕ ಮತ್ತು ರೈಸ್‌ಮಿಲ್‌ನ ಸೂಪರ್‌ವೈಸರ್ ಬಾಷಾ ಸೇರಿದಂತೆ ಐವರ ವಿರುದ್ಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಜು.22ರಂದು ಸಂಜೆ ಪ್ರಕರಣ ದಾಖಲಾಗಿದೆ.

ಮೈಸೂರಲ್ಲೂ ಕಟ್ಟೆಚ್ಚರ

ಸಿಬ್ಬಂದಿಗಳನ್ನು ಬಂದೋಬಸ್ತ್‌ಗಾಗಿ ನಿಯೋಜಿಸಿದ್ದಾರೆ. ಮೈಸೂರು ಅರಮನೆ, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ, ಮೃಗಾಲಯ, ಕಾರಂಜಿ ಕೆರೆ ಉದ್ಯಾನ, ಜಗನ್ಮೋಹನ ಅರಮನೆ, ಕೆ.ಆರ್. ಸರ್ಕಲ್, ಸಿಎಫ್‌ಟಿಆರ್‌ಐ, ಡಿಎಫ್‌ಆರ್‌ಎಲ್, ರೈಲು ನಿಲ್ದಾಣ, ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ, ಸೆಂಟ್ ಫಿಲೋಮಿನಾ ಚರ್ಚ್ ಸೇರಿದಂತೆ ಪ್ರಮುಖ ಧಾರ್ಮಿಕ ಕೇಂದ್ರಗಳು, ಸ್ಮಾರಕಗಳಿಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆಗಳ ಟೋಲ್‌ಗೇಟ್‌ಗಳ ಚೆಕ್‌ಪೋಸ್ಟ್‌ಗಳಲ್ಲಿ ದಿನದ 24 ಗಂಟೆಯೂ ವಾಹನಗಳ ಮೇಲೆ ನಿಗಾ ಇರಿಸುತ್ತಿರುವ ಪೊಲೀಸರು ಅನುಮಾನಾಸ್ಪದ ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಿದ್ದಾರೆ. ರಾಜ್ಯ ಗುಪ್ತವಾರ್ತಾ ವಿಭಾಗದ ಪೊಲೀಸ್ ಅಧಿಕಾರಿಗಳು ಎಲ್ಲೆಡೆ ಕಾರ್ಯಾಚರಣೆ ನಡೆಸಿ ಸಂಶಯಾಸ್ಪದ ವ್ಯಕ್ತಿಗಳು, ವಸ್ತುಗಳ ಮೇಲೆ ನಿಗಾ ಇರಿಸುತ್ತಿದ್ದು, ಶ್ವಾನ ದಳ, ವಿಧ್ವಂಸಕ ಕೃತ್ಯಗಳ ನಿಗ್ರಹ ತಂಡದ ಸಿಬ್ಬಂದಿ ತೀವ್ರ ಶೋಧ ನಡೆಸುತ್ತಿದ್ದಾರೆ. ಹೋಟೆಲ್, ಲಾಡ್ಜ್‌ಗಳ ಕೊಠಡಿ ಗಳಲ್ಲಿ ವಾಸ್ತವ್ಯ ಹೂಡುವವರು, ಅಪರಿಚಿತ ಹಾಗೂ ಸಂಶಯಾಸ್ಪದ ವ್ಯಕ್ತಿಗಳ ಮೇಲೆ ನಿಗಾ ವಹಿಸಲಾಗಿದ್ದು, ಎಲ್ಲೆಡೆ ಸಿಸಿ ಕ್ಯಾಮರಾಗಳು ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಲಾಗುತ್ತಿದೆ.

ಅದೇ ರೀತಿ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನ, ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಅಣೆಕಟ್ಟೆ, ಶ್ರೀರಂಗಪಟ್ಟಣದ ಶ್ರೀ ರಂಗನಾಥ ದೇವಸ್ಥಾನ, ಟಿಪ್ಪು ಸುಲ್ತಾನ್, ದರಿಯಾ ದೌಲತ್, ಮೇಲುಕೋಟೆ ಸೇರಿದಂತೆ ವಿವಿಧ ಪ್ರವಾಸಿ ತಾಣಗಳ ಬಳಿಯೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದ್ದು, ತೀವ್ರ ನಿಗಾ ವಹಿಸಲಾಗಿದೆ. ಹೊರಗಿನಿಂದ ಬರುವ ವಾಹನಗಳನ್ನು ಪರಿಶೀಲಿಸಿ ಮಾಹಿತಿ ಪಡೆದುಕೊಳ್ಳುತ್ತಿರುವ ಪೊಲೀಸರು, ರಾತ್ರಿ ವೇಳೆ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುತ್ತಿದ್ದಾರೆ.

ಲೋಕಸಭೆ ಕಲಾಪಕ್ಕೆ ಅಡ್ಡಿ: ನಾಲ್ವರು ಕಾಂಗ್ರೆಸ್ ಸಂಸದರು ಅಮಾನತು

ನವದೆಹಲಿ: ಬೆಲೆ ಏರಿಕೆ ಖಂಡಿಸಿ ಸದನದೊಳಗೆ ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸುವ ಮೂಲಕ ಕಲಾಪಕ್ಕೆ ಅಡ್ಡಿಪಡಿಸಿದ ನಾಲ್ವರು ಕಾಂಗ್ರೆಸ್ ಸಂಸದರನ್ನು ಲೋಕಸಭೆಯಿಂದ ಇಡೀ ಅಧಿವೇಶನದ ಅವಧಿಗೆ ಅಮಾನತು ಮಾಡಲಾಗಿದೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಸದಸ್ಯರಿಗೆ, ಪ್ರತಿಭಟನೆ ನಡೆಸಲು ಬಯಸಿದರೆ ಸದನದ ಹೊರಗೆ ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸುವಂತೆ ಸೂಚಿಸಿದರು. ಆದರೂ ಸದನದಲ್ಲೇ ನಿರಂತರ ಪ್ರತಿಭಟನೆ ನಡೆಸಿದ್ದರಿಂದ ಆಕ್ರೋಶಗೊಂಡ ಸ್ಪೀಕರ್, ನಾಲ್ವರು ಕಾಂಗ್ರೆಸ್ ಸಂಸದರು ಇಡೀ ಅಧಿವೇಶನದಲ್ಲಿ ಭಾಗಿಯಾಗದಂತೆ ಅಮಾನತು ಮಾಡಿದರು. ಅಮಾನತುಗೊಂಡಿರುವ ಕಾಂಗ್ರೆಸ್ ಸಂಸದರೆಂದರೆ ಮಾಣಿಕಂ ಟ್ಯಾಗೋರ್, ಜೋತಿಮಣಿ, ರಮ್ಯಾ ಹರಿದಾಸ್ ಮತ್ತು ಟಿಎನ್ ಪ್ರತಾಪನ್.

ಸ್ಪೀಕರ್ ಕ್ರಮದ ನಂತರ ನಾಲ್ವರು ಸಂಸದರು ಸಂಸತ್ ಮೈದಾನದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ತೆರಳಿ ಘೋಷಣೆಗಳನ್ನು ಕೂಗಿದರು. ಕೆಲವರನ್ನು ಅಮಾನತು ಮಾಡುವ ಮೂಲಕ ಸರ್ಕಾರ ತನ್ನ ಸಂಸದರನ್ನು ಬೆದರಿಸಲು ಪ್ರಯತ್ನಿಸುತ್ತಿದೆ. ಆದರೆ ನಮ್ಮ ಸಂಸದರು ಜನರಿಗೆ ಮುಖ್ಯವಾದ ಸಮಸ್ಯೆಗಳನ್ನು ಎತ್ತಲು ಪ್ರಯತ್ನಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ.

ಮಧ್ಯಾಹ್ನ 3 ಗಂಟೆಯ ನಂತರ ಅಧಿವೇಶನ ಪುನರಾರಂಭಗೊಂಡಾಗ ವಿರೋಧ ಪಕ್ಷದ ಸಂಸದರು ಭಿತ್ತಿಪತ್ರಗಳೊಂದಿಗೆ ಮರಳಿ ಪ್ರತಿಭಟನೆ ನಡೆಸಿದರು.

ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಪ್ರತಿಪಕ್ಷಗಳ ಸಂಸದರ ವರ್ತನೆಯನ್ನು ಖಂಡಿಸಿದರು. ಕಲಾಪ ಸುಗಮವಾಗಿ ನಡೆಯಲು ಮತ್ತೊಮ್ಮೆ ಸದನದೊಳಗೆ ಫಲಕಗಳನ್ನು ತಂದ ಸಂಸದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸ್ಪೀಕರ್‌ಗೆ ಮನವಿ ಮಾಡಿದರು. ಭಿತ್ತಿಪತ್ರಗಳು ಮತ್ತು ಬ್ಯಾನರ್‌ಗಳನ್ನು ಹಿಡಿದು ಪ್ರತಿಭಟಿಸಿದ ವಿರೋಧ ಪಕ್ಷದ ಸಂಸದರು, ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿಗೆ ಬಂದು ಹೆಚ್ಚುತ್ತಿರುವ ಹಣದುಬ್ಬರ ಮತ್ತು ಸರಕು ಮತ್ತು ಸೇವಾ ತೆರಿಗೆ ಅಥವಾ ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಹೆಚ್ಚಳದ ಬಗ್ಗೆ ತಮ್ಮ ಕಳವಳವನ್ನು ಪರಿಹರಿಸಬೇಕೆಂದು ಒತ್ತಾಯಿಸಿದರು. ನೀವು ಫಲಕಗಳನ್ನು ತೋರಿಸಲು ಬಯಸಿದರೆ, ಅದನ್ನು ಸದನದ ಹೊರಗೆ ಮಾಡಿ. ನಾನು ಚರ್ಚೆಗೆ ಸಿದ್ಧನಿದ್ದೇನೆ, ಆದರೆ ನನ್ನ ಹೃದಯವಂತಿಕೆಯನ್ನು ದೌರ್ಬಲ್ಯ ಎಂದು ಭಾವಿಸಬೇಡಿ ಎಂದು ಸ್ಪೀಕರ್ ಹೇಳಿದರು. ಬಳಿಕ ಕಲಾಪವನ್ನು ನಾಳೆಗೆ ಮುಂದೂಡಿದರು.

ಸುಸ್ಥಿರ ನಗರಗಳ ಸಮಗ್ರ ವಿಧಾನ ಪ್ರಾಯೋಗಿಕ ಯೋಜನೆ ಸಂಬಂಧ ಪಾಲಿಕೆ ಸಿಬ್ಬಂದಿಗೆ ಎರಡು ದಿನ ಕಾರ್ಯಾಗಾರ



ಮೈಸೂರು, ಜು.25(ಎಸ್‌ಬಿಡಿ)– ಸುಸ್ಥಿರ ನಗರಗಳ ಸಮಗ್ರ ವಿಧಾನ ಪ್ರಾಯೋಗಿಕ ಯೋಜನೆ(SCIAP) ಸಂಬಂಧ ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ 2 ದಿನಗಳ ಕಾರ್ಯಾಗಾರ ಆಯೋಜಿಸಲಾಗಿದೆ.

ವಿಶ್ವಸಂಸ್ಥೆ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ (UNIDO) ಹಾಗೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಸಹಯೋಗದಲ್ಲಿ ರೂಪಿಸಿರುವ ಸುಸ್ಥಿರ ನಗರಗಳ ಸಮಗ್ರ ವಿಧಾನ ಪ್ರಾಯೋಗಿಕ ಯೋಜನೆಗೆ ಆಯ್ಕೆಯಾಗಿರುವ ಐದು ನಗರಗಳಲ್ಲಿ ಮೈಸೂರು ಒಂದಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನವೀಕೃತ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಿರುವ 2 ದಿನಗಳ ಕಾರ್ಯಾಗಾರವನ್ನು ಮೇಯರ್ ಸುನಂದಾ ಪಾಲನೇತ್ರ ಅವರು ಸೋಮವಾರ ಉದ್ಘಾಟಿಸಿದರು.

ಇದೇ ವೇಳೆ ಯುನಿಡೊ ಹಿರಿಯ ತಾಂತ್ರಿಕ ಸಲಹೆಗಾರ ನಂದ್‌ಪಾಲ್ ಸಿಂಗ್ ಮಾತನಾಡಿ, ಮೈಸೂರು ಸೇರಿದಂತೆ ವಿಜಯವಾಡ, ಗುಂಟೂರು, ಭೋಪಾಲ್ ಮತ್ತು ಜೈಪುರದಲ್ಲಿ ಜಾಗತಿಕ ಪರಿಸರ ಸೌಲಭ್ಯ ನಿಧಿ ಅನುದಾನದಿಂದ ಪ್ರಾಯೋಗಿಕ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

ಯುನಿವರ್ಸಿಟಿ ಆಫ್ ವಾಷಿಂಗ್ಟನ್‌ನ ಪ್ರೊ. ಜಾನಿಸ್ ವಿಟಿಂಗ್ಟನ್ ಹಾಗೂ ಕ್ಯಾಲಿಫೋರ್ನಿಯಾ ಸ್ಟೇಟ್ ಪಾಲಿಟೆಕ್ನಿಕ್ ವಿಶ್ವವಿದ್ಯಾನಿಲಯದ ಪ್ರೊ.ಆಡ್ರಿಯೆನ್ ಗ್ರೀವ್ ನೇತೃತ್ವದ ತಂಡದ ಸುಜಾತಾ ಶ್ರೀಕುಮಾರ್, ಪರಿಸರ ಸ್ನೇಹಿ ಹಾಗೂ ವಿಕೋಪಗಳಿಗೆ ತುತ್ತಾಗದ ರೀತಿಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ವಿವರಣೆ ನೀಡಿದರು. ಯೋಜನೆಗಳ ಸ್ಥಿತಿಸ್ಥಾಪಕತ್ವದ ಸುಧಾರಣೆ, ವಿನ್ಯಾಸ ಮತ್ತು ತಂತ್ರಜ್ಞಾನ, ಸಾರ್ವಜನಿಕ ಸಹಭಾಗಿತ್ವದಲ್ಲಿ ಯೋಜನೆಗಳ ಪರಿಶೀಲನೆ, ತ್ಯಾಜ್ಯ ನಿರ್ವಹಣೆಯಲ್ಲಿ ಇಂಗಾಲ ಬಳಕೆ ಕಡಿಮೆ ಮಾಡುವುದು, ನೈರ್ಮಲ್ಯ ಕ್ಷೇತ್ರದಲ್ಲಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ನಿರ್ವಹಣೆ ಇನ್ನಿತರ ಮಾಹಿತಿ ನೀಡಲಾಯಿತು.

ನಗರ ಪಾಲಿಕೆ ಹೆಚ್ಚುವರಿ ಉಪ ಆಯುಕ್ತೆ ರೂಪ, ಉಪ ಆಯುಕ್ತೆ ಸವಿತಾ, ಆರೋಗ್ಯಾಧಿಕಾರಿ ಡಾ.ನಾಗರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀಕೃಷ್ಣರಾಜಮುಡಿ ಬ್ರಹ್ಮೋತ್ಸವ ಸಂಪನ್ನ



ಮೇಲುಕೋಟೆ, ಜು.25–ಆಷಾಢ ಜಾತ್ರಾಮಹೋತ್ಸವ ಶ್ರೀಕೃಷ್ಣರಾಜಮುಡಿ ಬ್ರಹ್ಮೋತ್ಸವ ಸೋಮವಾರ ಸಂಜೆ ನಡೆದ ಪುಷ್ಪಯಾಗದೊಂದಿಗೆ ಮುಕ್ತಾಯವಾಗಿದ್ದು, ಇದೇ ವೇಳೆ ಕೃಷ್ಣರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಪೊಲೀಸ್ ಭದ್ರತೆಯೊಂದಿಗೆ ಜಿಲ್ಲಾ ಖಜಾನೆಗೆ ವಾಪಸ್ ಕಳುಹಿಸಿಕೊಡಲಾಯಿತು.

ಕಳೆದ 10 ದಿನಗಳಿಂದ ನಡೆಯುತ್ತಿದ್ದ ಜಾತ್ರಾ ಮಹೋತ್ಸವ ಶಾಸ್ತ್ರೋಕ್ತವಾಗಿ ನೆರವೇರಿ ಲೋಕ ಕಲ್ಯಾಣಾರ್ಥ ಪ್ರಾರ್ಥನೆಯೊಂದಿಗೆ ಮುಕ್ತಾಯವಾಗಿದೆ. ಜು.19ರಂದು ನಡೆದ ಕೃಷ್ಣರಾಜಮುಡಿ ಉತ್ಸವದಂದು ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಸಮರ್ಪಿಸಿದ್ದ ವಜ್ರಖಚಿತ ಕಿರೀಟ ಮತ್ತು ಗಂಡುಬೇರುಂಡ ಪದಕವನ್ನು ಚೆಲುವ ನಾರಾಯಣಸ್ವಾಮಿಗೆ ಹಾಕಲಾಗಿತ್ತು. ನಂತರ ಬ್ರಹ್ಮೋತ್ಸವದ 5 ದಿನಗಳಂದೂ ಸ್ವಾಮಿಯನ್ನು ವಿವಿಧ ಉತ್ಸವಗಳಲ್ಲಿ ಅಲಂಕರಿಸಿತ್ತು.

ಮಹಾರಾಜರ ಕಾಲದಲ್ಲಿ ವಿಜೃಂಭಣೆಯಿಂದ ನಡೆಯುತ್ತಿದ್ದ ಆಷಾಢ ಜಾತ್ರೆಯ ಬ್ರಹ್ಮೋತ್ಸವದಲ್ಲಿ ಮಹಾರಥೋತ್ಸವ, ತೆಪ್ಪೋತ್ಸವಗಳು ನಿಂತುಹೋಗಿ ಕೇವಲ ಸಾಂಕೇತಿಕ ಉತ್ಸವ ಆಚರಣೆಯಾಗಿ ಉಳಿದುಕೊಂಡಿದ್ದು, ಈ ಸಲವೂ ಅದೇ ಮಾದರಿಯಲ್ಲಿ ನೆರವೇರಿತು. ಆಷಾಢ ಜಾತ್ರಾ ಮಹೋತ್ಸವದಲ್ಲಿ ಜಡಿ ಮಳೆ ಇತ್ತಾದರೂ ಕೃಷ್ಣರಾಜಮುಡಿ ಉತ್ಸವ ಮತ್ತು ಇತರ ಉತ್ಸವಗಳ ಆಚರಣೆಗೆ ತೊಡಕಾಗಲಿಲ್ಲ.

ಸೋಮವಾರ ಸಂಜೆ ಸ್ಥಾನೀಕರು ಅರ್ಚಕ ಪರಿಚಾರಕರಿಂದ ಪರಿಶೀಲಿಸಿ ಪಡೆದ ಕಿರೀಟ ಮತ್ತು ಪದಕವಿರುವ ತಿರುವಾಭರಣ ಪೆಟ್ಟಿಗೆಯನ್ನು ನಿವೃತ್ತಿಯ ಹೊತ್ತಿಲಿನಲ್ಲಿರುವ ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳನ್ನು ಭಕ್ತಿಪೂರ್ವಕವಾಗಿ ತಲೆಯಮೇಲಿಟ್ಟುಕ್ಕೊಂಡು ತಂದು ವಾಹನದಲ್ಲಿರಿಸಿದರು. 2022ರ ಕೃಷ್ಣರಾಜಮುಡಿ ಬ್ರಹ್ಮೋತ್ಸವ ಇದರೊಂದಿಗೆ ಸಂಪನ್ನಗೊಂಡಿದೆ.

ಕೃಷಿ ಅಭಿಯಾನಕ್ಕೆ ಶಾಸಕ ಎಂ.ಶ್ರೀನಿವಾಸ್ ಚಾಲನೆ



ಮಂಡ್ಯ, ಜು.25– ನಗರದಲ್ಲಿ ಸೋಮವಾರ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ, ಕೃಷಿ ಇಲಾಖೆಯಿಂದ ಆಯೋಜಿಸಿದ ಕೃಷಿ ಮತ್ತು ಕೃಷಿ ಸಂಬಂಧಿಸಿದ ಇತರೆ ಇಲಾಖೆಗಳ ಸಹಯೋಗದೊಂದಿಗೆ 2022–23ನೇ ಸಾಲಿನ ಕೃಷಿ ಅಭಿಯಾನ ರಥಕ್ಕೆ ಶಾಸಕ ಎಂ. ಶ್ರೀನಿವಾಸ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸಲು ಕೃಷಿ ಅಭಿಯಾನ ವಾಹನಕ್ಕೆ ಪ್ರತಿವರ್ಷದಂತೆ ಈ ವರ್ಷವೂ ಚಾಲನೆ ನೀಡಲಾಗಿದೆ. ರೈತರಿಗೆ ಪ್ರತಿ ಎಕರೆಗೆ ಡೀಸೆಲ್‌ಗಾಗಿ 250ರೂ ನೀಡುವ ಯೋಜನೆ ಉತ್ತಮ ಯೋಜನೆಯಾಗಿದೆ ಎಂದರು.

ಸರ್ಕಾರದಿಂದ ಸೋಲಾರ್ ನೀಡುವ ಯೋಜನೆ ಹಾಗೂ ಅನೇಕ ಯೋಜನೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲು ಕೃಷಿ ಇಲಾಖೆ ಆಯೋಜಿಸಿರುವ ಕಾರ್ಯಕ್ರಮವನ್ನು ಎಲ್ಲಾ ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಪಂ ಸಿಇಓ ಶಾಂತ ಎಂ.ಹುಲ್ಮನಿ ಮಾತನಾಡಿ, ಜಿಲ್ಲೆಯ ವಿವಿಧ ಇಲಾಖೆಗಳಿಂದ ರೈತರಿಗೆ ಸಂಬಂಧಿಸಿದಂತೆ ಸೌಲಭ್ಯಗಳ ಕುರಿತು ಮಾಹಿತಿಯ ನೀಡುವಂತಹ ಕೃಷಿ ಅಭಿಯಾನ ರಥವು ಹೋಬಳಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಂಚರಿಸಿ ರೈತರಿಗೆ ಎಲ್ಲಾ ಮಾಹಿತಿ ನೀಡಿ. ಸೌಲಭ್ಯವನ್ನು ಪಡೆದುಕೊಳ್ಳಲು ಸಹಕರಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎಸ್.ಅಶೋಕ್, ಉಪನಿರ್ದೇಶಕಿ ಮಾಲತಿ, ಸಹಾಯಕ ನಿರ್ದೇಶಕಿ ಜಿ.ಟಿ.ಸೌಮ್ಯ, ಜಿ.ಪಂ. ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ಎಂ.ಸಿ.ಪುಷ್ಪಲತಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸೆಂಟ್ ಮೇರಿಸ್ ಶಾಲೆಯಲ್ಲಿ ಚಿಗುರು ಕಾರ್ಯಕ್ರಮ



ಭಾರತೀನಗರ, ಜು.25– ಇಲ್ಲಿನ ಸೆಂಟ್ ಮೇರಿಸ್ ಶಾಲೆಯಲ್ಲಿ ನಡೆದ ಚಿಗುರು ದಿನ ಹಾಗೂ ಗಾಳಿಪಟ ದಿನಾಚರಣೆಗೆ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಪುಟ್ಟಸ್ವಾಮಿಗೌಡ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪ್ರಾಥಮಿಕ ಹಂತದಲ್ಲೇ ಮಕ್ಕಳು ಏಕದಳ ಮತ್ತು ದ್ವಿದಳ ಧಾನ್ಯದಿಂದ ಚಿಗುರುವ ಬೆಳೆಗಳು ಮತ್ತು ಗಿಡಗಳ ಬಗ್ಗೆ ತಿಳಿದುಕೊಳ್ಳುವುದರ ಜೊತೆಗೆ ಇದರಿಂದ ದೊರೆಯುವ ಉಪಯೋಗದ ಬಗ್ಗೆ ತಿಳಿಯಬೇಕು ಎಂದು ತಿಳಿಸಿದರು.

ಪರಿಸರ ಜಾಗೃತಿ ವೇದಿಕೆಯ ತಾಲೂಕು ಅಧ್ಯಕ್ಷ ಅಣ್ಣೂರು ಸತೀಶ್ ಮಾತನಾಡಿ, ಚಿಗುರು ದಿನ ಹಾಗೂ ಗಾಳಿಪಟ ದಿನಾಚರಣೆ ಕಾರ್ಯಕ್ರಮ ವಿಶೇಷವಾಗಿದ್ದು, ಮಕ್ಕಳಿಗೆ ಇಂತಹ ಕಾರ್ಯಕ್ರಮ ಅವಶ್ಯಕವಾಗಿದೆ. ಇಂತಹ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಆಯೋಜಿಸುವುದರಿಂದ ಮಕ್ಕಳಿಗೆ ತಿಳುವಳಿಕೆ ನೀಡಿದಂತಾಗುತ್ತದೆ ಎಂದರು.

ಶಾಲೆಯಲ್ಲಿ ರಾಗಿ, ಭತ್ತ ಅವರೆ, ಹುರುಳಿ, ಹೆಸರುಕಾಳು, ಗೋಧಿ, ತಗಣಿಕಾಳು, ಕಡಲೆಕಾಳು ಸೇರಿದಂತೆ ಏಕದಳ ಮತ್ತು ದ್ವಿದಳ ಧಾನ್ಯಗಳ ಬೆಳೆಗಳ ಪೈರುಗಳನ್ನು ಪ್ರದರ್ಶಿಸಿ ಶಿಕ್ಷಕರು ಮಕ್ಕಳಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕಿ ಎಂ.ಆರ್. ಪ್ರತಿಭಾ, ಶಿಕ್ಷಕರಾದ ಎಂ.ಬಿ.ಅಶ್ವಿನಿ, ಜಿ.ಬಿ. ಗೀತಾ, ಮಮತ, ರಾಜೇಶ್ವರಿ, ಕೆ.ಅಶ್ವಿನಿ, ಹೆಚ್.ಎನ್.ಶಿಲ್ಪ, ಎಂ.ಎಸ್.ಲಕ್ಷ್ಮಿ, ಎಂ.ಡಿ. ಸ್ಫೂರ್ತಿ, ಹೆಚ್.ಎಸ್.ರಾಧಾ, ಎಂ.ನವ್ಯಾ, ಭೋಜರಾಜ, ಎಂ.ಪ್ರಜ್ವಲ್ ಸೇರಿದಂತೆ ಇತರರಿದರು.

ಎಸ್‌ಎಸ್‌ಎಲ್‌ಸಿ ಸಿಬಿಎಸ್‌ಸಿ: ಮಾನಸ ವಿದ್ಯಾಸಂಸ್ಥೆಗೆ ಶೇ.100ರಷ್ಟು ಫಲಿತಾಂಶ


ಕರ್ಣಿಕಾ


ನಿಸರ್ಗ


ಚಿರಂತನ

ಮದ್ದೂರು, ಜು.25– ಎಸ್‌ಎಸ್‌ಎಲ್‌ಸಿ ಸಿಬಿಎಸ್‌ಸಿ ಫಲಿತಾಂಶ ಪ್ರಕಟಗೊಂಡಿದ್ದು, ತಾಲೂಕಿನ ಬೆಸಗರಹಳ್ಳಿಯ ಮಾನಸ ವಿದ್ಯಾಸಂಸ್ಥೆಗೆ ಶೇ.100 ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾದ 13 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಈ ಪೈಕಿ ಎಸ್.ಎನ್. ನಿಸರ್ಗ ಶೇ.89, ಪಿ.ಆರ್.ಚಿರಂತನ ಶೇ.82, ವಿ.ಎಸ್.ಕರ್ಣಿಕಾ ಶೇ.80 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ. ಉಳಿದ 10 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ವಿ.ಕೆ.ಜಗದೀಶ್ ತಿಳಿಸಿದ್ದಾರೆ.

ಇಂದು ಹಡಪದ ಅಪ್ಪಣ್ಣ ಜಯಂತಿ

ಮಂಡ್ಯ,ಜು.25– ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಶ್ರೀ ಶಿವಶರಣ ಹಡಪದ ಅಪ್ಪಣ್ಣನವರ ಜಯಂತಿ ಕಾರ್ಯಕ್ರಮವನ್ನು ಇದೇ ಜು.26ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಗರದ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ.

ಅಂದು ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಲಿದ್ದು, ಕ್ರೀಡಾ ಸಚಿವ ನಾರಾಯಣಗೌಡ, ಶಾಸಕರಾದ ಎಂ.ಶ್ರೀನಿವಾಸ್, ಪುಟ್ಟರಾಜು, ತಮ್ಮಣ್ಣ, ಸುರೇಶ್‌ಗೌಡ, ಅನ್ನದಾನಿ ರವೀಂದ್ರ, ಸಂಸದೆ ಸುಮಲತಾ ಸೇರಿದಂತೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಸಿದ್ದರಾಮೋತ್ಸವ: ಕೆ.ಆರ್.ಪೇಟೆಯಿಂದ 20 ಸಾವಿರ ಜನ



ಕೆ.ಆರ್.ಪೇಟೆ, ಜು.25– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬ ಅಂಗವಾಗಿ ದಾವಣಗೆರೆಯಲ್ಲಿ ಆಗಸ್ಟ್ 3ರಂದು ನಡೆಯಲಿರುವ ಸಿದ್ದರಾಮೋತ್ಸವ ಕಾರ್ಯಕ್ರಮದಲ್ಲಿ ತಾಲೂಕಿನಿಂದ 20 ಸಾವಿರ ಮಂದಿ ಪಾಲ್ಗೊಳ್ಳಲಿದ್ದು, ಅವರನ್ನು ಕರೆದುಕೊಂಡು ಹೋಗಿ ಬರುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್ ಮತ್ತು ಕಿಕ್ಕೇರಿ ಸುರೇಶ್ ಅವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿದ್ದರಾಮಯ್ಯ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ರಾಜ್ಯದ ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಹಣಕಾಸು ಮಂತ್ರಿಯಾಗಿ ಸೇವೆ ಸಲ್ಲಿಸಿರುವ ಸಿದ್ದರಾಮಯ್ಯ ಅವರು ಜನಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. 2013ರಲ್ಲಿ ಅಧಿಕಾರಕ್ಕೆ ಬರುವ ಮುನ್ನ ಚುನಾವಣೆಯ ಕಾಲದಲ್ಲಿ ಜನರ ಮುಂದಿಟ್ಟ ಪ್ರಣಾಳಿಕೆಗೆ ಬದ್ಧವಾಗಿ ನಡೆದುಕೊಂಡ ಏಕೈಕ ನಾಯಕ ಸಿದ್ದರಾಮಯ್ಯ ಎಂದು ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಬಿ.ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಿಕ್ಕೇರಿ ಸುರೇಶ್, ಬಿ.ನಾಗೇಂದ್ರಕುಮಾರ್, ಜಿಪಂ ಮಾಜಿ ಸದಸ್ಯ ದೇವರಾಜು, ಕೆಯುಐಡಿಎಫ್‌ಸಿ ನಿಗಮದ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಮನ್‌ಮುಲ್ ನಿರ್ದೇಶಕ ಡಾಲು ರವಿ, ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ತಾಪಂ ಮಾಜಿ ಸದಸ್ಯ ಮಾಧವಪ್ರಸಾದ್, ಸಣ್ಣನಿಂಗೇಗೌಡ, ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ವೇದಿಕೆಯ ಅಧ್ಯಕ್ಷ ಎಲ್.ಸಂದೇಶ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎಂ.ಜೆ.ಶಶಿಧರ್, ಖಜಾಂಚಿ ರಾಜಣ್ಣ ನಿರ್ದೇಶಕ ಲೋಕೇಶ್, ಮಹೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಚಂದ್ರು ತಾಲೂಕು ಯುವ ಕುರುಬರ ಸಂಘದ ಅಧ್ಯಕ್ಷ ಹೊಸೂರು ನಿಂಗೇಗೌಡ, ಮುಖಂಡರಾದ ಜಾನೇಗೌಡ, ಡಾ.ರಾಮಕೃಷ್ಣೇಗೌಡ, ಮಡುವಿನಕೋಡಿ ಕಾಂತರಾಜು, ಅಮ್ಜದ್ ಪಾಷಾ, ಪೂವನಹಳ್ಳಿ ಸುರೇಶ್, ಕೆ.ಎಸ್.ಕುಮಾರ್, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಮೀನಾಕ್ಷಿ ರಮೇಶ್, ಸುಮಿತ್ ಮಾಕವಳ್ಳಿ ಇದ್ದರು.

ಜೆಸಿಬಿ ಬಕೆಟ್ ಬಡಿದು ವ್ಯಕ್ತಿ ಸಾವು

ನಾಗಮಂಗಲ, ಜು.25– ಜೆಸಿಬಿ ಬಕೆಟ್ ಬಡಿದು ವ್ಯಕ್ತಿಯೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೊಣಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಲಕ್ಷ್ಮಣಗೌಡ ಎಂಬುವವರ ಪುತ್ರ ರಾಮಚಂದ್ರ (32) ಸಾವನ್ನಪ್ಪಿದ ವ್ಯಕ್ತಿ. ಗ್ರಾಮದ ಬಾಳೆತೋಟದಲ್ಲಿ ಜೆಸಿಬಿಯಿಂದ ಕೆಲಸ ಮಾಡುತ್ತಿರುವಾಗ ಜೆಸಿಬಿ ಕೆಳಗಡೆ ನಿಂತಿದ್ದ ರಾಮಚಂದ್ರಗೆ ಜೆಸಿಬಿ ಬಕೆಟ್ ಬಡಿದಿದೆ. ಪರಿಣಾಮ ತೀವ್ರ ಗಾಯಗೊಂಡ ಆತನನ್ನು ಕೂಡಲೇ ನಾಗಮಂಗಲ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೆ ರಾಮಚಂದ್ರ ಸಾವನ್ನಪ್ಪಿದ್ದಾನೆ. ಈ ಸಂಬಂಧ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನಕುರಳಿ ಗ್ರಾಪಂ ಉಪಾಧ್ಯಕ್ಷೆ ಮಂಜುಳಾ



ಚಿನಕುರಳಿ, ಜು.25– ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಪಂನ ನೂತನ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮಂಜುಳಾ ಮಹದೇವು ಸೋಮವಾರ ಅವಿರೋಧವಾಗಿ ಆಯ್ಕೆಯಾದರು.

24 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಚಿನಕುರಳಿ ಗ್ರಾಪಂ ಹಿಂದಿನ ಉಪಾಧ್ಯಕ್ಷೆ ದಿವ್ಯಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮಂಜುಳಾ ಮಹದೇವು ಅವರನ್ನು ಹೊರತುಪಡಿಸಿ ಉಳಿದ ಯಾರೊಬ್ಬ ಸದಸ್ಯರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯೂ ಆದ ತಾಪಂ ಕಾರ್ಯನಿರ್ವಹಣಾಧಿಕಾರಿ ಗಿರೀಶ್ ಅವಿರೋಧ ಆಯ್ಕೆ ಘೋಷಿಸಿದರು.

ನೂತನ ಉಪಾಧ್ಯಕ್ಷೆಯಾಗಿ ಮಂಜುಳಾ ಅವರು ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಸಿಹಿಹಂಚಿ ಸಂಭ್ರಮಿಸಿದರು. ಬಳಿಕ ಎಲ್ಲಾ ಸದಸ್ಯರು, ಮುಖಂಡರು ನೂತನ ಉಪಾಧ್ಯಕ್ಷೆಗೆ ಅಭಿನಂದಿಸಿದರು.

ಈ ವೇಳೆ ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಅಶೋಕ್, ತಾಪಂ ಮಾಜಿ ಸಿ.ಎಸ್.ಗೋಪಾಲೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಹಾಗೂ ಗ್ರಾಪಂ ಸದಸ್ಯ ಸಿ.ಶಿವಕುಮಾರ್, ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ(ಪಾಪಣ್ಣ), ಮಾಜಿ ಅಧ್ಯಕ್ಷ ಮಹಮದ್ ಇಮ್ತಿಯಾಜ್ ಪಾಷ, ಜಯರಾಮೇಗೌಡ, ಸಿ.ಎಂ.ಕಾಳೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣೇಗೌಡ, ಡೈರಿ ಅಧ್ಯಕ್ಷ ಲೋಕೇಶ್, ಮಾಜಿ ಉಪಾಧ್ಯಕ್ಷ ಸ್ವಾಮೀಗೌಡ, ಎ.ಎಸ್. ರಮೇಶ್, ಯಾಜಮನ್ ಸುಬ್ಬೇಗೌಡ, ಡೈರಿ ಹಾಗೂ ಸೊಸೈಟಿ ನಿರ್ದೇಶಕರು, ಗ್ರಾಪಂ ಸದಸ್ಯರು ಹಾಜರಿದ್ದರು.

ವಿದ್ಯುತ್ ಸ್ಪರ್ಶ: ಎರಡು ಕಾಡಾನೆ ಸಾವು



ಮಡಿಕೇರಿ,ಜು.25– ಕಾಫಿ ತೋಟದಲ್ಲಿ ಹಾದು ಹೋಗಿದ್ದ 11 ಕೆ.ವಿ. ವಿದ್ಯುತ್ ತಂತಿ ಸ್ಪರ್ಶಗೊಂಡು 2 ಕಾಡಾನೆಗಳು ದಾರುಣವಾಗಿ ಮೃತಪಟ್ಟ ಘಟನೆ ನೆಲ್ಯಹುದಿಕೇರಿ ಸಮೀಪದ ಅತ್ತಿಮಂಗಲ ಕಾಫಿ ತೋಟದಲ್ಲಿ ಸಂಭವಿಸಿದೆ.

ನೆಲ್ಯಹುದಿಕೇರಿ ಗ್ರಾಮದ ಕೋಣೇರಿರ ಪ್ರಕಾಶ್ ಹಾಗೂ ಮಂಡೇಪಂಡ ಸುಮಂತ್ ಚಂಗಪ್ಪ ಎಂಬುವರಿಗೆ ಸೇರಿದ ಕಾಫಿ ತೋಟದಲ್ಲಿ 11 ಕೆ.ವಿ ಸಾಮರ್ಥ್ಯದ ವಿದ್ಯುತ್ ತಂತಿಗಳು ಹಾದು ಹೋಗಿದ್ದವು. ಗಾಳಿ ಮಳೆಗೆ ವಿದ್ಯುತ್ ತಂತಿ ಮೇಲೆ ಮರದ ಕೊಂಬೆ ಬಿದ್ದ ಪರಿಣಾಮ ನೆಲಮಟ್ಟದಿಂದ 5 ಅಡಿ ಅಂತರದಲ್ಲಿ ತಂತಿಗಳು ಜೋತು ಬಿದ್ದಿದ್ದು, ಭಾನುವಾರ ರಾತ್ರಿ ಆಹಾರ ಅರಸಿ ಕಾಡಿನಿಂದ ಕಾಫಿ ತೋಟದತ್ತ ಬಂದ ಎರಡು ಕಾಡಾನೆಗಳು ತೋಟದ ಮಾರ್ಗವಾಗಿ ಹಾದು ಹೋಗುವಾಗ ವಿದ್ಯುತ್ ತಂತಿ ಸ್ಪರ್ಶಿಸಿದೆ. ಪರಿಣಾಮ 12 ವರ್ಷದ ಗಂಡಾನೆ ಹಾಗೂ 13 ವರ್ಷದ ಹೆಣ್ಣಾನೆ ಸ್ಥಳದಲ್ಲೇ ಮೃತಪಟ್ಟಿವೆ.

ಎಂದಿನಂತೆ ಸೋಮವಾರ ಬೆಳಗ್ಗೆ ತೋಟದ ಕೆಲಸಕ್ಕೆ ತೆರಳಿದ ಕಾರ್ಮಿಕರು ಕಾಡಾನೆಗಳು ಮೃತಪಟ್ಟಿರುವುದನ್ನು ಗಮನಿಸಿದ್ದಾರೆ. ಬಳಿಕ ತೋಟದ ಮಾಲೀಕರ ಮೂಲಕ ಮಾಹಿತಿ ಪಡೆದ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೊಡಗು ರೈತ ಸಂಘದ ಪದಾಧಿಕಾರಿಗಳು ಸ್ಥಳಕ್ಕಾಗಮಿಸಿ ಕಾಡಾನೆಗಳ ಸಾವಿಗೆ ವಿಷಾದ ವ್ಯಕ್ತಪಡಿಸಿದರು. ಈ ಸಂದರ್ಭ ಮಾತನಾಡಿದ ಅಮ್ಮತ್ತಿ ಹೋಬಳಿ ಅಧ್ಯಕ್ಷ ಮಂಡೇಪಂಡ ಪ್ರವೀಣ್ ಬೋಪಯ್ಯ, ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಹಲವು ಬಾರಿ ಒತ್ತಾಯಿಸಲಾಗಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಿರ್ಲಕ್ಷ್ಯ ತೋರಿದ್ದಾರೆ. ಇದರಿಂದಲೇ ಇಂತಹ ಘಟನೆಗಳು ಮರುಕಳಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಡಾನೆಗಳಿಗೆ ಬೇಕಾದ ಆಹಾರ ವ್ಯವಸ್ಥೆ ಅರಣ್ಯದಲ್ಲಿ ಮಾಡದಿರುವುದರಿಂದ ಕಾಡಾನೆಗಳು ಆಹಾರ ಅರಸಿ ನಾಡಿಗೆ ಬರುತ್ತಿವೆ. ಶಾಶ್ವತ ಯೋಜನೆಗಳನ್ನು ರೂಪಿಸಿ ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಿದ್ದಲ್ಲಿ ಇಂತಹ ಘಟನೆಗಳು ಮರುಕಳಿಸುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಹಿಂದೆ ಕಾಫಿ ತೋಟಗಳಲ್ಲೇ ಮೃತಪಟ್ಟ ಕಾಡಾನೆಗಳ ಮರಣೋತ್ತರ ಪರೀಕ್ಷೆಯನ್ನು ನಡೆಸಿ, ಅದೇ ಸ್ಥಳದಲ್ಲಿ ಹೂಳಲಾಗುತ್ತಿತ್ತು. ಆನೆಗಳನ್ನು ಹೂಳುವ ಸ್ಥಳದಲ್ಲಿ ಕೆಲಸ ನಿರ್ವಹಿಸಲು ಕಾರ್ಮಿಕರು ಭಯ ಪಡುತ್ತಾರೆ. ಮಾತ್ರವಲ್ಲದೇ, ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಯಿದೆ ಎಂದು ಗ್ರಾಮಸ್ಥರು ಕಾಫಿ ತೋಟದಲ್ಲಿ ಆನೆಗಳನ್ನು ಹೂಳಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಈ ಹಿನ್ನೆಲೆಯಲ್ಲಿ ಕ್ರೇನ್‌ಗಳ ಸಹಾಯದಿಂದ ಕಾಡಾನೆಗಳ ಕಳೇಬರವನ್ನು ಲಾರಿಯಲ್ಲಿ ಮೀನುಕೊಲ್ಲಿ ಅರಣ್ಯಕ್ಕೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬಳಿಕ ಅಲ್ಲೇ ಹೂಳಲಾಯಿತು.

ಗೋಣಿಕೊಪ್ಪ ಮುಖ್ಯರಸ್ತೆ ಏಕಮುಖ ಸಂಚಾರ ಹಿಂಪಡೆಯಲು ಕ್ರಮ

ಗೋಣಿಕೊಪ್ಪ, ಜು.25– ಗೋಣಿಕೊಪ್ಪ ಮುಖ್ಯರಸ್ತೆಯಲ್ಲಿನ ಏಕಮುಖ ಸಂಚಾರ ನಿಯಮ ಹಿಂಪಡೆಯಲು ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ಚೇಂಬರ್ ಆಫ್ ಕಾಮರ್ಸ್ ನಿರ್ಧಾರದಂತೆ ಕ್ರಮಕೈಗೊಳ್ಳಲಾಗುವುದು ಎಂದು ಶಾಸಕ ಕೆ.ಜಿ. ಬೋಪಯ್ಯ ಹೇಳಿದರು.

ಗೋಣಿಕೊಪ್ಪ ಚೇಂಬರ್ ಆಫ್ ಕಾಮರ್ಸ್ ವತಿಯಿಂದ ಆರ್‌ಎಂಸಿ ಆವರಣದಲ್ಲಿ ಭೇಟಿ ಮಾಡಿದ ಸಂದರ್ಭ ಮಾತನಾಡಿ, ಏಕಮುಖ ಸಂಚಾರ ನಿಯಮ ಹಿಂಪಡೆಯಲು ಸ್ಥಳೀಯ ಗ್ರಾಮ ಪಂಚಾಯಿತಿ ತೆಗೆದುಕೊಳ್ಳುವ ನಿರ್ಧಾರ ಮುಖ್ಯವಾಗುತ್ತದೆ. ಗ್ರಾಮ ಪಂಚಾಯಿತಿ ಮತ್ತು ಚೇಂಬರ್ ಆಫ್ ಕಾಮರ್ಸ್ ಸಭೆ ನಡೆಸಿ, ವರದಿ ನೀಡಿದರೆ ಸರ್ಕಾರದ ಮಟ್ಟದಲ್ಲಿ ವ್ಯವಹರಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭ ಎಂಎಲ್ಸಿ ಸುಜಾ ಕುಶಾಲಪ್ಪ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಸುನಿಲ್ ಮಾದಪ್ಪ, ಉಪಾಧ್ಯಕ್ಷ ಪೊನ್ನಿಮಾಡ ಸುರೇಶ್, ಕಾರ್ಯದರ್ಶಿ ಕಾಶಿ, ಪ್ರಮುಖರಾದ ಬಿ. ಎನ್. ಪ್ರಕಾಶ್, ಕೋಣಿಯಂಡ ಬೋಜಮ್ಮ, ಸಿ. ಕೆ. ಬೋಪಣ್ಣ, ಕಿಲನ್ ಗಣಪತಿ ಇದ್ದರು.



ಇಂದು ಕಾರ್ಗಿಲ್ ವಿಜಯೋತ್ಸವ

ಸೋಮವಾರಪೇಟೆ, ಜು.25– ಇಲ್ಲಿನ ಜೈ ಜವಾನ್ ಮಾಜಿ ಸೈನಿಕರ ಸಂಘದ ವತಿಯಿಂದ ಇಲ್ಲಿನ ಪತ್ರಿಕಾಭವನದಲ್ಲಿ ಜು.26ರ ಮಂಗಳವಾರ ಬೆಳಗ್ಗೆ 10–30ಕ್ಕೆ ಕಾರ್ಗಿಲ್ ವಿಜಯೋತ್ಸವ ಮತ್ತು ಮಡಿದ ಯೋಧರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಈರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಫಿ ಬೆಳೆಗಾರರ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ನೀಡದಿದ್ದರೆ ನಿರಂತರ ಹೋರಾಟ

ರೈತ ಸಂಘ ಎಚ್ಚರಿಕೆ

ಸೋಮವಾರಪೇಟೆ, ಜು.25– ಕಾಫಿ ಬೆಳೆಗಾರರ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡದಿದ್ದರೆ ಸರ್ಕಾರ ವಿರುದ್ಧ ನಿರಂತರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕ ಎಚ್ಚರಿಸಿದೆ.

ಕಾಫಿ ಬೆಳೆಗಾರರಿಗೆ ರಾಜ್ಯ ಸರ್ಕಾರ ಉಚಿತ ವಿದ್ಯುತ್ ನೀಡಲು ನಿರಾಕರಣೆ ಮಾಡುವ ಮೂಲಕ ಅನ್ಯಾಯ ಮಾಡಿದ್ದು, ಜಿಲ್ಲೆಯ ಶಾಸಕರಿಗೆ ಸ್ವಾಭಿಮಾನವಿದ್ದರೆ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ರೈತ ಹೋರಾಟದಲ್ಲಿ ಭಾಗಿಯಾಗಬೇಕು ಎಂದು ಆಗ್ರಹಿಸಿದರು.

ಅತೀ ಹೆಚ್ಚು ತೆರಿಗೆಯನ್ನು ಕಾಫಿ ಬೆಳೆಗಾರರು ಕಟ್ಟುತ್ತಿದ್ದಾರೆ. ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ, ಹೊಗೆಸೊಪ್ಪು ಬೆಳೆಗಾರರಿಗೆ ಸರ್ಕಾರ ಉಚಿತ ವಿದ್ಯುತ್ ನೀಡುತ್ತಿದೆ. ಆದರೆ ಕಾಫಿಯನ್ನು ವಾಣಿಜ್ಯ ಬೆಳೆ ಎಂಬ ನೆಪವೊಡ್ಡಿ ಸೌಲಭ್ಯಗಳನ್ನು ನೀಡದೆ ವಂಚಿಸಲಾಗುತ್ತಿದೆ ಎಂದು ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ತಾಲ್ಲೂಕು ಅಧ್ಯಕ್ಷ ಕೆ.ಎಂ. ದಿನೇಶ್ ಅಸಮಾಧಾನ ವ್ಯಕ್ತಪಡಿಸಿದರು.

ರೈತ ಸಂಘದ ಹೋರಾಟ ಫಲವಾಗಿ ಕಳೆದ ಅಧಿವೇಶನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಉಚಿತ ವಿದ್ಯುತ್ ನೀಡುವ ಭರವಸೆ ನೀಡಿದ್ದರು. ಆದರೆ ಈಗ ಉಲ್ಟಾ ಹೊಡೆದು ಯಾವುದೋ ಷರತ್ತನ್ನು ವಿಧಿಸಿ, ವಿದ್ಯುತ್ ಬಿಲ್ ಕಟ್ಟಿ ನಂತರ ಖಾತೆ ಜಮಾ ಮಾಡುತ್ತೇವೆ ಎಂದು ಕಾಫಿ ಬೆಳೆಗಾರರ ಕಿವಿಗೆ ಹೂ ಮುಡಿಸುವ ಪ್ರಯತ್ನ ಮಾಡಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಗ್ಯಾಸ್ ಸಬ್ಸಿಡಿ ಕೊಟ್ಟು ನಂತರ ಸಬ್ಸಿಡಿ ಕಸಿದುಕೊಂಡ ಸರ್ಕಾರದ ಮೋಸವನ್ನು ಜನರು ಕಂಡಿದ್ದಾರೆ. ಇನ್ನು ವಿದ್ಯುತ್ ಬಿಲ್‌ನ್ನು ಖಾತೆಗೆ ಎಂಬುದು ಬೋಗಸ್ ಘೋಷಣೆ ಎಂದು ವ್ಯಂಗ್ಯವಾಡಿದರು.

ಕಾಫಿ ಬೆಳೆಗಾರರ ತೆರಿಗೆಯಿಂದ ಸರ್ಕಾರ ನಡೆಸುತ್ತಿರುವವರು ಬೆಳೆಗಾರರ ನ್ಯಾಯಬದ್ಧ ಬೇಡಿಕೆಯನ್ನು ಈಡೇರಿಸದಿದ್ದರೆ ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕಾಫಿ ತೋಟದ ವಿದ್ಯುತ್ ಪಂಪ್‌ಸೆಟ್‌ಗಳ ಬಿಲ್ ಪಾವತಿಸದ ರೈತರಿಗೆ ಸೆಸ್ಕ್ ಕಿರುಕುಳ ನೀಡಿದರೆ ಉಗ್ರಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ರೈತರನ್ನು ಕಾಪಾಡಬೇಕಾದರೆ, ಕೇರಳ ಮಾದರಿಯಲ್ಲಿ, ಕರ್ನಾಟಕ ರಾಜ್ಯಕೂಡ ಕಸ್ತೂರಿರಂಗನ್ ವರದಿಯನ್ನು ಅನುಷ್ಠಾನಗೊಳಿಸಲು ಮುಂದಾಗಬೇಕು ಎಂದು ಸಂಘದ ಸಂಚಾಲಕ ಜಿ.ಎಂ.ಹೂವಯ್ಯ ಸರ್ಕಾರವನ್ನು ಒತ್ತಾಯಿಸಿದರು.

ಕಾಫಿ ಫಸಲು ಉದುರಿ ಹಾನಿಯಾಗಿದೆ. ಕಳೆದ ವರ್ಷದಂತೆ ಈ ವರ್ಷವೂ ಸೂಕ್ತ ಪರಿಹಾರ ನೀಡಬೇಕು ಎಂದು ಸಂಚಾಲಕರಾದ ಎಸ್.ಬಿ. ರಾಜಪ್ಪ ಒತ್ತಾಯಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಾಜಿ ಸೈನಿಕ ಸಿ.ಬಿ. ಪ್ರಸನ್ನ, ಶಾಂತಮಲ್ಲಪ್ಪ ಇದ್ದರು.

ವಿದ್ಯುತ್ ಕಣ್ಣಾಮುಚ್ಚಾಲೆ: ಶ್ರೀಮಂಗಲ ವಿದ್ಯುತ್ ಸರಬರಾಜು ಉಪಕೇಂದ್ರದ ಎದುರು ಪ್ರತಿಭಟನೆ

ಆಗಸ್ಟ್ 1ಕ್ಕೆ ಮೇಲಾಧಿಕಾರಿಗಳ ಉಪಸ್ಥಿತಿಯಲ್ಲಿ ಸಭೆ ನಡೆಸಲು ತೀರ್ಮಾನ



ಶ್ರೀಮಂಗಲ, ಜು.25– ಶ್ರೀಮಂಗಲ ವಿದ್ಯುತ್ ಸರಬರಾಜು ಉಪ ಕೇಂದ್ರದ ವ್ಯಾಪ್ತಿಗೆ ಸರಬರಾಜಾಗುವ ವಿದ್ಯುತ್ ಮಾರ್ಗದಲ್ಲಿ ದಿನನಿತ್ಯ ಅಡಚಣೆಯಾಗುತ್ತಿದ್ದು, ಈ ಬಗ್ಗೆ ಸೆಸ್ಕ್ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ವಿದ್ಯುತ್ ಉಪ ಕೇಂದ್ರದ ಎದುರು ಶ್ರೀಮಂಗಲ ಚೇಂಬರ್ ಆಫ್ ಕಾಮರ್ಸ್ ನೇತೃತ್ವದಲ್ಲಿ ಹಲವು ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಶ್ರೀಮಂಗಲ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಮಾಣೀರ ಮುತ್ತಪ್ಪ ಮಾತನಾಡಿ, ವಿದ್ಯುತ್ ಉಪ ಕೇಂದ್ರಕ್ಕೆ ತುರ್ತು ಸಂದರ್ಭ ಹಾಗೂ ವಿದ್ಯುತ್ ಅಡಚಣೆಯ ದೂರುಗಳ ಬಗ್ಗೆ ಕರೆ ಮಾಡಿದರೆ ಇಲ್ಲಿನ ಕಿರಿಯ ಅಭಿಯಂತರ ಹಾಗೂ ಲೈನ್‌ಮ್ಯಾನ್‌ಗಳು ಕರೆ ಸ್ವೀಕರಿಸುವುದಿಲ್ಲ ಕಚೇರಿಗೆ ಬಂದರೆ ಯಾವುದೇ ಸಿಬ್ಬಂದಿ ಅಥವಾ ಅಧಿಕಾರಿಗಳು ಲಭ್ಯವಿರುವುದಿಲ್ಲ. ಎಲ್ಲಿ ಹೋಗಿದ್ದಾರೆ ಎಂದು ಕೇಳಿದರೂ ಉತ್ತರಿಸುವುದಿಲ್ಲ. ಶ್ರೀಮಂಗಲ ವಿದ್ಯುತ್ ಸರಬರಾಜು ಉಪಕೇಂದ್ರದಿಂದ ಬಿರುನಾಣಿ, ಟಿ–ಶೆಟ್ಟಿಗೇರಿ, ನಾಲ್ಕೇರಿ, ಕುಟ್ಟ, ಬೀರುಗ, ಕುರ್ಚಿ, ಪರಕಟಗೇರಿವರೆಗೆ ಮಾರ್ಗಗಳಿವೆ ಇವುಗಳನ್ನು ಸರಿಯಾಗಿ ನಿರ್ವಹಿಸದ ಕಾರಣ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಸಾರ್ವಜನಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಅಜ್ಜಮಾಡ ಕಟ್ಟಿಮಂದಯ್ಯ ಮಾತನಾಡಿ, ಶ್ರೀಮಂಗಲ ವಿದ್ಯುತ್ ಉಪ ಕೇಂದ್ರದ ವ್ಯಾಪ್ತಿ ಬಹಳ ವಿಸ್ತಾರವಾಗಿದ್ದು, ಹೆಚ್ಚಿನ ಮಳೆ ಹಾಗೂ ಗುಡ್ಡಗಾಡು ಪ್ರದೇಶವಾಗಿದೆ. ಇಲ್ಲಿಗೆ ಖಾಯಂ ಕಿರಿಯ ಅಭಿಯಂತರರು ಕೇಂದ್ರದಲ್ಲಿಯೇ ಇದ್ದು ಕಾರ್ಯ ನಿರ್ವಹಿಸಬೇಕಾಗಿದೆ. ಸೆಸ್ಕ್ ಇಲಾಖೆ ಲೈನ್‌ಮ್ಯಾನ್‌ಗಳಿಗೆ ಬಡ್ತಿ ನೀಡಿ ನಾಮಕಾವಸ್ಥೆಗೆ ಕಿರಿಯ ಅಭಿಯಂತರರನ್ನಾಗಿ ಆ ಸ್ಥಾನಕ್ಕೆ ಅರ್ಹತೆ ಇಲ್ಲದವರನ್ನು ನಿಯೋಜಿಸುತ್ತಿದೆ. ಮಳೆಗಾಲಕ್ಕೆ ಮುನ್ನ ಮಾರ್ಗದ ಸಮೀಪ ಇರುವ ಮರ ಕೊಂಬೆಗಳನ್ನು ತೆರವು ಮಾಡಬೇಕಾಗಿದ್ದರೂ ಇಲಾಖೆಯಿಂದ ಈ ಕಾರ್ಯ ನಡೆಯುತ್ತಿಲ್ಲ ಎಂದರು.

ಉಸ್ತುವಾರಿ ಕಿರಿಯ ಅಭಿಯಂತರ ನದಾಫ್ ಆಗಮಿಸಿ, ಇಲಾಖೆಯ ಹಿರಿಯ ಅಧಿಕಾರಿಗಳು ಪೂರ್ವ ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ತಕ್ಷಣ ಶ್ರೀಮಂಗಲಕ್ಕೆ ಆಗಮಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಲಾಖೆಯೇ ಹಿರಿಯ ಅಧಿಕಾರಿಗಳ ಮಟ್ಟದಲ್ಲಿ ಈ ಸಮಸ್ಯೆಗಳು ಬಗೆಹರಿಯಬೇಕಾಗಿರುವುದರಿಂದ ಅವರ ಗಮನಕ್ಕೆ ಈ ವಿಷಯವನ್ನು ತರಲಾಗುವುದು ಎಂದು ಭರವಸೆ ನೀಡಿದರು.

ಈ ಹಿನ್ನೆಲೆಯಲ್ಲಿ ಆಗಸ್ಟ್ 1 ರಂದು ಬೆಳಗ್ಗೆ 10.30ಕ್ಕೆ ಶ್ರೀಮಂಗಲ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ಶ್ರೀಮಂಗಲ ಚೇಂಬರ್ ಆಫ್ ಕಾಮರ್ಸ್, ಜಿಲ್ಲಾ ಸಾರ್ವಜನಿಕ ಹಿತರಕ್ಷಣಾ ಸಮಿತಿ ಮತ್ತು ಕೊಡಗು ಬೆಳೆಗಾರರ ಒಕ್ಕೂಟದ ಶ್ರೀಮಂಗಲ ಹೋಬಳಿ ವಿಭಾಗದಿಂದ ಸೆಸ್ಕ್ ಇಲಾಖೆಯ ಎಸ್.ಇ., ಇ.ಇ. ಎ.ಇ.ಇ. ಮತ್ತು ಜೆ.ಇ. ಅವರೊಂದಿಗೆ ಸಾರ್ವಜನಿಕ ಸಂವಾದ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿದೆ ಎಂದು ಮಾಣೀರ ಮುತ್ತಪ್ಪ ಅವರು ತಿಳಿಸಿದರು.

ಈ ಸಂದರ್ಭ ಶ್ರೀಮಂಗಲ ಹೋಬಳಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಕಾಳಿಮಾಡ ತಮ್ಮುಮುತ್ತಣ್ಣ, ಕಾರ್ಯದರ್ಶಿ ಬಾಚಂಗಡ ದಾದಾದೇವಯ್ಯ, ಕುಟ್ಟ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಮುಕ್ಕಾಟೀರ ನವೀನ್‌ಅಯ್ಯಪ್ಪ, ಟಿ–ಶೆಟ್ಟಿಗೇರಿ ಕೊಡವ ಸಮಾಜ ಅಧ್ಯಕ್ಷ ಚೊಟ್ಟೆಯಂಡಮಾಡ ವಿಶ್ವನಾಥ್, ರೈತ ಮುಖಂಡ ಪೆಮ್ಮಣಮಾಡ ರಮೇಶ್, ಪ್ರಮುಖ ಬೆಳೆಗಾರರಾದ ಸಿ.ಎ.ರಘು, ಅಯ್ಯಮಾಡ ತಿಮ್ಮಯ್ಯ, ಅಯ್ಯಮಾಡ ಸೋಮೇಶ್,ಚಂಗುಲಂಡ ರಾಜಪ್ಪ, ಕಾಳಿಮಾಡ ದಿಲೀಪ್, ಬಾದುಮಂಡ ಪೂಣಚ್ಚ, ಬಾದುಮಂಡ ಪಮ್ಮಿ ರಮೇಶ್, ತಡಿಯಂಗಡ ಗಣೇಶ್, ಮಚ್ಚಮಾಡ ಕಾಶಿ, ತೀತೀರ ಕರುಂಬಯ್ಯ, ಮೀದೇರಿರ ವಿಜಯ್, ಅಜ್ಜಮಾಡ ಶಂಬು, ಕೋಟ್ರಮಾಡ ರೋಷನ್, ಮಾಣೀರ ದರ್ಶನ್, ಕೋಟ್ರಮಾಡ ನಿತಿನ್ ಮತ್ತಿತರರು ಭಾಗವಹಿಸಿದ್ದರು.


ಶ್ರೀಮಂಗಲ ಠಾಣಾಧಿಕಾರಿ ರವಿಶಂಕರ್ ನೇತೃತ್ವದಲ್ಲಿ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಶ್ರಾವಣ ಶನಿವಾರದ ವಿಶೇಷ ಪೂಜೆ

ವಿರಾಜಪೇಟೆ, ಜು.25– ವಿರಾಜಪೇಟೆ ಬಳಿಯ ಮಗ್ಗುಲ ಗ್ರಾಮದಲ್ಲಿರುವ ಶ್ರೀ ಶನೇಶ್ವರ ಮತ್ತು ನವಗ್ರಹ ದೇವಾಲಯದಲ್ಲಿ ಜು.30 ರಿಂದ ಆಗಸ್ಟ್ 20 ರವರೆಗೆ ನಾಲ್ಕು ಶನಿವಾರಗಳು ಶ್ರಾವಣ ಮಾಸದ ವಿಶೇಷ ಪೂಜೆಗಳು ನಡೆಯಲಿವೆ.

ಜು.30 ರಂದು ಬೆಳಗ್ಗೆ 7 ಗಂಟೆಗೆ ಗಣಪತಿ ಹೋಮದೊಂದಿಗೆ ಪೂಜೆ ಪ್ರಾರಂಭವಾಗಲಿದೆ. ಆ.6, 13 ಮತ್ತು 20 ರವರೆಗೆ ನಡೆಯುವ ಶ್ರಾವಣ ಮಾಸದ ಪೂಜೆಯಲ್ಲಿ ನವಗ್ರಹ ಮತ್ತು ಶನಿಶಾಂತಿ ಪೂಜೆ, ಜಪ ಹಾಗೂ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಬಳಿಕ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ದೇವಾಲಯದ ಅಧ್ಯಕ್ಷ ಚೊಕಂಡ ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮ್ಮಣ್ಣಗೌಡ ನಿಧನ



ಸೋಮವಾರಪೇಟೆ, ಜು.25– ಸಮೀಪದ ದೊಡ್ಡಹಣಕೋಡು ಗ್ರಾಮದ ಕಾಫಿ ಬೆಳೆಗಾರರಾದ ಎಚ್.ಪಿ.ತಮ್ಮಣ್ಣಗೌಡ(80) ಭಾನುವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಿತು.

ಕಬ್ಬಳ್ಳಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಗುಂಡ್ಲುಪೇಟೆ, ಜು.25–ಕ್ಷೇತ್ರದಲ್ಲಿ ಅಗತ್ಯವಿರುವ ಗ್ರಾಮಗಳಿಗೆ ಆದ್ಯತೆ ಮೇರೆಗೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ತಿಳಿಸಿದರು.

ತಾಲೂಕಿನ ಕಬ್ಬಳ್ಳಿ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಕುರುಬ ಸಮುದಾಯದ ಬಡಾವಣೆ ರಸ್ತೆ ನಿರ್ಮಾಣ ಮಾಡುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಅಗತ್ಯವಿರುವ ಗ್ರಾಮಗಳಿಗೆ ಆದ್ಯತೆ ಮೇರೆಗೆ ಕಾಂಕ್ರಿಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದೇ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿನ ಕುಡಿಯುವ ನೀರು, ರಸ್ತೆ ಚರಂಡಿ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಅವಿರತವಾಗಿ ಶ್ರಮಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ವೃಷಭೇಂದ್ರ, ಪಟೇಲ್ ಮಹೇಶ್, ಕಲ್ಲಹಳ್ಳಿ ಮಹೇಶ್, ಮಲ್ಲಿಕಾರ್ಜುನ ಶ್ಯಾನಾಡ್ರಹಳ್ಳಿ, ಎಪಿಎಂಸಿ ಸದಸ್ಯೆ ರತ್ನಮ್ಮ, ತಾಪಂ ಮಾಜಿ ಸದಸ್ಯರಾದ ರೇವಣ್ಣ, ಮಹದೇವಪ್ರಸಾದ್, ಹಾಗೂ ಗ್ರಾಪಂ ಸದಸ್ಯರಿದ್ದರು.

ಶಾಲಾ ಮಕ್ಕಳಿಗೆ ಪರಿಕರ ವಿತರಣೆ



ಯಳಂದೂರು,ಜು 25–ತಾಲೂಕಿನ ಕೆ.ದೇವರಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಮಕ್ಕಳಿಗೆ ವಿಧಾನಪರಿಷತ್ ಸದಸ್ಯ ಮಂಜೇಗೌಡ ಅಭಿಮಾನಿ ಬಳಗದಿಂದ ತಟ್ಟೆ, ಲೋಟ ಸೇರಿದಂತೆ ವಿವಿಧ ಪರಿಕರಗಳನ್ನು ವಿತರಿಸಲಾಯಿತು.

ಮುಖಂಡ ಭರತ್‌ಗೌಡ ಪರಿಕರ ವಿತರಿಸಿ ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮೂಲ ಸೌಲಭ್ಯ ಲಭಿಸಬೇಕು ಎಂಬುದು ಸಂವಿಧಾನದ ಆಶಯ. ಇಲ್ಲಿನ ಸೋಲಿಗ ಸಮುದಾಯ ಬುಡಕಟ್ಟು ಜನಾಂಗವಾಗಿದ್ದು, ಇವರ ಅಭಿವೃದ್ಧಿಗೆ ಮತ್ತಷ್ಟು ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಯರಗಂಬಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಡಿ.ಸಿ.ಬಾಬು, ಸೋಮಣ್ಣ, ಜಗದೀಶ್, ಸತೀಶ್‌ಗೌಡ ಪುಟ್ಟಮಾದಯ್ಯ, ಚನ್ನಂಜೇಗೌಡ, ಮಲ್ಲಪ್ಪಪ್ರಸಾದ್, ಉಮೇಶ್, ವೀರಣ್ಣ ಸೇರಿದಂತೆ ಅನೇಕರಿದ್ದರು.

ಸಾವಿನ ನಂತರವೂ ಮೆರೆದ ಸ್ವಾಭಿಮಾನ



ಚಾಮರಾಜನಗರ, ಜು.25–ಮಕ್ಕಳಿಗೆ ಹೊರೆಯಾಗಬಾರದೆಂಬ ಉದ್ದೇಶದಿಂದ ಬದುಕಿರುವಾಗಲೇ ಸಮಾಧಿ ನಿರ್ಮಿಸಿಕೊಂಡು, ಸ್ವಂತ ಖರ್ಚಿನಿಂದಲೇ ಅಂತಿಮ ವಿಧಿ–ವಿಧಾನ ನೆರವೇರಬೇಕೆಂದು ಲಕ್ಷ ರೂ. ಸಂಗ್ರಹಿಸಿಟ್ಟಿದ್ದ ಸ್ವಾಭಿಮಾನಿಯೊಬ್ಬರು ತಮ್ಮ ಇಚ್ಛೆಯಂತೆಯೇ ಸಾವಿನ ನಂತರವೂ ಸ್ವಾಭಿಮಾನ ಮೆರೆದಿದ್ದಾರೆ.

ಚಾಮರಾಜನಗರ ತಾಲೂಕಿನ ನಂಜದೇವನಪುರದ ನಿವಾಸಿ ಪುಟ್ಟನಂಜಪ್ಪ(85) ಸಾವಿನ ನಂತರವೂ ಸ್ವಾಭಿಮಾನ ಮೆರೆದವರು. 12 ದಿನಗಳಿಂದ ವಯೋಸಹಜ ಅನಾರೋಗ್ಯಕ್ಕೀಡಾಗಿದ್ದ ಇವರು ಭಾನುವಾರ ಸಂಜೆ ಕೊನೆಯುಸಿರೆಳೆದರು. ಸೋಮವಾರ ಸಂಜೆ ಮೃತರ ಇಚ್ಛೆಯಂತೆ ಅವರ ಜಮೀನಿನಲ್ಲಿ ಕ್ರಿಯಾ ಸಮಾಧಿ ನೆರವೇರಿಸಲಾಯಿತು.

ಬಹಳ ಸ್ವಾಭಿಮಾನಿಯಾಗಿದ್ದ ಪುಟ್ಟನಂಜಪ್ಪ ಅವರು,ತಾನು ಸತ್ತಾಗ ಯಾರಿಗೂ ತೊಂದರೆ ಕೊಡಬಾರದು. ತಾನು ದುಡಿದ ಹಣದಲ್ಲೇ ತಮ್ಮ ಅಂತಿಮ ವಿಧಿ–ವಿಧಾನಗಳು ನಡೆಯಬೇಕು ಎಂದು ಬಯಸಿದ್ದರು. ಇದಕ್ಕಾಗಿ ಅವರು ತಮ್ಮ ತೋಟದಲ್ಲೇ 20 ವರ್ಷಗಳ ಹಿಂದೆಯೇ ಸಮಾಧಿ ನಿರ್ಮಿಸಿಕೊಂಡು, ಅದಕ್ಕೆ ಮಣ್ಣು ಹಾಕಿ ಮುಚ್ಚಿಸಿದ್ದರು. ಸುಮಾರು ಲಕ್ಷ ರೂ. ಗಳನ್ನೂ ಸಹ ಅಂತಿಮ ಸಂಸ್ಕಾರಕ್ಕಾಗಿ ಸಂಗ್ರಹಿಸಿಟ್ಟಿದ್ದರು. ತಾವು ಸತ್ತಾಗ ತಾವೇ ನಿರ್ಮಿಸಿಕೊಂಡಿರುವ ಸಮಾಧಿಯಲ್ಲಿ ಅಂತ್ಯಕ್ರಿಯೆ ನಡೆಸಬೇಕು, ತಾವು ಸಂಗ್ರಹಿಸಿಟ್ಟಿರುವ ಹಣದಲ್ಲೇ ಅಂತ್ಯಕ್ರಿಯೆ ಖರ್ಚು ಹಾಗೂ 12ನೇ ದಿನದ ಕಾರ್ಯ (ತಿಥಿ ಕಾರ್ಯ) ಮಾಡಬೇಕು ಎಂದು ಕುಟುಂಬದವರಿಗೆ ತಿಳಿಸಿದ್ದರಂತೆ. ತಮ್ಮ ತಂದೆಯ ಆಸೆಯಂತೆ ಮಕ್ಕಳು ಇಂದು ನಡೆದುಕೊಂಡರು.

ತಂದೆಯ ಮೃತದೇಹವನ್ನು ಅವರೇ ನಿರ್ಮಿಸಿಕೊಂಡಿದ್ದ ಸಮಾಧಿಯಲ್ಲಿ ಮಣ್ಣು ಮಾಡಿದರು. ಅವರೇ ಸಂಗ್ರಹಿಸಿಟ್ಟಿದ್ದ ಹಣವನ್ನು ಅಂತಿಮ ಕಾರ್ಯಕ್ಕೆ ಖರ್ಚು ಮಾಡಿದರು. ತಂದೆಯೇ ಇಟ್ಟಿದ್ದ ವಿಭೂತಿ ಸೇರಿದಂತೆ ವಿವಿಧ ಪೂಜಾ ಸಾಮಗ್ರಿಗಳನ್ನು ಬಳಸಿ ವಿಧಿ–ವಿಧಾನ ನೆರವೇರಿಸುವ ಮೂಲಕ ಮಕ್ಕಳು ತಂದೆಯ ಆಸೆ ಪೂರೈಸಿದರು.

ಕಳೆದ ವರ್ಷ ಮೃತರ ಪತ್ನಿ ನಾಗಮ್ಮ ಅವರೂ ಅನಾರೋಗ್ಯದಿಂದ ನಿಧನ ಹೊಂದಿದ್ದರು. ತಾವು ನಿರ್ಮಿಸಿದ್ದ ಸಮಾಧಿಯ ಪಕ್ಕದಲ್ಲೇ ಪತ್ನಿಯ ಅಂತ್ಯಸಂಸ್ಕಾರ ನೆರವೇರಿಸಿದ್ದರು.



ನಮ್ಮ ತಂದೆ 20 ವರ್ಷದ ಹಿಂದೆಯೇ ಸಮಾಧಿ ನಿರ್ಮಿಸಿಕೊಂಡಿದ್ದರು. 1 ಲಕ್ಷ ರೂ.ಗಳನ್ನು ಸಹ ಇಟ್ಟಿದ್ದರು. ಈ ಹಣದಲ್ಲಿ ನಾನು ಸತ್ತಾಗ ಬರುವ ಜನರಿಗೆ ಪ್ರಸಾದ ವ್ಯವಸ್ಥೆ ಮಾಡಬೇಕು. ಎಲ್ಲೂ ಸಹ ಲೋಪವಾಗಬಾರದು. ಸಂತೋಷದಿಂದ ಅಂತಿಮ ಕಾರ್ಯ ನೆರವೇರಿಸಬೇಕು ಎಂದು ಆಸೆ ಹೊಂದಿದ್ದರು. ಕ್ರಿಯಾ ಸಮಾಧಿಗೆ ಬೇಕಾದ ಪೂಜಾ ಸಾಮಗ್ರಿಗಳನ್ನು ಸಹ ಸಂಗ್ರಹಿಸಿಟ್ಟಿದ್ದರು. ಅವರ ಆಶಯದಂತೆ ಅವರೇ ನಿರ್ಮಿಸಿಕೊಂಡಿದ್ದ ಸಮಾಧಿಯಲ್ಲಿ, ಅವರೇ ಸಂಗ್ರಹಿಸಿಟ್ಟಿದ್ದ ಹಣವನ್ನು ವಿನಿಯೋಗಿಸಿ, ಅಂತ್ಯಸಂಸ್ಕಾರ ನೆರವೇರಿಸಲಾಗಿದೆ.

–ಗೌಡಿಕೆ ನಾಗೇಶ್, ಪುಟ್ಟನಂಜಪ್ಪ ಅವರ ಪುತ್ರ.

ಇಂದು ಹಡಪದ ಅಪ್ಪಣ್ಣ ಜಯಂತಿ ಆಚರಣೆ

ಚಾಮರಾಜನಗರ, ಜು.25–ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಡಪದ ಅಪ್ಪಣ್ಣ ಜಯಂತಿಯನ್ನು ಜು.26ರಂದು ಮಧ್ಯಾಹ್ನ 2 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್ ಉಪಸ್ಥಿರಿರುವರು. ಜಿಲ್ಲೆಯ ಶಾಸಕರು ಭಾಗವಹಿಸುವರು.

ಜಿಲ್ಲೆಯಲ್ಲಿ 75ನೇ ಸ್ವಾತಂತ್ರ್ಯ ದಿನ ಅದ್ಧೂರಿ ಆಚರಣೆಗೆ ನಿರ್ಧಾರ



ಚಾಮರಾಜನಗರ, ಜು.25–ಜಿಲ್ಲೆಯಲ್ಲಿ ಜಿಲ್ಲಾಡಳಿತದಿಂದ ಆ.15ರಂದು ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಎಲ್ಲರ ಸಹಕಾರದೊಂದಿಗೆ ಅದ್ಧೂರಿಯಾಗಿ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸಭೆಯ ಆರಂಭದಲ್ಲಿ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರು, ಜಿಲ್ಲೆಯಲ್ಲಿ ಸ್ವಾತಂತ್ರ್ಯದ 75ರ ಕಾರ್ಯಕ್ರಮವನ್ನು ಸಂಭ್ರಮ ಹಾಗೂ ವೈವಿಧ್ಯಮಯವಾಗಿ ಏರ್ಪಡಿಸಬೇಕು. ಸ್ವಾತಂತ್ರ್ಯದ ಮಹತ್ವ ಇತಿಹಾಸದ ಕುರಿತು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಶಾಲಾ ಕಾಲೇಜುಗಳು, ಬ್ಯಾಂಕ್‌ಗಳು, ಸರ್ಕಾರಿ ಕಚೇರಿಗಳು, ಎಲ್ಲಾ ಸಂಘ–ಸಂಸ್ಥೆಗಳು, ಉದ್ಯಮ ಸ್ಥಳಗಳಲ್ಲಿ ಧ್ವಜಾರೋಹಣ ನೆರವೇರಿಸಬೇಕು. ವಿದ್ಯಾರ್ಥಿಗಳನ್ನು ಸ್ವಾತಂತ್ರೋತ್ಸವ ಕಾರ್ಯಕ್ರಮದಲ್ಲಿ ಜವಾಬ್ದಾರಿಯುತವಾಗಿ ಕರೆತಂದು ಕಳುಹಿಸಿಕೊಡಬೇಕು. ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆಯೂ ತಿಳಿವಳಿಕೆ ಮೂಡಿಸಬೇಕು ಎಂದರು.

ಇದೇ ವೇಳೆ ಜಿಲ್ಲೆ ರೂಪುಗೊಂಡು 25 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಪ್ರತ್ಯೇಕ ದಿನದಂದು ವಿಶೇಷ ಕಾರ್ಯಕ್ರಮ ಆಯೋಜಿಸಬೇಕು. ಈ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಚರ್ಚೆ ಮಾಡಬೇಕೆಂದು ಮುಖಂಡರು ಸಲಹೆ ನೀಡಿದರು.

ಎಲ್ಲಾ ಮುಖಂಡರ ಸಲಹೆ ಆಲಿಸಿದ ಜಿಲ್ಲಾಧಿಕಾರಿ, ಎಲ್ಲರ ಅಭಿಪ್ರಾಯದಂತೆ ಅದ್ಧೂರಿಯಾಗಿ ಸ್ವಾತಂತ್ರ್ಯ ದಿನ ಆಚರಣೆ ಕಾರ್ಯಕ್ರಮ ಏರ್ಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು. ಈ ಬಾರಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆ.13ರಿಂದ 15ರವರೆಗೆ ಮೂರು ದಿನಗಳ ಕಾಲ ನಗರ, ಗ್ರಾಮೀಣ ಪ್ರದೇಶಗಳ ಮನೆಗಳು, ಸರ್ಕಾರಿ ಕಚೇರಿ, ಬ್ಯಾಂಕ್‌ಗಳು, ಶಾಲಾ ಕಾಲೇಜು, ಸಂಘ ಸಂಸ್ಥೆಗಳು ಸೇರಿದಂತೆ ವಿವಿಧೆಡೆ ಹರ್ ಘರ್ ತಿರಂಗಾ ಅಭಿಯಾನದಡಿ ರಾಷ್ಟ್ರಧ್ವಜ ಹಾರಿಸಿ ದೇಶಾಭಿಮಾನ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಾಗೂ ಪಥ ಸಂಚಲನ, ಇನ್ನಿತರ ರಾಷ್ಟ್ರಪ್ರೇಮ ಅಭಿವ್ಯಕ್ತಪಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅಲ್ಲದೆ ಜಿಲ್ಲೆಗೆ 25 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ ಆಯೋಜನೆ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ತೀರ್ಮಾನಿಸುವುದಾಗಿ ಜಿಲ್ಲಾಧಿಕಾರಿ ತಿಳಿಸಿದರು.

ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಸಿ ಗೀತಾ ಹುಡೇದ, ಜಿಪಂ ಉಪ ಕಾರ್ಯದರ್ಶಿ ಗುಡೂರು ಭೀಮಸೇನ, ಮುಖಂಡರಾದ ಶಾ.ಮುರಳಿ, ಚಾ.ರಂ.ಶ್ರೀನಿವಾಸಗೌಡ, ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ್, ಚಾ.ಗು. ನಾಗರಾಜು, ಬ್ಯಾಡಮೂಡ್ಲು ಬಸವಣ್ಣ, ಶಿವಣ್ಣ, ನಾಗೇಶ್, ಮಲ್ಲಿಕಾರ್ಜುನ್, ಆಲೂರು ನಾಗೇಂದ್ರ, ಪಣ್ಯದಹುಂಡಿ ರಾಜು, ರಾಮು, ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

ಜಿಎಸ್‌ಟಿ ವಿಧಿಸಿ ಬಡವರ ಶೋಷಣೆ



ಚಾಮರಾಜನಗರ, ಜು.25–ದಿನನಿತ್ಯ ಬಳಸುವ ಪದಾರ್ಥಗಳ ಮೇಲೂ ಜಿಎಸ್‌ಟಿ ವಿಧಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಬಿಜೆಪಿ ನೇತೃತ್ವದ ಸರ್ಕಾರ ರೈತರು, ಬಡವರ ರಕ್ತ ಹೀರುತ್ತಿವೆ ಎಂದು ಜಿಪಂ ಮಾಜಿ ಸದಸ್ಯ, ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಕೆರೆಹಳ್ಳಿ ನವೀನ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಶವಕ್ಕೆ ಇನ್ನೂ ಜಿಎಸ್‌ಟಿ ಹಾಕಿಲ್ಲ. ಅದನ್ನು ಹೊರತುಪಡಿಸಿದರೆ ಇನ್ನು ಎಲ್ಲದಕ್ಕೂ ಕೇಂದ್ರ ಜಿಎಸ್‌ಟಿ ವಿಧಿಸುತ್ತಿದೆ. ಈ ಹಿಂದೆ ಅವಶ್ಯಕ ಸೇವೆಗಳು, ಬಡವರು ಬಳಸುವ ವಸ್ತುಗಳು ಎಂದು ತೆರಿಗೆ ವಿಧಿಸದೇ ಬಿಡಲಾಗಿದ್ದಕ್ಕೆಲ್ಲ ಈಗಿನ ಸರ್ಕಾರ ಜಿಎಸ್‌ಟಿ ವಿಧಿಸುತ್ತದೆ. ಈ ಮೂಲಕ ತುಘಲಕ್ ದರ್ಬಾರ್ ನಡೆಸುತ್ತಿದೆ ಎಂದು ಟೀಕಿಸಿದರು.

ಎಂಟು ವರ್ಷಗಳ ಬಿಜೆಪಿ ಆಡಳಿತದಿಂದ ಜನರು ಬೇಸತ್ತು ಹೋಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೆಲವೇ ಕೆಲವು ಮಂದಿ ಬಂಡವಾಳಶಾಹಿಗಳಿಗೆ ಮಾತ್ರ ಅಚ್ಛೇ ದಿನ್ ನೀಡಿದ್ದಾರೆ. ಮೊಸರು, ಪನೀರ್, ಲಸ್ಸಿ ಸೇರಿದಂತೆ ವಿವಿಧ ರೈತರ ಉತ್ಪನ್ನಗಳಿಗೆ ಶೇ.5ರಷ್ಟು ಜಿಎಸ್‌ಟಿ ಹಾಕಿರುವುದು ಬಿಜೆಪಿ ಸರ್ಕಾರದ ಅವೈಜ್ಞಾನಿಕ ತೆರಿಗೆ ನೀತಿಯಾಗಿದೆ. ಅಲ್ಲದೆ ಜನರನ್ನು ಜಿಎಸ್‌ಟಿ ತೆರಿಗೆಯ ಮೂಲಕ ಶೋಷಿಸಲಾಗುತ್ತಿದೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ ಬಗ್ಗೆ ಜನರು ಭ್ರಮನಿರಸನಗೊಂಡಿದ್ದು, ಯಾವುದೇ ಸಂದರ್ಭದಲ್ಲಿ ಚುನಾವಣೆ ಬಂದರೂ ಬಿಜೆಪಿ ಸೋಲಿಸಲು ಜನರು ಕಾಯುತ್ತಿದ್ದಾರೆ. ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು. ಕಾಂಗ್ರೆಸ್ ಮುಖಂಡ ಮಹೇಶ್, ಕೆಪಿಸಿಸಿ ಪರಿಶಿಷ್ಟ ವರ್ಗಗಳ ಘಟಕದ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸ ನಾಯಕ ಮಾತನಾಡಿದರು. ಜಿಪಂ ಮಾಜಿ ಸದಸ್ಯ ಶಿವಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್ ಸುದ್ದಿಗೋಷ್ಠಿಯಲ್ಲಿದ್ದರು.

ಪಡಿತರ ಅಕ್ರಮ ಸಾಗಣೆ: 395 ಕೆಜಿ ಅಕ್ಕಿ ವಶ

ಕೊಳ್ಳೇಗಾಲ, ಜು.25– ಅಕ್ರಮವಾಗಿ ಅನ್ನಭಾಗ್ಯ ಅಕ್ಕಿ ಸಂಗ್ರಹಿಸಿ ಅಧಿಕ ಬೆಲೆಗೆ ಮಾರಾಟಕ್ಕೆ ತೆಗೆದುಕೊಂಡು ತೆರಳುತ್ತಿದ್ದ ಗೂಡ್ಸ್ ಆಟೋವನ್ನು ಮಾಂಬಳ್ಳಿ ಪೊಲೀಸರು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲೂಕಿನ ಚಿಲಕವಾಡಿ ಗ್ರಾಮದ ದಂಡಿನ ಮಾರಮ್ಮನ ದೇವಸ್ಥಾನ ಸಮೀಪ ಅಕ್ರಮವಾಗಿ ಪಡಿತರ ಸಂಗ್ರಹಿಸಿ ಗೂಡ್ಸ್ ಆಟೋ ತೆರಳುತ್ತಿದ್ದ ಖಚಿತ ಮಾಹಿತಿ ಮೇರೆಗೆ ಮಾಂಬಳ್ಳಿ ಪೊಲೀಸರು ದಾಳಿ ನಡೆಸಿದ್ದಾರೆ. ಈ ವೇಳೆ ಆರೋಪಿಗಳು ಆಟೋ ಬಿಟ್ಟು ಪರಾರಿಯಾಗಿದ್ದಾರೆ. 8 ಚೀಲದಲ್ಲಿದ್ದ 395 ಕೆಜಿ ತೂಕದ ಪಡಿತರ ಅಕ್ಕಿ ಸಮೇತ ಆಟೋವನ್ನು ವಶಕ್ಕೆ ಪಡೆಸಿಕೊಂಡಿರುವ ಮಾಂಬಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಂದನೇ ಪುಟದಿಂದ

ಸಾಕಾರಗೊಳಿಸುತ್ತವೆ ಎಂಬುದನ್ನು ಸಾಬೀತುಪಡಿಸುತ್ತದೆ

ವಿಷಯವಾಗಿದೆ ಎಂದರು. ಭಾಷಣದ ಮಧ್ಯೆ ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಸಿದರು. ಸ್ವಾತಂತ್ರ್ಯ ಹೋರಾಟಗಾರರ ನಿರೀಕ್ಷೆಗಳನ್ನು ಪೂರೈಸಲು ದೇಶವು "ಸಬ್ಕಾ ಪ್ರಯಾಸ್" (ಎಲ್ಲರ ಪ್ರಯತ್ನ) ಮತ್ತು "ಸಬ್ಕಾ ಕರ್ತವ್ಯ (ಎಲ್ಲರ ಕರ್ತವ್ಯ) ದ ಅವಳಿ ಮಾರ್ಗಗಳಲ್ಲಿ ತ್ವರಿತವಾಗಿ ಮುನ್ನಡೆಯಬೇಕಾಗುತ್ತದೆ ಎಂದು ಹೇಳಿದರು.

ಸ್ವಾತಂತ್ರ್ಯದ ನಂತರ ಜನಿಸಿದ ಮೊದಲ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಾಗಿರುವುದಾಗಿ ಅದನ್ನು ಭಾಷಣದಲ್ಲಿ ಪ್ರಸ್ತಾಪಿಸಿ ಮಾತನಾಡಿ, ದೇಶವು ಈ ವರ್ಷ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವ "ಆಜಾದಿ ಕಾ ಅಮೃತ್ ಮಹೋತ್ಸವ" ವನ್ನು ಆಚರಿಸುತ್ತಿರುವ ಸಮಯದಲ್ಲಿ ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವುದು ನನ್ನ ಸುದೈವ ಎಂದರು. ಭಾರತದ ಮೊದಲ ಬುಡಕಟ್ಟು ಜನಾಂಗದ ರಾಷ್ಟ್ರಪತಿಯಾಗಿರುವ ಮುರ್ಮು ಅವರು ಒಡಿಶಾದ ಒಂದು ಸಣ್ಣ ಬುಡಕಟ್ಟು ಹಳ್ಳಿಯಿಂದ ಬಂದವರು. ಅಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದು ಕನಸಿನಂತಿತ್ತು. ಆ ಸಮಯದಲ್ಲಿ ಕಾಲೇಜು ಶಿಕ್ಷಣಕ್ಕೆ ದಾಖಲಾದ ಹಳ್ಳಿಯ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ನಾನು ಪಾತ್ರಳಾಗಿದ್ದೆ ಎಂದು ನೆನಪಿಸಿಕೊಂಡರು. ಇದು ಭಾರತದ ಪ್ರಜಾಪ್ರಭುತ್ವದ ಶಕ್ತಿಗೆ ಸಂದ ಗೌರವವಾಗಿದೆ. ಪ್ರಾಚೀನ ದೇಶವನ್ನು ಮುನ್ನಡೆಸುತ್ತಿರುವುದಕ್ಕೆ ಹೆಮ್ಮೆಯಿದೆ. ಭಾರತೀಯರಿಗೆ, ವಿಶೇಷವಾಗಿ ಯುವಕರು ಮತ್ತು ಮಹಿಳೆಯರಿಗೆ ಭರವಸೆಯ ಬೆಳಕಾಗಿ ಬಯಸುತ್ತೇನೆ. ಅವರ ಹಿತಾಸಕ್ತಿಯು ರಾಷ್ಟ್ರಪತಿಯಾಗಿ ತನಗೆ ಶ್ರೇಷ್ಠವಾಗಿರುತ್ತದೆ ಎಂದರು.

ದೇಶವು ಈಗ "ಏಕ್ ಭಾರತ್, ಶ್ರೇಷ್ಠ ಭಾರತ್" (ಒಂದು ಭಾರತ, ಶ್ರೇಷ್ಠ ಭಾರತ) ನಿರ್ಮಾಣದಲ್ಲಿ ನಿರತವಾಗಿದೆ, ಅದರ ಅಭಿವೃದ್ಧಿ ಕಾರ್ಯಸೂಚಿಗಾಗಿ ಸರ್ಕಾರದ ಪ್ರಮುಖ ಘೋಷಣೆಗಳಲ್ಲಿ ಒಂದನ್ನು ಉಲ್ಲೇಖಿಸಿ ಮಾತನಾಡಿದರು. ಭಾರತವು ಈಗ ಪ್ರತಿಯೊಂದು ಕ್ಷೇತ್ರದಲ್ಲೂ ಅಭಿವೃದ್ಧಿಯ ಹೊಸ ಅಧ್ಯಾಯವನ್ನು ಬರೆಯುತ್ತಿದೆ. ಕೋವಿಡ್-19 ಸಾಂಕ್ರಾಮಿಕ ರೋಗವನ್ನು ನಿರ್ವಹಿಸಿದ ರೀತಿ ದೇಶದ ನಾಗರಿಕರಿಗೆ 200 ಕೋಟಿಗೂ ಹೆಚ್ಚು ಲಸಿಕೆ ಡೋಸ್‌ಗಳನ್ನು ವಿತರಿಸಿದ ಕೇಂದ್ರ ಸರ್ಕಾರದ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಕೇಂದ್ರ ಸರ್ಕಾರದ ಸ್ವಳೀಯತೆಗೆ ಆದ್ಯತೆ, ಡಿಜಿಟಲ್ ಇಂಡಿಯಾ ಅಭಿಯಾನಗಳನ್ನು ಕೊಂಡಾಡಿದರು.

ದೇಶಕ್ಕೆ ಪರ್ವಕಾಲ ಎಂದ ಪ್ರಧಾನಿ: ಇಂದು 15ನೇ ರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿ ಇತಿಹಾಸ ನಿರ್ಮಿಸಿದ ಗಳಿಗೆಯನ್ನು ದೇಶಕ್ಕೆ ಒಂದು ಪರ್ವಕಾಲ, ವಿಶೇಷವಾಗಿ ಬಡವರು, ನಿರ್ಗತಿಕರು ಮತ್ತು ತುಳಿತಕ್ಕೊಳಗಾದ ಸಮುದಾಯದವರಿಗೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಪ್ರಮಾಣ ವಚನ ಸ್ವೀಕರಿಸುವುದನ್ನು ಇಡೀ ದೇಶ ಹೆಮ್ಮೆಯಿಂದ ನೋಡಿದೆ, ಅವರ ಅಧಿಕಾರಾವಧಿ ಸುಗಮವಾಗಿ ಸಾಗಲಿ ಎಂದು ಆಶಿಸಿದ್ದಾರೆ. ಪ್ರಮಾಣ ವಚನ ಸ್ವೀಕರಿಸಿದ ನಂತರ ಮಾಡಿದ ಭಾಷಣದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭರವಸೆ ಮತ್ತು ಸಹಾನುಭೂತಿಯ ಸಂದೇಶವನ್ನು ನೀಡಿದ್ದಾರೆ. ಅವರು ಭಾರತದ ಸಾಧನೆಗಳ ಮೇಲೆ ಒತ್ತು ನೀಡಿದರು. ಭಾರತವು ಆಜಾದಿ ಕಾ ಅಮೃತ್ ಮಹೋತ್ಸವವನ್ನು ಆಚರಿಸುತ್ತಿರುವ ಸಮಯದಲ್ಲಿ ಮುಂದಿನ ಹಾದಿಯ ಭವಿಷ್ಯದ ದೃಷ್ಟಿಕೋನವನ್ನು ಪ್ರಸ್ತುತಪಡಿಸಿದ್ದಾರೆ ಎಂದು ಪ್ರಧಾನಿ ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿ ಟಿಪ್ಸ್

ರಾಜ್ಯದ ಬಹು ಜನರ ಬೇಡಿಕೆಗಳ ಈಡೇರಿಸಿದಂತಾಗುತ್ತದೆ. ಇವು ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿವೆ. ನಾವು ಕಾನೂನಾತ್ಮಕವಾಗಿ ಒಂದೆಡೆ ಹೋರಾಟ ನಡೆಸಿ, ಕೆಲವು ಗಳಲ್ಲಿ ಜಯ ಸಾಧಿಸಿದ್ದೇವೆ. ಮತ್ತೆ ಕೆಲವು ವಿಷಯಗಳಲ್ಲಿ ಕೇಂದ್ರದ ಅನುಮತಿ ಬೇಕಾಗಿದೆ ಎಂದಿದ್ದಾರೆ. ಚುನಾವಣಾ ಸಂದರ್ಭದಲ್ಲಿ ನೀವು ನಮಗೆ ಎಷ್ಟು ಸಮಯ ಕೊಡುತ್ತೀರೋ ಅಷ್ಟು ನಮ್ಮದಲ್ಲದ ಮತಗಳನ್ನು ಪಡೆಯಲು ಸಾಧ್ಯ ಎಂದು ಬೊಮ್ಮಾಯಿ ಅವರು ವಿವರಿಸಿದ್ದಾರೆ ಎನ್ನಲಾಗಿದೆ. ಗುಜರಾತ್ ವಿಧಾನಸಭೆ ಚುನಾವಣೆಯತ್ತ ನಾನು ಮತ್ತು ಗೃಹ ಸಚಿವ ಅಮಿತ್ ಷಾ ಹೆಚ್ಚಿನ ಸಮಯ ನೀಡುತ್ತೇವೆ. ನಿಮ್ಮಲ್ಲಿನ 30 ಜಿಲ್ಲೆಗಳಲ್ಲೂ ಕಾರ್ಯಕ್ರಮಗಳನ್ನು ರೂಪಿಸಿ, ನಾನು ಸರ್ಕಾರಿ ಕಾರ್ಯಕ್ರಮ ಹಾಗೂ ಪಕ್ಷದ ಬೃಹತ್ ಸಮಾವೇಶಗಳಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದಾರೆ.

ಅಮಿತ್ ಷಾ ಅವರು ಕರ್ನಾಟಕದಲ್ಲಿ ಎರಡು ಮೂರು ವಾರಗಳ ಕಾಲ ಬಿಡಾರ ಹೂಡಿ, ನಿಮ್ಮಲ್ಲಿನ ಪರಿಸ್ಥಿತಿ ಅವಲೋಕಿಸಿ, ಅಭ್ಯರ್ಥಿಗಳ ಆಯ್ಕೆ ಸೇರಿದಂತೆ ಎಲ್ಲಾ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಈಗಾಗಲೇ ಬಂದಿರುವ ಸಮೀಕ್ಷೆಗಳನ್ನು ಆಧಾರವಾಗಿಟ್ಟುಕೊಂಡು ನೀವು ಚುನಾವಣಾ ಕೆಲಸ ಆರಂಭಿಸಿ ಎಂದು ಪ್ರಧಾನಿಯವರು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ವಿರೋಧಿ ಕಾಂಗ್ರೆಸ್ ಪಕ್ಷ ಮತ್ತೆ ರಾಜ್ಯದಲ್ಲಿ ತಲೆ ಎತ್ತದಂತೆ ನೋಡಿಕೊಳ್ಳಬೇಕು. ಇದಕ್ಕೆ ತಕ್ಷಣದಿಂದಲೇ ಕಾರ್ಯಕ್ರಮ ರೂಪಿಸಿ, ತಾವು ಮತದಾರರನ್ನು ಸೆಳೆಯಲು ಏನೆಲ್ಲ ಮಾಡಬೇಕು, ಅದನ್ನು ಮಾಡುವ ಭರವಸೆಯಿತ್ತಿದ್ದಾರೆ. ರಾಜ್ಯವನ್ನು ಎ,ಬಿ ಮತ್ತು ಸಿ ಎಂದು ವರ್ಗೀಕರಿಸಿರುವ ಬಿಜೆಪಿ ವರಿಷ್ಠರಿಗೆ ಪಕ್ಷ ಸ್ವಯಂಬಲದ ಮೇಲೆ ಗೆಲ್ಲುವುದಿಲ್ಲ ಎಂಬ ಸೂಕ್ಷ್ಮ ಗೊತ್ತಾಗಿದೆ. ಕಾಂಗ್ರೆಸ್ ಪಕ್ಷಕ್ಕಿಂತ ಸ್ವಲ್ಪ ಮುಂದಿದ್ದರೂ ಸರ್ಕಾರ ರಚಿಸಲು ಕೆಲ ಸ್ಥಾನಗಳ ಕೊರತೆಯಾಗಲಿದೆ ಎಂದು ಸರ್ವೆ ವರದಿಗಳು ಹೇಳಿದ್ದು, ಅದೇ ಕಾಲಕ್ಕೆ ಗೆದ್ದೇ ಗೆಲ್ಲುವ ಹಾಲಿ ಶಾಸಕರಲ್ಲಿ ಕಾಂಗ್ರೆಸ್ ಪಕ್ಷದವರೇ ಹೆಚ್ಚು ಎಂಬುದು ಬಿಜೆಪಿ ವರಿಷ್ಠರಿಗೆ ಸಿಕ್ಕಿರುವ ಮಾಹಿತಿ. ಇದೇ ರೀತಿ ಬಿ ಗುಂಪಿನಲ್ಲಿ ಗೆಲ್ಲುವ ಸಾಧ್ಯತೆ ಹೆಚ್ಚಿರುವವರ ಸಂಖ್ಯೆ ಬಿಜೆಪಿಯಲ್ಲಿ ಹೆಚ್ಚಿದ್ದು,ಸಿ ಗುಂಪಿನ ಪ್ರಕಾರ, ಸೋಲುವವರ ಸಂಖ್ಯೆ ಕಾಂಗ್ರೆಸ್‌ನಲ್ಲಿ ಜಾಸ್ತಿ ಎಂಬುದು ಪಕ್ಷದ ವರಿಷ್ಠರಿಗೆ ತಲುಪಿರುವ ಮಾಹಿತಿ. ಹೀಗಾಗಿ ಎ ಗುಂಪಿನಲ್ಲಿರುವ ಗೆದ್ದೇ ಗೆಲ್ಲುವ ಕಾಂಗ್ರೆಸ್ ಶಾಸಕರ ಸಂಖ್ಯೆಯನ್ನು ಕಡಿಮೆ ಮಾಡಬೇಕು,ಬಿ ಗುಂಪಿನಲ್ಲಿ ಗೆಲ್ಲುವ ಸಾಧ್ಯತೆಗಳು ಹೆಚ್ಚಿರುವ ಬಿಜೆಪಿಗೆ ಮತ್ತಷ್ಟು ಬಲ ನೀಡಬೇಕು ಮತ್ತು ಸೋಲುವುದು ಖಚಿತ ಎಂಬುದನ್ನು ಸೂಚಿಸುವ ಸಿ ಗುಂಪಿನಲ್ಲಿ ಕಾಂಗ್ರೆಸ್ ಪಕ್ಷದವರೇ ಹೆಚ್ಚಿರುವಂತೆ ನೋಡಿಕೊಳ್ಳಬೇಕು ಎಂಬುದು ವರಿಷ್ಠರ ಯೋಚನೆ. ಮುಂದಿನ ಚುನಾವಣೆಯಲ್ಲಿ ನಾವು ಇಪ್ಪತ್ತೈದರಿಂದ ಮೂವತ್ತು ಸೀಟುಗಳನ್ನು ಹೆಚ್ಚುವರಿಯಾಗಿ ಗೆಲ್ಲಿಸಿಕೊಡುತ್ತೇವೆ.ಆದರೆ ನೀವು ಕನಿಷ್ಠ ತೊಂಭತ್ತು ಕ್ಷೇತ್ರಗಳಲ್ಲಿ ಗೆಲುವು ಗಳಿಸಲು ಸನ್ನದ್ಧರಾಗಿರಬೇಕು ಎಂದು ಬಿಜೆಪಿ ವರಿಷ್ಠರು ರಾಜ್ಯ ನಾಯಕರಿಗೆ ತಿಳಿಸಿದ್ದಾರೆ. ವರಿಷ್ಠರ ಸೂಚನೆ ದಕ್ಕಿರುವ ಹಿನ್ನೆಲೆಯಲ್ಲಿ ಪಕ್ಷದ ವರ್ಚಸ್ಸನ್ನು ಹೆಚ್ಚಿಸಲು ಈ ತಿಂಗಳ 28ರಿಂದ ರಾಜ್ಯಾದ್ಯಂತ ಸಾಧನಾ ಸಮಾವೇಶಗಳನ್ನು ನಡೆಸಲು ರಾಜ್ಯ ಬಿಜೆಪಿ ನಿರ್ಧರಿಸಿದೆ. 28 ರಂದು ದೊಡ್ಡಬಳ್ಳಾಪುರದಲ್ಲಿ ಮೊದಲ ಸಾಧನಾ ಸಮಾವೇಶ ನಡೆಯಲಿದ್ದು ತದ ನಂತರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಾಧನಾ ಸಮಾವೇಶ ನಡೆಸಲು ರಾಜ್ಯದ ನಾಯಕರು ನಿರ್ಧರಿಸಿದ್ದಾರೆ.

ಸಮಾವೇಶಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ,ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರು ಕಡ್ಡಾಯವಾಗಿ ಭಾಗವಹಿಸಲಿದ್ದಾರೆ. ಸಮಾವೇಶದ ಸಂದರ್ಭದಲ್ಲಿ ವಿವಿಧ ಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಬಿಜೆಪಿಗೆ ಸೆಳೆಯುವ ಕೆಲಸ ನಡೆಯುತ್ತಿದ್ದು, ಅದರೊಂದಿಗೆ ಸರ್ಕಾರಿ ಕಾರ್ಯಕ್ರಮಗಳ ಉದ್ಘಾಟನೆ ಕಾರ್ಯಕ್ರಮಗಳು ನಡೆಯಲಿವೆ.

ಮತ್ತೊಬ್ಬ ಶಂಕಿತ ಉಗ್ರನ ಬಂಧನ

ಲಷ್ಕರ್-ಇ-ತೊಯ್ಬಾ ಸಂಘಟನೆಗೆ ಸೇರಿದವನಾಗಿದ್ದ ಎನ್ನಲಾಗಿದ್ದು, ಕೇಂದ್ರೀಯ ತನಿಖಾ ತಂಡ ಹಾಗೂ ಪಶ್ಚಿಮ ಬಂಗಾಳ ಪೊಲೀಸರು ನೀಡಿದ್ದ ರಹಸ್ಯ ವರದಿ ಆಧಾರದ ಮೇರೆಗೆ ಜಾಗೃತರಾದ ಬೆಂಗಳೂರು ಪೊಲೀಸರು ಭಾನುವಾರ ರಾತ್ರಿ ಅಖ್ತರ್ ಹುಸೇನ್‌ನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಸಂಬಂಧ ಮಾಧ್ಯಮಗಳೊಂದಿಗೆ ಮಾತನಾಡಿದ ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್‌ರೆಡ್ಡಿ, ಮೂಲಭೂತವಾದಿಯಾಗಿದ್ದ ಅಖ್ತರ್ ಹುಸೇನ್ ಉಗ್ರ ಸಂಘಟನೆಗಳಿಗೆ ಸೇರಬೇಕು ಹಾಗೂ ಉಗ್ರಸಂಘಟನೆ ಗಳಿಗೆ ಸಹಾಯ ಮಾಡಬೇಕು ಎಂಬ ನಿಟ್ಟಿನಲ್ಲಿ ಆಸಕ್ತಿ ಹೊಂದಿದ್ದ. ಈ ಹಿನ್ನೆಲೆಯಲ್ಲಿ ಉಗ್ರರೊಂದಿಗೆ ಸಂಪರ್ಕ ಹೊಂದಲು ಪ್ರಯತ್ನಿಸಿ, ಅಲ್‌ಖೈದಾ ಸಂಘಟನೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದ ಈತ ಕೆಲವೇ ತಿಂಗಳಲ್ಲಿ ದೊಡ್ಡ ದುಷ್ಕೃತ್ಯ ಎಸಗಲು ತಯಾರಿ ನಡೆಸಿದ್ದ. ತೆಲಂಗಾಣ ಹಾಗೂ ಕೇಂದ್ರ ತನಿಖಾ ಸಂಸ್ಥೆಗಳಿಂದ ಬಂದ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸ ಲಾಗಿದೆ ಎಂದರು. ತಿಲಕ್‌ನಗರದ ಮನೆಯೊಂದರ ಮೂರನೇ ಮಹಡಿಯ ಕೊಠಡಿಯಲ್ಲಿ ಇತರೆ ನಾಲ್ವರೊಂದಿಗೆ ಅಖ್ತರ್ ಹುಸೇನ್ ವಾಸಿಸುತ್ತಿದ್ದ. ಈ ಐವರು ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ ಅಖ್ತರ್ ಹುಸೇನ್‌ನನ್ನು ಬಂಧಿಸಿದ ಪೊಲೀಸರು ಆತನೊಂದಿಗೆ ವಾಸವಿದ್ದ ಇತರೆ ನಾಲ್ವರನ್ನು ಕೂಡ ಸಿಸಿಬಿ ಟೆಕ್ನಿಕಲ್ ಸೆಲ್‌ನಲ್ಲಿ ವಿಚಾರಣೆಗೊಳಪಡಿಸಿದ್ದಾರೆ. ಬೆಂಗಳೂರಿನಲ್ಲೇ ಅಖ್ತರ್ ಹುಸೇನ್ ಸಹೋದರ ಆದಿಲ್ ಹುಸೇನ್ ಕೂಡ ವಾಸ ವಿದ್ದು, ಆತನನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ. ಬಂಧಿಸಲ್ಪಟ್ಟ ಅಖ್ತರ್ ಹುಸೇನ್‌ನನ್ನು ಪೊಲೀಸರು ಇಂದು ಎನ್‌ಐಎ ನ್ಯಾಯಾಲಯದಲ್ಲಿ ಹಾಜರುಪಡಿಸಿ ದರು. ಬಂಧನದ ವೇಳೆ ಅಖ್ತರ್ ಹುಸೇನ್ ಬಳಿ ಸಾಕಷ್ಟು ವಿದ್ಯುತ್ ಉಪಕರಣಗಳು ಪತ್ತೆಯಾಗಿವೆ. ಈತ ಅಸ್ಸಾಂ, ಚೆನ್ನೈ ಮುಂತಾದ ಕಡೆ ನಂಟು ಹೊಂದಿದ್ದು, ಹೆಚ್ಚಿನ ತನಿಖೆಯ ಅಗತ್ಯವಿದೆ ಎಂದು ಸಿಸಿಬಿ ಪೊಲೀಸರು ಮನವಿ ಮಾಡಿದ ಮೇರೆಗೆ ನ್ಯಾಯಾಧೀಶರು ಆತನನ್ನು 10 ದಿನಗಳ ಕಾಲ ಸಿಸಿಬಿ ವಶಕ್ಕೆ ನೀಡಿದ್ದಾರೆ. ಸಿಸಿಬಿ ಟೆಕ್ನಿಕಲ್ ಸೆಲ್‌ನಲ್ಲಿ ಅಖ್ತರ್ ಹುಸೇನ್‌ನನ್ನು ಪ್ರಾಥಮಿಕ ವಿಚಾರಣೆಗೊಳಪಡಿಸಿ, ಆತನ ಮೊಬೈಲ್ ಪರಿಶೀಲನೆ ನಡೆಸಿದ ವೇಳೆ ಈತ ತಮಿಳು ನಾಡಿನ ಜುಬಾ ಎಂಬಾತನ ಜೊತೆ ಸಂಪರ್ಕ ಹೊಂದಿರುವುದು ಬೆಳಕಿಗೆ ಬಂದಿದೆ. ಅಖ್ತರ್ ಹುಸೇನ್ ಮತ್ತು ಜುಬಾ ಉಗ್ರ ಸಂಘಟನೆಗಳ ಸಂಪರ್ಕದಲ್ಲಿದ್ದಾರೆ ಎಂಬುದಕ್ಕೆ ಪುರಾವೆ ದೊರೆತ ಹಿನ್ನೆಲೆಯಲ್ಲಿ ಕಳೆದ ರಾತ್ರಿಯೇ ಸಿಸಿಬಿ ಡಿಸಿಪಿ ಡಾ. ಹೆಚ್.ಡಿ. ಶರಣಪ್ಪ ನೇತೃತ್ವದ 4 ತಂಡಗಳು ಕಾರ್ಯಾಚರಣೆಗಿಳಿದಿವೆ. ಈ ತಂಡಕ್ಕೆ ಕೇಂದ್ರೀಯ ತನಿಖಾ ತಂಡವೂ ಕೂಡ ಕೈ ಜೋಡಿಸಿತ್ತು. ಇಂದು ಸಂಜೆ ವೇಳೆಗೆ ಜುಬಾನನ್ನು ಪತ್ತೆ ಹಚ್ಚಿದ ವಿಶೇಷ ತಂಡ ಆತನನ್ನು ಬಂಧಿಸಿ, ಬೆಂಗಳೂರಿಗೆ ಕರೆತರುತ್ತಿದೆ.

ರಘು ಕೌಟಿಲ್ಯ ಮೈಲ್ಯಾಕ್ ಅಧ್ಯಕ್ಷ

ಮಾಡಿ ಆದೇಶ ಹೊರಡಿಸಲಾಗಿದೆ. ಅದೇ ರೀತಿ ಬೆಂಗಳೂರಿನ ಮೆ.ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಎಂಸಿ ಅಂಡ್ ಎ) ಅಧ್ಯಕ್ಷರನ್ನಾಗಿ ಗದಗದ ಎಂ.ಎಸ್.ಕರೀಗೌಡ್ರ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ ಧರ್ಮಣ್ಣ ದೊಡ್ಡಮನಿ, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ಗುತ್ತಿಗನೂರು ವಿರುಪಾಕ್ಷಗೌಡ ಅವರನ್ನು ನೇಮಿಸಿ, ಸರ್ಕಾರ ಆದೇಶ ಹೊರಡಿಸಿದೆ.

ಅಲ್‌ಬದರ್ ವೃತ್ತ ಅರಬ್ ಮಾದರಿ ಅಭಿವೃದ್ಧಿಗೆ ಚಾಲನೆ

● ಎನ್.ಆರ್.ಕ್ಷೇತ್ರಕ್ಕೆ ವಾರದಲ್ಲಿ ಮತ್ತಷ್ಟು ಅನುದಾನ ತರುವುದಾಗಿ ಶಾಸಕ ತನ್ವೀರ್ ಭರವಸೆ ● ಆಕರ್ಷಕ ವೃತ್ತ ನಿರ್ಮಾಣದ ಕನಸು ನನಸಾಗಿಸುವ ವಿಶ್ವಾಸ: ಅಯೂಬ್

ಮೈಸೂರು,ಜು.25(ಎಂಟಿವೈ)- ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅಗತ್ಯವಾದ ಅನುದಾನವನ್ನು ಒಂದು ವಾರದೊಳಗೆ ಮಂಜೂರು ಮಾಡಿಸಿಕೊಂಡು ಬರಲು ಪಣತೊಟ್ಟಿದ್ದು, ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದ್ದೇನೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.

ಮೈಸೂರಿನ ಎನ್.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಜೀವ್ ನಗರದ ಎರಡನೇ ಹಂತದಲ್ಲಿ ಪಾಲಿಕೆಯ 13ನೇ ವಾರ್ಡ್ ವ್ಯಾಪ್ತಿಗೆ ಒಳಪಡುವ ಅಲ್‌ಬದರ್ ವೃತ್ತವನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ಎನ್.ಆರ್.ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಇನ್ನಷ್ಟು ಅಭಿವೃದ್ಧಿ ಯೋಜನೆಗಳ ಕೈಗೊಳ್ಳುವ ಸಲುವಾಗಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ಅಗತ್ಯವುಳ್ಳ ಅನುದಾನ ನೀಡುವುದಾಗಿ ತಿಳಿಸಿದ್ದಾರೆ. ಅಲ್ಲದೇ, ಎನ್.ಆರ್.ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡುವಂತೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೂ ಮುಖ್ಯಮಂತ್ರಿಗೆ ತಿಳಿಸಿದ್ದಾರೆ. ವಾರದೊಳಗೆ ಕ್ಷೇತ್ರದ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬೇಕಾದ ಅನುದಾನ ಬಿಡುಗಡೆ ಮಾಡಿಸಿಕೊಂಡು ಬರುವುದಾಗಿ ತಿಳಿಸಿದರು.

ಅಲ್‌ಬದರ್ ವೃತ್ತ ಸೇರಿದಂತೆ ಕೆಲವು ಭಾಗ ಈ ಹಿಂದೆ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರಿತ್ತು. ಕ್ಷೇತ್ರ ಪುನರ್ ವಿಂಗಡಣೆ ಬಳಿಕ 2008ರ ನಂತರ ಕೆಲವು ಬಡಾವಣೆ ಎನ್.ಆರ್.ಕ್ಷೇತ್ರಕ್ಕೆ ಸೇರಿಸಲಾಗಿದೆ. ಅಂದಿನಿಂದಲೂ ಒಂದೊಂದಾಗಿ ಅಭಿವೃದ್ಧಿ ಮಾಡುತ್ತಲೇ ಬಂದಿದ್ದೇವೆ. ಹಿಂದೆ ಎನ್.ಆರ್.ಭಾಗದಲ್ಲಿ ಮಳೆ ಬಂದಾಗ ಚರಂಡಿ ನೀರು ತುಂಬಿ ಹರಿದು ತಗ್ಗು ಪ್ರದೇಶದಲ್ಲಿದ್ದ ಮನೆಗಳಿಗೆ ನುಗ್ಗುತ್ತಿತ್ತು. ಈಗ ಅಂತಹ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಬಹುತೇಕ ರಸ್ತೆಗಳು ವಿಶಾಲವಾಗಿದ್ದು, ಬೀದಿದೀಪ ಅಳವಡಿಸಲಾಗಿದೆ. ಕ್ಷೇತ್ರದ ಜನರಿಗೆ ಮೂಲಭೂತ ಸೌಲಭ್ಯ ಒದಗಿಸುವುದಕ್ಕಾಗಿ ಶ್ರಮಿಸುತ್ತಿದ್ದೇನೆ ಎಂದರು.



ಎನ್.ಆರ್.ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 680 ಉದ್ಯಾನಗಳಿದ್ದು, ನಿರ್ವಹಣಾ ವೆಚ್ಚ ಭರಿಸುವುದು ಹೊಳೆಯಲ್ಲಿ ಹುಣಸೆಹಣ್ಣನ್ನು ತೇಯ್ದಂತಾಗುತ್ತದೆ. ಕಳೆದ ಸಾಲಿನಲ್ಲಿ ವಾರ್ಡ್ ವಿಂಗಡನೆ ಸಂದರ್ಭದಲ್ಲಿ 34, 35, 36, 39ನೇ ವಾರ್ಡ್‌ಗಳು ಪಾಲಿಕೆ ವ್ಯಾಪ್ತಿಯಲ್ಲಿಯೇ ದೊಡ್ಡ ವಾರ್ಡ್‌ಗಳಾಗಿವೆ. ಈ ವ್ಯಾಪ್ತಿಯಲ್ಲಿ ರೆವಿನ್ಯೂ, ಖಾಸಗಿ, ಮುಡಾ, ವಸತಿ ಇಲಾಖೆ, ಸ್ಲಂ ಬೋರ್ಡ್‌ನಿಂದ ನಿರ್ಮಿಸಿರುವ ಮನೆಗಳಿವೆ. ಇಲಾಖೆಗಳ ಸಮನ್ವಯದ ಕೊರತೆಯಿಂದ ಪಾಲಿಕೆ, ಮುಡಾ, ಸ್ಲಂ ಬೋರ್ಡ್‌ನಲ್ಲೇ ಅಭಿವೃದ್ಧಿ ಕಾರ್ಯದ ವಿಚಾರದಲ್ಲಿ ಸಹಮತವಿಲ್ಲ. ಇದರಿಂದ ಕೆಲವು ಭಾಗ ಅಭಿವೃದ್ಧಿ ಕಾಮಗಾರಿಯಿಂದ ವಂಚಿತವಾಗಿದೆ ಎಂದು ಕಿಡಿಕಾರಿದರು.

ಮೈಸೂರು ನಗರದ ಹೃದಯಭಾಗದಲ್ಲಿ ಅರಸು ರಸ್ತೆ ನಿರ್ಮಾಣ ಮಾಡಲಾಗಿತ್ತು. ಆನಂತರದಲ್ಲಿ ಒಂದೊಂದು ಕ್ಷೇತ್ರದಲ್ಲೂ ಒಂದೊಂದು ರಸ್ತೆಯನ್ನು ಅರಸು ರಸ್ತೆ ಮಾದರಿಯಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಿದ್ದರೆ ವಾಣಿಜ್ಯ ಅಭಿವೃದ್ಧಿ ಆಗುತ್ತಿತ್ತು. ಸಾರ್ವಜನಿಕರಿಗೂ ಉಪಯುಕ್ತವಾಗುತ್ತಿತ್ತು. ಎನ್.ಆರ್.ಕ್ಷೇತ್ರದಲ್ಲಿ ಒಂದು ಮಾರುಕಟ್ಟೆ ನಿರ್ಮಾಣವಾದರೆ ಈ ಭಾಗದ ಜನರಿಗೆ ನೆರವಾಗುತ್ತದೆ ಎಂದರು.

ಅರಬ್ ಶೈಲಿಯ, ಆಕರ್ಷಣೀಯ ವೃತ್ತ ನಿರ್ಮಾಣ: ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, ನಾನು ಪ್ರತಿನಿಧಿಸುವ ವಾರ್ಡ್‌ನಲ್ಲಿ 8 ವರ್ಷದ ಹಿಂದೆಯೇ ಈ ವೃತ್ತದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿ, ಅನೇಕ ಮುಖಂಡರೊಂದಿಗೆ ಚರ್ಚಿಸಿದ್ದೇನೆ. ಈ ಹಿಂದೆ ಪಾಲಿಕೆಯ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಹಲವರಿಗೆ ಮನವಿ ಮಾಡಿದ್ದೇನೆ. ಈ ವೃತ್ತದ ಅಭಿವೃದ್ಧಿ ಯೋಜನೆ ಎಲ್ಲರಿಗೂ ಇಷ್ಟ ಆಗಿದೆ. ಇದು ಅರಬ್ ಶೈಲಿಯಲ್ಲಿದ್ದು, ವೃತ್ತದ ಮಧ್ಯಭಾಗದಲ್ಲಿ ಎತ್ತರದ ಹೂಜಿ ಇರುತ್ತದೆ. ಇದಕ್ಕೆ ದೀಪಾಲಂಕಾರ ಮಾಡಲಾಗುತ್ತದೆ ಎಂದರು.

ಈ ಯೋಜನೆಗೆ ಪಾಲಿಕೆಯಲ್ಲಿ ಅಗತ್ಯ ಹಣದ ಕೊರತೆಯಿಂದ ಮುಂದೂಡುತ್ತಲೇ ಬಂದೆವು. ನನ್ನ ವಾರ್ಡ್‌ಗೆ ನೀಡಿದ್ದ ಎಲ್ಲಾ ಗ್ರಾಂಟ್‌ಗಳಿಂದಲೂ ಹಣ ಕ್ರೋಢೀಕರಿಸಿ 2.50 ಕೋಟಿ ರೂ.ವೆಚ್ಚದಲ್ಲಿ ಈ ವೃತ್ತ ಅಭಿವೃದ್ಧಿಗೆ ಭೂಮಿ ಪೂಜೆ ಮಾಡಿದ್ದೇವೆ. ಈ ವೃತ್ತದಲ್ಲಿ 5 ರಸ್ತೆ ಸಂದಿಸುವುದರಿಂದ ಅಲ್ ಬದರ್ ವೃತ್ತ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ. ಇದನ್ನು ಪ್ರಮುಖ ವಾಣಿಜ್ಯ ಪ್ರದೇಶವನ್ನಾಗಿಸುವ ಚಿಂತನೆಯೂ ಇದೆ. ಈ ಕಾರಣದಿಂದಾಗಿ ವೃತ್ತವನ್ನು ಮಾತ್ರವಲ್ಲ ಸಂಪರ್ಕ ಕಲ್ಪಿಸುವ ರಸ್ತೆಗಳನ್ನೂ ಅಭಿವೃದ್ಧಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಅಭಿವೃದ್ಧಿ ವಿಚಾರದಲ್ಲಿ ಎನ್.ಆರ್.ಕ್ಷೇತ್ರ ಕಡೆಗಣನೆ ಆಗಿದೆ. ಇದಕ್ಕೆ ರಾಜಕೀಯ ಕಾರಣವೂ ಇರಬಹುದು. ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಬಾರದು. ಈ ಭಾಗದಲ್ಲಿ ಒಂದು ಆಟದ ಮೈದಾನದ ಅವಶ್ಯಕತೆಯೂ ಇದೆ. ಅದನ್ನು ಮಂಜೂರು ಮಾಡಿಕೊಡುವಂತೆ ಕೋರಿದರು.

ಕಾಯಕ್ರಮದಲ್ಲಿ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಉಪ ಮಹಾಪೌರ ಅನ್ವರ್ ಬೇಗ್(ಅಫ್ತಾಬ್), ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಮಾಜಿ ಮೇಯರ್‌ಗಳಾದ ಆರಿಫ್ ಹುಸೇನ್, ಪುಷ್ಪಲತಾ ಜಗನ್ನಾಥ್, ಪಾಲಿಕೆ ಸದಸ್ಯರಾದ ಅಸ್ರತ್ ಉಲ್ಲಾ, ಸತ್ಯರಾಜ್, ಬಷೀರ್, ಸವೂದ್ ಖಾನ್, ಸಮೀವುಲ್ಲಾ, ಶೌಕತ್ ಪಾಷ, ಮಾಜಿ ಸದಸ್ಯ ಫೈರೋಜ್ ಖಾನ್ ಇತರರು ಉಪಸ್ಥಿತರಿದ್ದರು.

ಅಭಿವೃದ್ಧಿಗೆ ಒತ್ತು ನೀಡಿದ್ದೇನೆ

“ 8 ವರ್ಷದ ಹಿಂದಿನಿಂದ ನೆನೆಗುದಿಗೆ ಬಿದ್ದಿದ್ದ ಕಾಮಗಾರಿಗೆ ನನ್ನ ಅವಧಿಯಲ್ಲಿ ಗುದ್ದಲಿ ಪೂಜೆ ಆಗಿದೆ. ಪ್ರಧಾನಿ ಮೋದಿಯವರು ಉತ್ತಮವಾದ ವೃತ್ತ ನಿರ್ಮಿಸುವಂತೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ 6 ಸರ್ಕಲ್ ಅಭಿವೃದ್ಧಿ ಮಾಡಲು 15 ಕೋಟಿ ರೂ. ಬೇಕಾಗಿದೆ ಎಂದು ಮನವಿ ಮಾಡಿದ್ದೇನೆ. ಈ ವೃತ್ತವು ಮೈಸೂರು ನಗರಕ್ಕೆ ಕೀರ್ತಿ ತರುವ ವೃತ್ತವಾಗಿ ಹೊರಹೊಮ್ಮಲಿದೆ ಎಂಬ ಭಾವನೆ ನಮ್ಮದಾಗಿದೆ. ನನ್ನ ಅವಧಿಯಲ್ಲಿ ಸಮಗ್ರ ಮೈಸೂರು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇನೆ. ನಾನು ಪಕ್ಷ ಭೇದ ಮಾಡಿಲ್ಲ. ಅಯೂಬ್ ಖಾನ್ ಅಭಿವೃದ್ಧಿಯ ಹಂಬಲ ಹೊಂದಿದ್ದಾರೆ. ಅದಕ್ಕಾಗಿ ಅನುದಾನ ಕೇಳುತ್ತಿದ್ದಾರೆ. ಪಾಲಿಕೆಯಿಂದ ಸಾಧ್ಯವಾದಷ್ಟು ಪ್ರಮಾಣದಲ್ಲಿ ಅನುದಾನ ನೀಡಲಾಗುವುದು.

ಸುನಂದಾ ಪಾಲನೇತ್ರ,
ಪ್ರಭಾರ ಮೇಯರ್

ಪಾಲಿಕೆ ವಲಯ-3ರ ಆಡಳಿತ ಕಚೇರಿ ಕಟ್ಟಡ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡ ಗುದ್ದಲಿ ಪೂಜೆ

ಶಾರದಾದೇವಿನಗರದಲ್ಲಿ 1.99 ಕೋಟಿ ರೂ. ಅಂದಾಜಿನಲ್ಲಿ ನೆಲ ಅಂತಸ್ತಿನ ಕಟ್ಟಡ ಆರು ತಿಂಗಳಲ್ಲಿ ಪೂರ್ಣಗೊಳ್ಳುವ ಭರವಸೆ



ಮೈಸೂರು, ಜು.25(ಆರ್‌ಕೆಬಿ)- ಮೈಸೂರಿನ ಶಾರದಾದೇವಿನಗರದಲ್ಲಿ 1.99 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗುವ ಮೈಸೂರು ನಗರಪಾಲಿಕೆ ವಲಯ-3 ಆಡಳಿತ ಕಚೇರಿಯ ನೆಲ ಅಂತಸ್ತಿನ ಕಟ್ಟಡ ಕಾಮಗಾರಿಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸೋಮವಾರ ಗುದ್ದಲಿಪೂಜೆ ನೆರವೇರಿಸಿದರು.

ಶಾರದಾದೇವಿನಗರದ ತಿಬ್ಬಾದೇವಿ ವೃತ್ತದ ಬಳಿ ನಿರ್ಮಾಣಗೊಳ್ಳಲಿರುವ ಈ ಕಟ್ಟಡವನ್ನು ನೆಲ ಅಂತಸ್ತಿನಲ್ಲಿ 1.99 ಕೋಟಿ ಅಂದಾಜಿನಲ್ಲಿ ನಿರ್ಮಿಸಲಾಗುತ್ತಿದೆ. ಅಧಿಕಾರಿಗಳ ಪ್ರಕಾರ ಇನ್ನೂ 2 ಕೋಟಿ ರೂ. ಅನುದಾನ ಬಳಸಿಕೊಳ್ಳಲು ಅವಕಾಶವಿದೆ. ಈ ಸುಂದರ ಕಟ್ಟಡ ಆರು ತಿಂಗಳೊಳಗೆ ಪೂರ್ಣಗೊಳಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ ಎಂದರು.

ಮಹಾನಗರಪಾಲಿಕೆಯ ವಲಯ-3, 5 ಮತ್ತು 8ರಲ್ಲಿ ಆಡಳಿತ ಕಚೇರಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ವಲಯ-3 ನನ್ನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರಲಿದೆ. ವಲಯ-3ರ ಕಟ್ಟಡ ಒಟ್ಟು 8 ವಾರ್ಡ್‌ಗಳನ್ನು ಒಳಗೊಂಡಿದೆ ಎಂದು ಹೇಳಿದರು.

ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಹಂಗಾಮಿ ಉಪ ಮೇಯರ್ ಅನ್ವರ್‌ಬೇಗ್, ಪಾಲಿಕೆ ಸದಸ್ಯರಾದ ನಿರ್ಮಲಾ ಹರೀಶ್, ಸವಿತಾ ಸುರೇಶ್, ಲಕ್ಷ್ಮೀ ಮಾದೇಗೌಡ, ಗೋಪಿ, ಶರತ್, ಶಿವಕುಮಾರ್, ಮಾಜಿ ಕಾರ್ಪೊರೇಟರ್‌ಗಳಾದ ಕೆ.ಎಂ.ಶಂಕರ್, ಜಗದೀಶ್, ಪಾಲಿಕೆ ಸಹಾಯಕ ಆಯುಕ್ತ ಬಿ.ಎಂ.ಪ್ರಕಾಶ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಮುಖಂಡರಾದ ಹಿರಿಯಣ್ಣ ಬಸವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಸಾಲು ಮರದ ತಿಮ್ಮಕ್ಕರಿಗೆ ಸನ್ಮಾನ

ಮೈಸೂರು, ಜು.25(ಆರ್‌ಕೆಬಿ)- ಪರಿಸರ ರಾಯಭಾರಿ ಗೌರವ ಪಡೆದಿರುವ ವೃಕ್ಷ ಮಾತೆ ಖ್ಯಾತಿಯ ಸಾಲು ಮರದ ತಿಮ್ಮಕ್ಕ ಅವರಿಗೆ ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಕಾರ್ಯಕರ್ತರು ಸೋಮವಾರ ಅಭಿನಂದಿಸಿದರು.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಸರ್ಕಾರಿ ಭವನದಲ್ಲಿ ಅವರನ್ನು ಸನ್ಮಾನಿಸಿ, ಗೌರವಿಸಿದ ಅವರು, ಪರಿಸರಕ್ಕೆ ಅಪಾರ ಕೊಡುಗೆ ನೀಡಿರುವ ಅವರನ್ನು ಅತ್ಯಂತ ಗೌರವದಿಂದ ಶಾಲು ಹೊದಿಸಿ ಅಭಿನಂದಿಸಿದರು. ನಿಸ್ವಾರ್ಥ ಸೇವೆಯ ಮೂಲಕ ತಮ್ಮ ಬದುಕನ್ನೇ ಪರಿಸರಕ್ಕಾಗಿ ಮುಡಿಪಿಟ್ಟ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಲಭಿಸಿದ ಪ್ರಶಸ್ತಿಗಳು ಹಾಗೂ ಅವರ ಸಾಧನೆ ಬಿಂಬಿಸಲು ವಸ್ತು ಸಂಗ್ರಹಾಲಯ ನಿರ್ಮಿಸಲು ಸರ್ಕಾರ ಮುಂದಾಗಬೇಕು ಎಂದು ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್ ಒತ್ತಾಯಿಸಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಬಿಜೆಪಿ ಮಾಧ್ಯಮ ಪ್ರಮುಖ ಕೇಬಲ್ ಮಹೇಶ್, ಅಪೂರ್ವ ಸುರೇಶ್, ಪರಿಸರ ಸ್ನೇಹಿ ತಂಡದ ಅಧ್ಯಕ್ಷ ಲೋಹಿತ್, ಶ್ರೀಕಾಂತ್ ಕಶ್ಯಪ್, ಶಿವು, ಮಹದೇವ್ ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಅಪರ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಜು.25- ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದನೇ ಹಾಗೂ ಎರಡನೇ ಅಪರ ಜಿಲ್ಲಾ ಸರ್ಕಾರಿ ವಕೀಲರಾಗಿ ಗರಿಷ್ಠ ಅವಧಿ ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ ವಕೀಲ ವೃತ್ತಿ ಭರ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಆಸಕ್ತ ಅಭ್ಯರ್ಥಿಗಳು 10 ವರ್ಷಗಳ ಕಾಲ ವಕೀಲ ವೃತ್ತಿಯನ್ನು ಪೂರೈಸಿರಬೇಕು. ಅರ್ಜಿ ಸಲ್ಲಿಸುವವರು ತಮ್ಮ ಹೆಸರು, ವಿಳಾಸ, ವಿದ್ಯಾರ್ಹತೆ, ವಕೀಲ ವೃತ್ತಿಯಲ್ಲಿನ ಅನುಭವ, ಇತ್ಯಾದಿ ವಿವರಗಳನ್ನು ನಮೂದಿಸಿದ ಸ್ವಯಂ ವಿವರಣೆಯ ಮಾಹಿತಿಯೊಂದಿಗೆ ಬಯೋಡೇಟಾ, ವಿದ್ಯಾರ್ಹತೆ, ವಕೀಲ ವೃತ್ತಿಯಲ್ಲಿ ರಾಜ್ಯ ಬಾರ್ ಕೌನ್ಸಿಲ್ ನೋಂದಣಿ ಮತ್ತು ವಕೀಲರು ವೃತ್ತಿಯಲ್ಲಿ ಹೊಂದಿರುವ ಅನುಭವದ ಬಗ್ಗೆ ಸ್ಥಳೀಯ ವಕೀಲರ ಸಂಘದ ದೃಢೀಕರಣ ಪತ್ರ ಇತ್ಯಾದಿ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು 2022ರ ಆಗಸ್ಟ್ 20 ರ ಒಳಗಾಗಿ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಕ್ರೀಡಾಕೂಟಕ್ಕೆ ತೆರೆ

ಮೈಸೂರು, ಜು.25(ಎಂಕೆ)- ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವಾರ್ಷಿಕ ಕ್ರೀಡಾಕೂಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಧ್ಯಕ್ಷರ ಇಲೆವೆನ್(ಸುರೇಶ್ ನಾಯಕ) ತಂಡ ಹಾಗೂ ಷಟಲ್ ಬಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶಿವಮೂರ್ತಿ ಜಪ್ಪಿಮಠ್ ಮತ್ತು ಎಸ್.ಕೆ. ಚಂದ್ರಶೇಖರ್ ತಂಡ ಚಾಂಪಿಯನ್ ಆಯಿತು.

ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ನಡೆದ ಕ್ರೀಡಾಕೂಟ ಅಂತಿಮ ದಿನ ನಡೆದ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಖಜಾಂಚಿ ಇಲೆವನ್ (ಶಿವಮೂರ್ತಿ ಜುಪ್ಪಿಮಠ್ ನಾಯಕ) ತಂಡದ ವಿರುದ್ಧ ಅಧ್ಯಕ್ಷರ ಇಲೆವೆನ್ ತಂಡ ಜಯಗಳಿಸಿದರೆ, ಖಜಾಂಚಿ ಇಲೆವೆನ್ ತಂಡ ರನ್ನರ್ ಅಪ್ ಆಯಿತು. ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಅಧ್ಯಕ್ಷರ ಇಲೆವೆನ್ ತಂಡದ ಆಟಗಾರ ಜೀವನ್ ಸರಣಿ ಶ್ರೇಷ್ಠ ಹಾಗೂ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ರವಿಕುಮಾರ್ ಮ್ಯಾನ್ ಆಫ್ ದಿ ಬೌಲರ್ ಪ್ರಶಸ್ತಿ ಪಡೆದರು.



ಬಾಡ್ಮಿಂಟನ್: ಷಟಲ್ ಬ್ಯಾಡ್ಮಿಂಟನ್ ಫೈನಲ್ ಪಂದ್ಯದಲ್ಲಿ ಶಿವಮೂರ್ತಿ ಜಪ್ಪಿಮಠ್ ಮತ್ತು ಎಸ್.ಕೆ. ಚಂದ್ರಶೇಖರ್ ತಂಡ ಗೆಲುವು ಸಾಧಿಸಿದರೆ, ಮಧುಸೂದನ್ ಮತ್ತು ದಿನೇಶ್ ತಂಡ ದ್ವಿತೀಯ ಸ್ಥಾನ ಪಡೆದರು.

ಕ್ರೀಡಾ ಚಟುವಟಿಕೆ ಮುಖ್ಯ: ವಿಜೇತರಿಗೆ ಬಹುಮಾನ ವಿತರಣೆ ಮಾಡಿದ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಮಾತನಾಡಿ, ಒತ್ತಡ ನಿವಾರಣೆಗೆ ಕ್ರೀಡೆ ಸಹಕಾರಿಯಾಗಿದ್ದು, ಪ್ರತಿಯೊಬ್ಬರು ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಎರಡು ದಿನಗಳ ಪತ್ರಕರ್ತರ ಕ್ರೀಡಾಕೂಟ ಯಶಸ್ವಿಯಾಗಿದ್ದು, ಪತ್ರಕರ್ತರು ಹಾಗೂ ಅವರ ಕುಟುಂಬಸ್ಥರು ಖುಷಿಯಾಗಿ ಒಬ್ಬರಿಗೊಬ್ಬರು ಹುರಿದುಂಬಿಸಿಕೊಂಡು ಆಟವಾಡಿದ್ದೀರಿ. ಇದರಿಂದ ನಿಮ್ಮ ಮನಸ್ಸು ಹಗುರವಾಗುತ್ತದೆ. ಎಲ್ಲಾ ಸಮಸ್ಯೆ, ಕೆಲಸದ ಒತ್ತಡವನ್ನು ಮರೆತು ಇಲ್ಲಿ ಬಂದು ಕೆಲ ಕಾಲ ಕಳೆದಾಗ ಆರೋಗ್ಯ ಕೂಡ ಚೆನ್ನಾಗಿರುತ್ತದೆ ಎಂದು ಹೇಳಿದರು.


ಎಡಿಸಿ ಚಾಲನೆ: ಇದಕ್ಕೂ ಮುನ್ನ ಕ್ರಿಕೆಟ್ ಪಂದ್ಯಾವಳಿಯನ್ನು ಅಪರ ಜಿಲ್ಲಾಧಿಕಾರಿ ಮಂಜುನಾಥ ಸ್ವಾಮಿ ಬ್ಯಾಟ್ ಬೀಸುವ ಮೂಲಕ ಉದ್ಘಾಟಿಸಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ನಗರ ಕಾರ್ಯದರ್ಶಿ ಪಿ.ರಂಗಸ್ವಾಮಿ, ಖಜಾಂಚಿ ನಾಗೇಶ್ ಪಾಣತ್ತಲೆ, ರಾಜ್ಯಸಮಿತಿ ಸದಸ್ಯ ರಾಘವೇಂದ್ರ, ಹಿರಿಯ ಪತ್ರಕರ್ತ ಬಿ.ಎಸ್.ಪ್ರಭುರಾಜನ್ ಮತ್ತಿತರಿದ್ದರು.

ಕಾರ್ಗಿಲ್ ವಿಜಯೋತ್ಸವ ಸಾರ್ಥಕ ಸ್ಮರಣೆ: ನಿವೃತ್ತ ಯೋಧರಿಗೆ ಸನ್ಮಾನ

ಮೈಸೂರು,ಜು.25(ಎಂಟಿವೈ)- ಕಾರ್ಗಿಲ್ ವಿಜಯೋತ್ಸವದ ಹಿನ್ನೆಲೆಯಲ್ಲಿ ಮೈಸೂರಲ್ಲಿ 6 ಮಂದಿ ನಿವೃತ್ತ ಯೋಧರನ್ನು ಸನ್ಮಾನಿಸುವ ಮೂಲಕ ಭಾರತೀಯ ಸೇನೆಗೆ ಗೌರವ ಸಮರ್ಪಿಸಲಾಯಿತು.

ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ(ಮೆಟ್ರೋಪೋಲ್) ಯುವ ಭಾರತ ಸಂಘಟನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಲ್. ನಾಗೇಂದ್ರ, ಭಾರತೀಯ ಸೇನೆಯಲ್ಲಿ 20 ವರ್ಷ ಸೇವೆ ಸಲ್ಲಿಸಿ, ನಿವೃತ್ತರಾಗಿರುವ ಎಂ.ವಿ. ಕುಮಾರ್, ವಿರುಪಾಕ್ಷಪ್ಪ, ಕೆ.ವಿ.ಮಹೇಶ್, ಕೆ.ಪಿ.ಮಹೇಶ್, ಬಿ.ಕಾಂತರಾಜು, ಸಿ.ಮಂಜು ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕಾರ್ಗಿಲ್ ಯುದ್ಧದ ವೇಳೆ ಇಡೀ ಪ್ರಪಂಚವೇ ಇತ್ತ ನೋಡಿತ್ತು. ಅಂದು ಕಾಶ್ಮೀರದಿಂದ ಭಾರತಕ್ಕೆ ಸಂಪರ್ಕ ಕಲ್ಪಿಸುವ ಹೈವೇಯನ್ನು ತನ್ನ ಮುಷ್ಟಿಯಲ್ಲಿ ಇಟ್ಟುಕೊಳ್ಳುವ ಭರದಲ್ಲಿ ಪಾಕಿಸ್ತಾನದ ಯೋಧರು ಮತ್ತು ಉಗ್ರಗಾಮಿಗಳು ಭಾರತದ ಸಿಯಾಚಿನ್ ಗಡಿರೇಖೆಗೆ ನುಗ್ಗಿ ಭಾರತದ ಹಲವು ಪ್ರದೇಶವನ್ನು ಆಕ್ರಮಿಸಿಕೊಂಡಿದ್ದರು. ಅಂದು ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ಆದೇಶದ ಮೇರೆಗೆ ಭಾರತೀಯ ಸೇನೆ ಕೆಚ್ಚೆದೆಯಿಂದ ಹೋರಾಡಿ, ಪರ್ವತ ಪ್ರದೇಶದಲ್ಲಿ ಪಾಕಿಸ್ತಾನದ ಉಗ್ರಗಾಮಿಗಳು ಅಡಗಿದ್ದರೂ ಬಿಡದೆ ದಿಟ್ಟ ಹೋರಾಟ ಮಾಡಿ ಸರಿಯಾದ ಪಾಠ ಕಲಿಸಿದ್ದರು. ಈ ಯುದ್ಧದಲ್ಲಿ ಮಡಿದ ವೀರ ಯೋಧರನ್ನು ಸ್ಮರಿಸುವುದು ಭಾರತೀಯರ ಕರ್ತವ್ಯವಾಗಿದೆ. ಭಾರತೀಯ ಯೋಧರ ಸ್ಮರಣಾರ್ಥ ಚೀನಾ ವಸ್ತುಗಳ ಬಳಕೆ ನಿಷೇಧಿಸುವ ಅಗತ್ಯವಿದೆ ಎಂದರು.



ಕಾಮಾಕ್ಷಿ ಆಸ್ಪತ್ರೆಯ ಮುಖ್ಯಸ್ಥರಾದ ಮಹೇಶ ಶೆಣೈ ಮಾತನಾಡಿ, ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಆ.13ರಿಂದ 15ರವರೆಗೆ ಪ್ರತಿಯೊಬ್ಬರೂ ತಮ್ಮ ಮನೆ ಮೇಲೆ ರಾಷ್ಟ್ರಧ್ವಜ ಹಾರಿಸಬೇಕು. ಹರ್ ಘರ್ ತಿರಂಗಾ ಧ್ಯೇಯವಾಕ್ಯದೊಂದಿಗೆ ಎಲ್ಲರೂ ರಾಷ್ಟ್ರಧ್ವಜ ಪ್ರದರ್ಶಿಸುವ ಮೂಲಕ ದೇಶಪ್ರೇಮ ಮೆರೆಯಬೇಕು. ಯುವ ಪೀಳಿಗೆಗೆ ಸ್ವಾತಂತ್ರ್ಯ ಸಂಗ್ರಾಮ ಹೋರಾಟದ ಕತೆ ತಿಳಿಸುವ ಕಾರ್ಯವಾಗಬೇಕು. ಅಮೃತ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಎಲ್ಲರೂ 'ಹರ್ ಘರ ತಿರಂಗಾ' ಅಭಿಯಾನ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಬಿಜೆಪಿ ಫಲಾನುಭವಿ ಪ್ರಕೋಷ್ಟ ಸಂಚಾಲಕ ಪರಮೇಶ್ ಗೌಡ, ಪಾಲಿಕೆ ಸದಸ್ಯ ಜಗದೀಶ್, ಯುವ ಭಾರತ ಸಂಘಟನೆಯ ಸಂಚಾಲಕ ಆನಂದ್, ಚಾಮರಾಜ ಯುವಮೋರ್ಚಾ ಅಧ್ಯಕ್ಷ ಸಚಿನ್, ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಲೋಹಿತ್, ಅಜಯ್ ಶಾಸ್ತ್ರಿ, ಸಂದೀಪ್, ಪಾಲಿಕೆ ಮಾಜಿ ಸದಸ್ಯ ರಮೇಶ್, ಅಪೂರ್ವ ಸುರೇಶ್, ಪಂಕಜ್, ಶರತ್, ಶಿವು, ಸುಚೀಂದ್ರ, ಚಕ್ರಪಾಣಿ, ರಂಗನಾಥ್, ಮಹದೇವಪ್ರಸಾದ್, ರಾಜು, ಸಿದ್ದೇಶ್ ಹಾಗೂ ಇನ್ನಿತರರು.


ವ್ಯಕ್ತಿಯೋರ್ವ ವೈದ್ಯರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದನ್ನು ಖಂಡಿಸಿ

ಕಪ್ಪುಪಟ್ಟಿ ಧರಿಸಿ ವೈದ್ಯರು, ಆಸ್ಪತ್ರೆ ಸಿಬ್ಬಂದಿ ಪ್ರತಿಭಟನೆ

ತಿ.ನರಸೀಪುರ, ಜು.25– ವ್ಯಕ್ತಿಯೋರ್ವ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ವೈದ್ಯರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಘಟನೆ ಖಂಡಿಸಿ ವೈದ್ಯರು, ಆಸ್ಪತ್ರೆ ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಆಸ್ಪತ್ರೆ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಿರಿಯ ಶಸ್ತ್ರ ಚಿಕಿತ್ಸಕ ಡಾ.ರೇವಣ್ಣ ಅವರು ಕರ್ತವ್ಯದಲ್ಲಿದ್ದ ವೇಳೆ ವ್ಯಕ್ತಿಯೋರ್ವ ಅವರೊಂದಿಗೆ ಅಸಭ್ಯ ವರ್ತನೆ ತೋರಿ, ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ ಎಂದು ಆರೋಪಿಸಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಜಗನ್ನಾಥ್ ನೇತೃತ್ವದಲ್ಲಿ ವೈದ್ಯರು, ಆಸ್ಪತ್ರೆ ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಡಾ.ಜಗನ್ನಾಥ್ ಮಾತನಾಡಿ, ವೈದ್ಯರೊಂದಿಗೆ ಪದೇ ಪದೆ ಅನುಚಿತ ವರ್ತನೆ, ಕೆಟ್ಟ ಭಾಷೆ ಪ್ರಯೋಗ ಮಾಡುವ ಮೂಲಕ ವೈದ್ಯರ ಮಾನಸಿಕ ಸಾಮರ್ಥ್ಯ ಕುಗ್ಗಿಸುವ ಪ್ರಯತ್ನ ಮಾಡಲಾಗುತ್ತಿದ್ದು, ಡಾ.ರೇವಣ್ಣ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ವ್ಯಕ್ತಿಯ ನಡೆ ಖಂಡನೀಯ. ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಬೇಕಿದೆ. ವೈದ್ಯರು ಸೇವಾ ಮನೋಭಾವದಿಂದ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.



ಹಿರಿಯ ಶಸ್ತ್ರಚಿಕಿತ್ಸಕ ಡಾ.ರೇವಣ್ಣ ಮಾತನಾಡಿ, ರೋಗಿಗೆ ಚಿಕಿತ್ಸೆ ನೀಡುವ ಸಂದರ್ಭ ವ್ಯಕ್ತಿಯೋರ್ವ ಕರ್ತವ್ಯದಲ್ಲಿದ್ದ ನನಗೆ ಬೆದರಿಕೆವೊಡ್ಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಅಲ್ಲದೇ ಆತನ ದುರ್ವರ್ತನೆಯಿಂದ ರೋಗಿಗಳು ಸಹ ತೊಂದರೆಗೆ ಒಳಗಾಗಿದ್ದಾರೆ. ವೈದ್ಯರಿಗೆ ಬೆದರಿಕೆ ಒಡ್ಡುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು ಇದೇ ಮೊದಲೇನಲ್ಲ. ಪದೇ ಪದೆ ಇಂತಹ ಘಟನೆಗಳಿಂದ ವೈದ್ಯರ ನಿಸ್ವಾರ್ಥ ಸೇವೆಗೆ ತೊಂದರೆಯಾಗುತ್ತಿದೆ. ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರು, ನರ್ಸ್ ಮತ್ತು ಸಿಬ್ಬಂದಿ ಮೇಲೆ ಹಲ್ಲೆ ನಡೆಸುವುದು ಅಪರಾಧ. ಅಂತಹವರು ಕಠಿಣ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಜನರು ಇದನ್ನು ಅರಿಯಬೇಕಿದೆ. ಈ ಘಟನೆಯಿಂದ ತುಂಬಾ ನೋವುಂಟಾಗಿದೆ. ಯಾರೂ ಸಹ ವೃತ್ತಿ ಗೌರವಕ್ಕೆ ಧಕ್ಕೆ ತರುವ ಕೆಲಸಕ್ಕೆ ಮುಂದಾಗಬಾರದು. ವೈದ್ಯರು ನಿರ್ಭಯವಾಗಿ ಕೆಲಸ ಮಾಡುವ ವಾತಾವರಣ ಸೃಷ್ಟಿಯಾಗಬೇಕು. ದಿನದ 24 ಗಂಟೆಯೂ ನಾವು ರೋಗಿಗಳ ಸೇವೆಗೆ ಸಿದ್ಧರಾಗಿದ್ದೇವೆ. ಕಿಡಿಗೇಡಿಗಳ ಅಹಿತಕರ ಘಟನೆಯಿಂದ ಸಾರ್ವಜನಿಕರು ತೀವ್ರ ತೊಂದರೆಗೆ ಒಳಗಾಗಲಿದ್ದಾರೆ ಎಂದರು.

ಜನರ ನಡೆ ಬೇಸರ ತರಿಸಿದೆ: ಆಸ್ಪತ್ರೆಯಲ್ಲಿ ವೈದ್ಯರ ಮೇಲೆ ಹಲ್ಲೆ, ಅವರೊಂದಿಗೆ ಅನುಚಿತ ವರ್ತನೆ ನಡೆದಾಗ ಸಾರ್ವಜನಿಕರು ನಡೆದುಕೊಳ್ಳುವ ರೀತಿ ಬೇಸರ ತರಿಸಿದೆ. ಇಂತಹ ಘಟನೆಗಳಾದಾಗ ತಮಗೆ ಸಂಬಂಧವೇ ಇಲ್ಲ ಎಂಬಂತೆ ಸಾರ್ವಜನಿಕರು ವರ್ತಿಸುತ್ತಾರೆ. ಘಟನೆ ಖಂಡಿಸುವ ಧೈರ್ಯ ತೋರುವ ಜೊತೆಗೆ ಸಾರ್ವಜನಿಕರೇ ಕಿಡಿಗೇಡಿಗಳನ್ನು ಪೊಲೀಸರಿಗೆ ಒಪ್ಪಿಸುವ ಎದೆಗಾರಿಕೆ ತೋರಬೇಕಿದೆ ಎಂದರು.

ನಾವೇನು ಮನೆಯಾಳುಗಳೇ?: ಸರ್ಕಾರಿ ನೌಕರರನ್ನು ಮನೆಯಾಳುಗಳಂತೆ ನಡೆಸಿಕೊಳ್ಳುವುದನ್ನು ಅವಿವೇಕಿಗಳು ಬಿಡಬೇಕಿದೆ. ನಾವು ಮನುಷ್ಯರೇ, ನಮಗೂ ನಮ್ಮದೇ ಆದ ಜವಾಬ್ದಾರಿಗಳಿವೆ. ನಮ್ಮ ತಪ್ಪಿದ್ದರೆ ಹೇಳಿ ತಿದ್ದಿಕೊಳ್ಳುತ್ತೇವೆ. ಆದರೆ ಮನಸ್ಸಿಗೆ ನೋವಾಗುವಂತೆ ನಡೆದುಕೊಳ್ಳುವುದನ್ನು ಬಿಡಿ ಎಂದು ಡಾ.ರೇವಣ್ಣ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ವೈದ್ಯರಾದ ಪಿ.ನಾಗೇಶ್ ರಾವ್, ಬಿ.ಆರ್.ನೀಲವೇಣಿ, ದಯಾನಂದ ಬಾಬು, ಕೆ.ಆರ್.ಭಾರತಿ, ಎಸ್.ಬಿ.ಅಭಿಲಾಷ್, ಕೆ.ಅಮಿತ್, ವೆಂಕಟೇಶ್, ಎಲ್.ಸುಮ, ಟಿ.ಡಿ.ನಂದಿನಿ, ಪಲ್ಲವಿ, ಮಾನಸ, ನೇತ್ರಾ ಪರೀಕ್ಷಕ ಆರ್.ಉಮೇಶ್ ಕುಮಾರ್ ಸೇರಿದಂತೆ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ಜು.25– ನಗರದ ದೇವಿರಮ್ಮನಹಳ್ಳಿ ಬಡಾವಣೆಗೆ ನಗರೋತ್ಥಾನ ಯೋಜನೆಯಡಿ 3.5 ಕೋಟಿ ರೂ. ಅನುದಾನ ನೀಡಲಾಗಿದ್ದು, ಮೂಲ ಸೌಕರ್ಯ ಕಲ್ಪಿಸುವ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗಿದೆ ಎಂದು ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ ತಿಳಿಸಿದರು.



ದೇವಿರಮ್ಮನಹಳ್ಳಿ ಬಡಾವಣೆಯಲ್ಲಿ ಸೋಮವಾರ 10 ಲಕ್ಷ ರೂ. ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ದೇವಿರಮ್ಮನಹಳ್ಳಿ ಹೊಸ ಬಡಾವಣೆ ನಗರಸಭೆ ವ್ಯಾಪ್ತಿಗೆ ಸೇರ್ಪಡೆಗೊಂಡ ನಂತರ ನಗರಸಭೆಯಿಂದ ನಗರದಲ್ಲಿ 13.5 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗಿದೆ. ಈಗಾಗಲೇ 8 ಕೋಟಿ ರೂ. ವೆಚ್ಚದ ಕಾಮಗಾರಿಗಳು ಪ್ರಗತಿಯಲ್ಲಿವೆ. ಇಂದು ನಗರದ ದೇವಿರಮ್ಮನಹಳ್ಳಿ ಬಡಾವಣೆಯ ಶಾಂತ ಲೇಔಟ್‌ನಿಂದ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ 10 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ 6 ತಿಂಗಳ ಅವಧಿಯಲ್ಲಿ ಈ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳಲಿದ್ದು, ನಗರದ ಎಲ್ಲಾ ಬಡಾವಣೆಗಳ ಸಮಗ್ರ ಅಭಿವೃದ್ಧಿಗೆ ಬದ್ಧ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ತಾಪಂ ಮಾಜಿ ಅಧ್ಯಕ್ಷ ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ನಗರಸಭೆ ಆಯುಕ್ತ ರಾಜಣ್ಣ, ಸದಸ್ಯರಾದ ಮಹದೇವಮ್ಮ, ರಂಗಸ್ವಾಮಿ, ಗಿರೀಶ್, ನಾಗರಾಜ ಸ್ವಾಮೀಜಿ, ಬಾಲಚಂದ್ರ ಸೇರಿದಂತೆ ಇನ್ನಿತರರಿದ್ದರು.

ವಿಜೃಂಭಣೆಯ ಶ್ರೀಮುತ್ತುಮಾರಮ್ಮದೇವಿ ಉತ್ಸವ

ಹುಣಸೂರು, ಜು.25– ಆಷಾಢ ಮಾಸದ ಅಂಗವಾಗಿ ನಗರದ ಶ್ರೀಮುತ್ತು ಮಾರಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ದೇವಿ ಉತ್ಸವ ನಡೆಯಿತು.



ಬೆಳಗ್ಗೆ ಯಿಂದಲೇ ದೇವರಿಗೆ ಅಭಿಷೇಕ ಸೇರಿದಂತೆ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ದೇವಾಲಯದ ಪ್ರಾಂಗಣವನ್ನು ಮುಸುಕಿನ ಜೋಳದಿಂದ ಆಕರ್ಷಕವಾಗಿ ಅಲಂಕರಿಸಲಾಗಿತ್ತು. ವಿಶೇಷ ಪೂಜೆಯಲ್ಲಿ ಐದು ಸಾವಿರಕ್ಕೂ ಹೆಚ್ಚು ಮಂದಿ ಭಕ್ತರು ಭಾಗವಹಿಸಿದ್ದರು. ಮಧ್ಯಾಹ್ನ ದಾಸೋಹ ಆಯೋಜಿಸಲಾಗಿತ್ತು. ದೇವಾಲಯದ ಸುತ್ತಲಿನ ಬಡಾವಣೆಯಲ್ಲಿ ಸಂಜೆ ಅಲಂಕೃತ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನಿಟ್ಟು ಅಡ್ಡಪಲ್ಲಕ್ಕಿ ಉತ್ಸವ ನಡೆಸಿದರು.

ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್, ಸಂಗೊಳ್ಳಿ ರಾಯಣ್ಣ ಬಳಗದ ಯುವಪಡೆ ಸೇರಿದಂತೆ ಅನೇಕರು ಭಾಗವಹಿಸಿ ಉತ್ಸವವನ್ನು ಯಶಸ್ವಿಗೊಳಿಸಿದರು. ನಂತರ ಮಳೆ ನಡುವೆಯೇ ಅಲಂಕೃತ ಮಂಟಪದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮಂಗಳವಾದ್ಯ, ಚಂಡೆ ವಾದ್ಯ, ಕೀಲುಕುದುರೆ, ಸೇರಿದಂತೆ ವಿವಿಧ ವೇಷಧಾರಿಗಳನ್ನೊಳಗೊಂಡ ಆಕರ್ಷಕ ಕುಣಿತದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಸಿದರು. ಮನೆಗಳ ಮುಂದೆ ಉತ್ಸವ ಆಗಮಿಸಿದ ವೇಳೆ ಜನರು ಪೂಜೆ ಸಲ್ಲಿಸಿ ಧನ್ಯತಾ ಭಾವ ಮೆರೆದರು. ನಗರ ಠಾಣೆ ಪೊಲೀಸರು ಬಂದೋಬಸ್ತ್ ಏರ್ಪಡಿಸಿದ್ದರು.

ಬನ್ನೂರಲ್ಲಿ ರೈತರ ಕುಂದು ಕೊರತೆ ಸಭೆ



ಬನ್ನೂರು, ಜು.25– ಪಟ್ಟಣದ ಅತಿಥಿ ಗೃಹದಲ್ಲಿ ರೈತರ ಕುಂದು ಕೊರತೆ ಸಭೆ ರಾಜ್ಯ ರೈತ ಸಂಘ, ಹಸಿರು ಸೇನೆ ಹೋಬಳಿ ಘಟಕದ ಅಧ್ಯಕ್ಷ ಹುಚ್ಚೇಗೌಡರ ನೇತೃತ್ವದಲ್ಲಿ ನಡೆಯಿತು.

ಸಭೆಯಲ್ಲಿ ರೈತರ ಸಮಸ್ಯೆ ಆಲಿಸಿ ಮಾತನಾಡಿದ ಹುಚ್ಚೇಗೌಡ, ರೈತರ ಜಮೀನಿನ ಖಾತೆಗೆ ಇಲ್ಲಸಲ್ಲದ ದಾಖಲೆ ಕೇಳುವುದು. ಜಮೀನಿನ ಒತ್ತುವರಿ ತೆರವಿಗೆ ಮೀನಾಮೇಷ ಎಣಿಸುವುದು. ಜಮೀನಿನ ಎಲ್ಲೆ ನಿಗದಿಗೊಳಿಸಲು ಭೂಮಾಪಕರು ಲಂಚಕ್ಕೆ ಬೇಡಿಕೆ ಇಡುವುದು. ಕೃಷಿ ಅಧಿಕಾರಿಗಳು ರೈತರಿಗೆ ದೊರೆಯಬೇಕಾದ ಸೌಲಭ್ಯಗಳ ಫಲಕ ಇಡದಿರುವುದು. ರೈತ ಕೇಂದ್ರದಲ್ಲಿ ಅಧಿಕಾರಿಗಳು ಸಮರ್ಪಕ ಮಾಹಿತಿ ನೀಡದಿರುವ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿವೆ. ಇವುಗಳ ವಿರುದ್ಧ ಹೋರಾಡಲು ಬೀದಿಗೆ ಇಳಿಯಬೇಕಾಗುತ್ತದೆ ಎಂದರು.

ರೈತರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಶಾಸಕರು ಇದುವರೆಗೂ ಸಭೆ ಕರೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ರೈತರ ಸಮಸ್ಯೆ ಬಗೆಹರಿಸದೇ ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ತಾಲೂಕು ಪ್ರಧಾನ ಕಾರ್ಯದರ್ಶಿ ಶಿವನಂಜು ಮಾತನಾಡಿ, ಕಂದಾಯ ಇಲಾಖೆ ಮನೆ ಬಾಗಿಲಿಗೆ ಕಾರ್ಯಕ್ರಮ ಮಾಡಿ ಸರ್ಕಾರ ಕೈಕಟ್ಟಿ ಕುಳಿತಿದೆಯೇ ವಿನಃ, ರೈತರು ಕಚೇರಿ ಅಲೆಯುವುದನ್ನು ತಪ್ಪಿಸಲು ಸಾಧ್ಯವಾಗಿಲ್ಲ. ಆದೇಶ ಮಾಡಿದರೆ ಸಾಲದು ಅಧಿಕಾರಿಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದನ್ನು ಪರಿಶೀಲಿಸಬೇಕು. ತಹಶೀಲ್ದಾರ್ ಅವರು ಅಕ್ರಮವಾಗಿ ಖಾತೆ ಬದಲಾವಣೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಸಂಘದ ಉಪಾಧ್ಯಕ್ಷ ಮಹೇಶ್ ಮಾತನಾಡಿದರು. ಇದೇ ವೇಳೆ ಮುಖಂಡರಾದ ಮಹೇಶ್, ಶಿವರಾಂ, ಕೃಷ್ಣ, ರವಿ ರೈತ ಸಂಘಕ್ಕೆ ಸೇರ್ಪಡೆಯಾದರು. ಕಾರ್ಯಕ್ರಮದಲ್ಲಿ ಜಗದೀಶ್, ಸಿದ್ದೇಗೌಡ, ಮಹದೇವು, ಶಂಕರೇಗೌಡ, ವೆಂಕಟೇಗೌಡ, ಚಾಮುಂಡಿ ಸೇರಿದಂತೆ ಇತರರಿದ್ದರು.



ತಂಬಾಕು ಹದಗೊಳಿಸುವ ವೇಳೆ ಆಕಸ್ಮಿಕ ಬೆಂಕಿ ತಗುಲಿ ಚಿಲ್ಕುಂದ ತಂಬಾಕು ಮಾರುಕಟ್ಟೆ ವ್ಯಾಪ್ತಿಯ ಕಣಗಾಲು ಗ್ರಾಮದ ರೈತ ವರದನಾಯಕ ಅವರಿಗೆ ಸೇರಿದ ಬ್ಯಾರನ್ ಸಂಪೂರ್ಣ ಸುಟ್ಟು ಹೋಗಿದ್ದು, ಸೋಮವಾರ ಹರಾಜು ಅಧೀಕ್ಷಕ ಬ್ರಿಜ್ ಭೂಷಣ್, ತಂಬಾಕು ಮಂಡಳಿ ಸದಸ್ಯ ಹೆಚ್.ಆರ್.ದಿನೇಶ್, ಕ್ಷೇತ್ರಾಧಿಕಾರಿ ಸವಿನಯ್, ಸಹಾಯಕಿ ಅಖಿಲಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ರೈತ ಮುಖಂಡ ಮಲ್ಲೇಶ್ ಮತ್ತಿತರರಿದ್ದರು.

ಬ್ಯಾಂಕ್ ಆಫ್ ಬರೋಡಾ ಸಂಸ್ಥಾಪನಾ ದಿನ

ಹಂಪಾಪುರ, ಜು.25– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಹಳ್ಳಿಯಲ್ಲಿ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ 115ನೇ ಸಂಸ್ಥಾಪನಾ ದಿನವನ್ನು ಬ್ಯಾಂಕ್ ಆವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬ್ಯಾಂಕ್ ವ್ಯವಸ್ಥಾಪಕ ಎನ್.ಎಂ. ಮೋಹನ್ ಕುಮಾರ್, ಗ್ರಾಹಕರಿಗೆ ಅತ್ಯುತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ನಮ್ಮ ಬ್ಯಾಂಕ್ ಸತತವಾಗಿ ಶ್ರಮಿಸುತ್ತಿದೆ. ಗ್ರಾಹಕರಿಗೆ ಕಡಿಮೆ ಬಡ್ಡಿ ದರದಲ್ಲಿ ಗೃಹಸಾಲ, ಚಿನ್ನಾಭರಣಗಳ ಮೇಲಿನ ಸಾಲ, ವಾಹನ ಸಾಲ, ವೈಯಕ್ತಿಕ ಸಾಲ, ವಿಮೆ ಸೌಲಭ್ಯ, ಲಾಕರ್ ಸೌಲಭ್ಯ, ವಿದ್ಯಾಭ್ಯಾಸ ಸಾಲ ಮತ್ತಿತರೆ ಹತ್ತು ಹಲವು ಸೇವೆಗಳನ್ನು ಗ್ರಾಹಕರ ಸನಿಹವೇ ಒದಗಿಸಿಕೊಡಲಾಗುತ್ತಿದೆ ಎಂದರು.

ಬ್ಯಾಂಕ್ ವಹಿವಾಟನ್ನು ಆನ್‌ಲೈನ್ ಬ್ಯಾಂಕಿಂಗ್ ಮುಖೇನ ಗ್ರಾಹಕರ ಮೊಬೈಲ್‌ಗಳಿಗೆ ಪ್ರತಿ ಗಂಟೆಗೊಮ್ಮೆ ಅಪ್‌ಡೇಟ್ ಮಾಡಿಕೊಡಲಾಗುತ್ತಿದೆ. ಯಾವುದೇ ಮಾಹಿತಿ ವಿಳಂಬವಾಗದಂತೆ 24X7 ಗ್ರಾಹಕ ಸೇವೆಯಡಿ ಕಲ್ಪಿಸಿಕೊಡಲಾಗುತ್ತಿದೆ. ಗ್ರಾಹಕರು ಇದರ ಸದುಪಯೋಗ ಪಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ಬ್ಯಾಂಕ್ ಸಿಬ್ಬಂದಿ, ತಾಂತ್ರಿಕ ಸಿಬ್ಬಂದಿ ವರ್ಗ ಹಾಗೂ ಗ್ರಾಹಕರು ಉಪಸ್ಥಿತರಿದ್ದರು.





ಕರ್ನಾಟಕ ರಾಜ್ಯ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕವಾಗಿರುವ ಮಿರ್ಲೆ ಶ್ರೀನಿವಾಸಗೌಡರನ್ನು ತಾಲೂಕು ಬಿಜೆಪಿ ಅಧ್ಯಕ್ಷ ಕೆ.ವೈ.ಮಂಜು, ಜಿಲ್ಲಾ ಗ್ರಾಮಾಂತರ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಹೊಸೂರು ಹೆಚ್.ವಿ. ಅನಿಲ್, ತಾಲೂಕು ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿ.ಜೆ.ಮಂಜುನಾಥ್, ನಗರ ಆಶ್ರಯ ಸಮಿತಿ ಸದಸ್ಯರಾದ ರಾಮಕೃಷ್ಣೇಗೌಡ, ಕೆ.ಆರ್.ಮಂಜು, ಬಿಜೆಪಿ ಮುಖಂಡ ಚಿರಾಗ್ ಪಟೇಲ್ ಅಭಿನಂದಿಸಿದರು.

ಹುಲ್ಲಹಳ್ಳಿ ಗ್ರಾಪಂನ 2 ಮಳಿಗೆ, ಸಂತೆಮಾಳ ಹರಾಜು

ಹುಲ್ಲಹಳ್ಳಿ, ಜು.25– ಇಲ್ಲಿನ ಗ್ರಾಮ ಪಂಚಾಯಿತಿಗೆ ಸೇರಿದ 2 ಅಂಗಡಿ ಮಳಿಗೆ ಹಾಗೂ ಸಂತೆಮಾಳ ಹರಾಜು ಪ್ರಕ್ರಿಯೆ ಇತ್ತೀಚೆಗೆ ಹುಲ್ಲಹಳ್ಳಿ ಗ್ರಾಪಂ ಆವರಣದಲ್ಲಿ ನಡೆಯಿತು.



ಹರಾಜು ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಈ ವೇಳೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಂದು ಮಳಿಗೆ 40,100 ರೂ.ಗೆ ಬಿಡ್ ಆಗಿದ್ದು, ಮತ್ತೊಂದು ಮಳಿಗೆ 10 ಸಾವಿರ ರೂ.ಗೆ ಹರಾಜಾಯಿತು. ಸಂತೇಮಾಳ 60 ಸಾವಿರ ರೂ.ಗೆ ಹರಾಜಾಗಿದ್ದು, ಇದರಿಂದ ಗ್ರಾಪಂಗೆ ಹೆಚ್ಚಿನ ಆದಾಯ ಬಂದಂತಾಗಿದೆ. ಈ ವೇಳೆ ಗ್ರಾಪಂ ಅಧ್ಯಕ್ಷ ಹೆಚ್.ಎನ್. ಮಹೇಶ್, ಸದಸ್ಯರಾದ ಶಿವಣ್ಣ, ಹೆಚ್.ಜೆ.ಮಲ್ಲಿಕಾರ್ಜುನ, ನಾಗೇಂದ್ರ ಕುಮಾರ್, ಚೌಡಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ವರದರಾಜು, ಜಯ ಕರ್ನಾಟಕದ ಸಂಘಟನೆ ಹೋಬಳಿ ಅಧ್ಯಕ್ಷ ಜವರನಾಯ್ಕ, ಜಗದೀಶ್, ಮಡಿಕೆಹುಂಡಿ ಶಿವಣ್ಣ, ಕಲೀಂ, ಪುಟ್ಟಸಿದ್ದ ನಾಯಕ, ತುಕಾರಂ, ಬೆಲ್ಲದ ಪ್ರಶಾಂತ್, ಕಾರ್ಯದರ್ಶಿ ಅರುಣ್‌ಕುಮಾರ್ ಇನ್ನಿತರರಿದ್ದರು.

ಜನಪ್ರತಿನಿಧಿಗಳು, ಸಿಬ್ಬಂದಿ ಶ್ರಮದಿಂದ ಗ್ರಾಪಂ ಅಭಿವೃದ್ಧಿ ಸಾಧ್ಯ

ಶಾಸಕ ಹೆಚ್.ಪಿ.ಮಂಜುನಾಥ್ ಅಭಿಪ್ರಾಯ

ಹನಗೋಡು, ಜು.25– ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ವೃಂದ ಜೋಡೆತ್ತುಗಳಂತೆ ಕಾರ್ಯ ನಿರ್ವಹಿಸಿದರೆ ಗ್ರಾಪಂಗಳು ಅಭಿವೃದ್ಧಿಯತ್ತ ಸಾಗಲಿವೆ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ಅಭಿಪ್ರಾಯಪಟ್ಟರು.



ತಾಲೂಕಿನ ಕರ್ಣಕುಪ್ಪೆ ಗ್ರಾಪಂನಲ್ಲಿ ನರೇಗಾ ಯೋಜನೆಯ 16 ಲಕ್ಷ ರೂ. ಮತ್ತು ರಾಷ್ಟ್ರೀಯ ದೀನ್ ದಯಾಳ್ ಉಪಾಧ್ಯಾಯ ಬಹುಮಾನ 3 ಲಕ್ಷ ರೂ. ಸೇರಿದಂತೆ ಒಟ್ಟು 19 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ರಾಜೀವ್‌ಗಾಂಧಿ ಸೇವಾ ಕೇಂದ್ರದ ಮೊದಲ ಅಂತಸ್ತಿನ ಸಭಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಪಿಡಿಓ ರಾಮಣ್ಣ ಅವರು ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಮೇಲ್ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಪಂ ಜಿಲ್ಲೆ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳಿಸಲು ಕಾರಣರಾಗಿದ್ದಾರೆ. ಸಾರ್ವಜನಿಕರು ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಅಭಿವೃದ್ಧಿಯತ್ತ ಸಾಗಬೇಕಾಗಿದೆ ಎಂದು ಸಲಹೆ ನೀಡಿದರು.

ಇದೇ ವೇಳೆ 2021–22ನೇ ಸಾಲಿನ ಡಾ. ಬಿ.ಆರ್.ಅಂಬೇಡ್ಕರ್ ಗ್ರಾಮೀಣ ಆವಾಸ್ ವಸತಿ ಯೋಜನೆಯಡಿ 6 ಫಲಾನುಭವಿಗಳು, ಬಸವ ವಸತಿ ಯೋಜನೆಯಡಿ 20 ಫಲಾನುಭವಿಗಳಿಗೆ ಮಂಜೂರಾತಿ ಪತ್ರ, 2022–23ನೇ ಸಾಲಿನ ಗ್ರಾಪಂ ಸ್ವಂತ ಸಂಪನ್ಮೂಲದಡಿ ಶವ ಸಂಸ್ಕಾರಕ್ಕೆ 13 ಮಂದಿಗೆ ತಲಾ 5 ಸಾವಿರ ಸಹಾಯಧನ ಚೆಕ್ ವಿತರಣೆ, 10 ವಿದ್ಯಾರ್ಥಿಗಳಿಗೆ ಶೇ.25ರ ಅನುದಾನದಲ್ಲಿ ತಲಾ 3 ಸಾವಿರದ ಚೆಕ್ ವಿತರಣೆ, ಹೊಲಿಗೆ ಯಂತ್ರದ ತರಬೇತಿ ಪಡೆದ ನಿರುದ್ಯೋಗಿ 15 ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ, ಶೇ.5 ರಡಿ ವಿಕಲಚೇತನ ವಿದ್ಯಾರ್ಥಿಗಳಿಗೆ ಸಹಾಯಧನದ ಚೆಕ್ ವಿತರಿಸಲಾಯಿತು.

ಇದೇ ಸಂದರ್ಭ ಗ್ರಾಮ ಪಂಚಾಯ್ತಿ ಸದಸ್ಯರ ಒಕ್ಕೂಟದ ಅಧ್ಯಕ್ಷರು ಹಾಗೂ ಕರ್ಣಕುಪ್ಪೆ ಗ್ರಾಪಂ ಸದಸ್ಯ ಹೆಚ್.ಎಂ. ಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಸರಸ್ವತಿ, ಉಪಾಧ್ಯಕ್ಷ ಮಾದೇಗೌಡ, ಸದಸ್ಯರಾದ ಪಾಪಣ್ಣ, ಬೀರಪ್ಪ, ಮೀನಾಕ್ಷಿ, ರಂಜಿತ, ಪುಟ್ಟಮ್ಮ, ರಾಣಿ, ಮಂಜುಳ, ಸುಂದ್ರಮ್ಮ, ಸೋಮಶೇಖರ್, ವೆಂಕಟೇಶಯ್ಯ, ಪಿಡಿಓ ರಾಮಣ್ಣ, ನರೇಗಾ ತಾಂತ್ರಿಕ ಇಂಜಿನಿಯರ್ ಪವಿತ್ರ, ಗ್ರಾಪಂ ಕಾರ್ಯದರ್ಶಿ ಸಂತೋಷ್, ಎಸ್‌ಡಿಎ ಬಲರಾಂ, ಗ್ರಾಪಂ ನೌಕರರಾದ ಕಿಟ್ಟಿ ಚಂದ್ರೇಗೌಡ ಸೇರಿದಂತೆ ಸಾರ್ವಜನಿಕರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಥ್ಯಾಂಕ್ ಯೂ (ತೆ): ಬೆ.10.55ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಮ.1.35ಕ್ಕೆ.
ಸ್ಕ್ರೀನ್ 2	ಶ್ರೀರಂಗ (ಕ): ಬೆ.11.20ಕ್ಕೆ, ಮಾರಾಯ (ಕ): ಮ.1.45ಕ್ಕೆ, ಮಹಾ (ತ): ಸಂ.4.30ಕ್ಕೆ, ಮಹಾವೀರ್ಯರ್ (ಮ): ರಾ.7.05ಕ್ಕೆ, ಮಲಯನ್‌ಕುಂಜು (ಮ): ರಾ.10ಕ್ಕೆ.
ಸ್ಕ್ರೀನ್ 3	ಶಂಶೀರ (ಹಿಂ): ಬೆ.10.25ಕ್ಕೆ, ಸಂ.4ಕ್ಕೆ, ದೇಜಾವು (ತ): ಮ.1.30ಕ್ಕೆ, ರಾಕೆಟ್ರಿ (ಹಿಂ): ರಾ.7ಕ್ಕೆ, ಪೆಟ್ರೋಮ್ಯಾಕ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 4	ಪಾಮ್ಸ್ ಆಫ್ ಫ್ಯೂರಿ; ದಿ ಲೆಜೆಂಡ್ ಆಫ್ ಹಾಂಕ್ (ಇಂ): ಬೆ.10.55ಕ್ಕೆ, 777 ಚಾರ್ಲಿ (ಕ): ಮ.1.10ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಸಂ.4.30ಕ್ಕೆ, ಶಂಶೀರ (ಹಿಂ): ಸಂ.6.55ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಶಂಶೀರ (ಹಿಂ): ಬೆ.10.10ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಮ.1.20ಕ್ಕೆ, ಥ್ಯಾಂಕ್ ಯೂ (ತೆ): ಮ.3.55ಕ್ಕೆ, ರಾ.10ಕ್ಕೆ, 777 ಚಾರ್ಲಿ (ಕ): ಸಂ.6.40ಕ್ಕೆ.
ಸ್ಕ್ರೀನ್ 2	ಥ್ಯಾಂಕ್ ಯೂ (ತೆ): ಬೆ.10ಕ್ಕೆ, ಶಂಶೀರ (ಹಿಂ): ಮ.12.45ಕ್ಕೆ, ಸಂ.4ಕ್ಕೆ, ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಪಾಮ್ಸ್ ಆಫ್ ಫ್ಯೂರಿ; ದಿ ಲೆಜೆಂಡ್ ಆಫ್ ಹಾಂಕ್ (ಇಂ): ಬೆ.10.05ಕ್ಕೆ, ಗಾರ್ಗಿ (ಕ): ಮ.12.15ಕ್ಕೆ, ದೇಜಾವು (ತ): ಮ.3.05ಕ್ಕೆ, ಮಹಾ (ತ): ಸಂ.5.40ಕ್ಕೆ, ಆರ್‌ಕೆ (ಹಿಂ): ರಾ.8.05ಕ್ಕೆ, ಮಹಾವೀರ್ಯರ್ (ಮ): ರಾ.10.20ಕ್ಕೆ.
ಸ್ಕ್ರೀನ್ 4	ಮಲಯನ್‌ಕುಂಜು (ಮ): ರಾ.10.35ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಮ.1.05ಕ್ಕೆ, ಪಾಮ್ಸ್ ಆಫ್ ಫ್ಯೂರಿ; ದಿ ಲೆಜೆಂಡ್ ಆಫ್ ಹಾಂಕ್ (ಇಂ): ಮ.3.55ಕ್ಕೆ, ಶಂಶೀರ (ಹಿಂ): ಸಂ.6.15ಕ್ಕೆ, ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಚೇಜ್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
ಸ್ಕ್ರೀನ್ 2	ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 3	ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
ಸ್ಕ್ರೀನ್ 4	ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೋಕೆ ಬೈ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಬೈರಾಗಿ (ಕ): ಬೆ.10ಕ್ಕೆ, ಮ.12.15ಕ್ಕೆ, ಮ.1ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, 777 ಚಾರ್ಲಿ (ಕ): ಮ.3.55ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ಹರಿಕಥೆ ಅಲ್ಲ ಗಿರಿಕಥೆ (ಕ): ಸಂ.4.05ಕ್ಕೆ, ತ್ರಿವಿಕ್ರಮ (ಕ): ಮ.12.50ಕ್ಕೆ, ಮಿನಿಯನ್ಸ್ (3ಡಿ)(ಇಂ): ಬೆ.10.05ಕ್ಕೆ, ಮ.3.30ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾ.10ಕ್ಕೆ, ರಾಷ್ಟ್ರ ಕವಚ ಓಂ(ಹಿಂ): ಬೆ.9.40ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ಜಗ್‌ಜಗ್ ಜೀಯೋ (ಹಿಂ): ಮ.12.15ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಬೆ.9ಕ್ಕೆ, ಸಂ.4.40ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ, ರಾಕೆಟ್ರಿ (ತ): ಮ.3.10ಕ್ಕೆ, ವಿಕ್ರಂ (ತ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಥ್ಯಾಂಕ್ ಯೂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜುದಾ ಹೋಕೆ ಭೀ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೈರಾಗಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಹಾ (ತ)	4 ಪ್ರದರ್ಶನಗಳು
ಸಂಗಂ	
ಬೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಚೇಜ್ (ಕ), ಥ್ಯಾಂಕ್ ಯೂ (ತೆ)	2 ಪ್ರದರ್ಶನಗಳು
ತಿಬ್ಬಾದೇವಿ	
ಬೆಂಕಿ (ಕ), ಹುಡುಗಿ (ಕ)	2 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ವಿಕ್ರಂ (ತ)	4 ಪ್ರದರ್ಶನಗಳು

ಹುಲ್ಲಹಳ್ಳಿ ನೂತನ ಸಬ್‌ಇನ್ಸ್‌ಪೆಕ್ಟರ್ ಕೃಷ್ಣಕಾಂತ ಕೋಳಿ ಅಧಿಕಾರ ಸ್ವೀಕಾರ



ಹುಲ್ಲಹಳ್ಳಿ, ಜು.25– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಪೊಲೀಸ್ ಠಾಣೆ ನೂತನ ಸಬ್‌ಇನ್ಸ್‌ಪೆಕ್ಟರ್ ಕೃಷ್ಣಕಾಂತ ಕೋಳಿ ಶನಿವಾರ ಅಧಿಕಾರ ಸ್ವೀಕರಿಸಿದ್ದಾರೆ.

ಪುರಸಭೆ ಆಸ್ತಿ ಅತಿಕ್ರಮಿಸಿಕೊಂಡವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

ತಿ.ನರಸೀಪುರ, ಜು.25– ಪುರಸಭೆ ಆಸ್ತಿ ಅತಿಕ್ರಮಣ ಮಾಡಿಕೊಂಡವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೋಟ್ಯಾಂತರ ರೂ. ಬೆಲೆ ಬಾಳುವ ಹುಲ್ಲಹಳ್ಳಿ ನಾಲೆ ಜಾಗವನ್ನು ಪುರಸಭೆ ಕಾಂಗ್ರೆಸ್ ಸದಸ್ಯ ನಂಜುಂಡಸ್ವಾಮಿ ಅವರು ಅತಿಕ್ರಮಿಸಿಕೊಂಡು ಕಟ್ಟಡ ನಿರ್ಮಾಣ ಮಾಡಿದ್ದಾರೆ ಎಂಬ ಪುರಸಭಾ ಬಿಜೆಪಿ ಸದಸ್ಯ ಎಸ್.ಕೆ.ಕಿರಣ್ ಆರೋಪಕ್ಕೆ ಅವರು ಪ್ರತಿಕ್ರಿಯಿಸಿದರು.



ಮದನ್ ರಾಜ್

ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ವೆ ಇಲಾಖೆಯೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಪುರಸಭೆ ಮತ್ತು ಸರ್ವೆ ಇಲಾಖೆ ಅಧಿಕಾರಿಗಳು ಅತಿಕ್ರಮಿಸಿಕೊಂಡಿರುವ ಜಾಗದ ಸರ್ವೆ ಕಾರ್ಯ ನಡೆಸುವರು. ವರದಿ ಬಂದ ನಂತರ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದರು.

ನನ್ನ ಅವಧಿಯಲ್ಲಿ ಲೈಸೆನ್ಸ್ ಕೊಟ್ಟಿಲ್ಲ: ಎಸ್.ಕೆ.ಕಿರಣ್ ಆರೋಪಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, ನಾನು ಅಕ್ರಮದಲ್ಲಿ ಭಾಗಿಯಾಗಿರುವ ಬಗ್ಗೆ ಬಿಜೆಪಿ ಸದಸ್ಯರು ಹೇಳಿಕೆ ನೀಡಿದ್ದು, ಅವರ ಆರೋಪದಲ್ಲಿ ಹುರುಳಿಲ್ಲ. ನಾನು ಅಧಿಕಾರಕ್ಕೆ ಬಂದ ನಂತರ ಯಾವುದೇ ಕೆಎಂಎಫ್ 24, ಖಾತೆ, ಕಟ್ಟಡ ಲೈಸೆನ್ಸ್ ನೀಡಿಲ್ಲ. ಅಧಿಕಾರಕ್ಕೆ ಬರುವ ಮುಂಚೆಯೇ ದಾಖಲಾತಿ ನೀಡಲಾಗಿದೆ ಎಂದರು.

ಸದಸ್ಯರ ಆರೋಪದಂತೆ ನಾನು ಕಾಂಗ್ರೆಸ್ ಪಕ್ಷದ ಸದಸ್ಯರ ಪರ ಕೆಲಸ ಮಾಡದೇ ಜನಪರವಾಗಿ ಕೆಲಸ ಮಾಡುತ್ತಿದ್ದೇನೆ. ಪುರಸಭೆ ಆಸ್ತಿ ಅತಿಕ್ರಮಣ ಕಂಡು ಬಂದಲ್ಲಿ ಯಾವುದೇ ಪ್ರಭಾವಕ್ಕೆ ಒಳಗಾಗದೆ ಅತಿಕ್ರಮಿಸಿಕೊಂಡವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಪುರಸಭೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದರು.

ನಂಜುಂಡಸ್ವಾಮಿ ಹೇಳಿಕೆ ಸರಿಯಲ್ಲ: ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯಲ್ಲಿ ವಿವಾದಿತ ನಿವೇಶನದ ಬಗ್ಗೆ 2 ಬಾರಿ ಚರ್ಚೆಯಾಗಿ, ಬಿಜೆಪಿ ಸದಸ್ಯ ಎಸ್.ಕೆ.ಕಿರಣ್ ಗಮನ ಸೆಳೆದ ವೇಳೆ ಸದಸ್ಯ ನಂಜುಂಡಸ್ವಾಮಿ ನೀಡಿದ ಉತ್ತರ ಸರಿಯಲ್ಲ. ಅತಿಕ್ರಮವಾಗಿದೆ ಎಂದು ಹೇಳಲಾದ ಆಸ್ತಿ ಅವರದ್ದೇ ಆದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಕಾನೂನು ಹೋರಾಟ ಮಾಡಲಿ. ಅದು ಬಿಟ್ಟು ಹುಲ್ಲಹಳ್ಳಿ ನಾಲೆಯನ್ನು ಸಂಪೂರ್ಣವಾಗಿ ಸರ್ವೆ ಮಾಡಿ ಎಲ್ಲಾ ಕಟ್ಟಡಗಳನ್ನು ಒಡೆದುಕೊಂಡು ಬನ್ನಿ ಎಂದು ಹೇಳುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದ್ದು, ಸದಸ್ಯರ ಹೇಳಿಕೆ ಗೊಂದಲ ಮೂಡಿಸಿದೆ ಎಂದರು.

ಸ್ವಪಕ್ಷೀಯರಾಗಿದ್ದರೂ ಕ್ರಮ: ಹುಲ್ಲಹಳ್ಳಿ ನಾಲೆ ಅತಿಕ್ರಮಣ ಬಗ್ಗೆ ಹಲವು ಆರೋಪಗಳು ಕೇಳಿ ಬಂದಿದ್ದು, ಸಾರ್ವಜನಿಕರು ಮತ್ತು ರೈತ ಸಂಘದಿಂದಲೂ ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ ನಾಲೆ ಆಕ್ರಮಿಸಿಕೊಂಡಿರುವವರು ಸ್ವತಃ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದರೂ ಅವರ ವಿರುದ್ಧವೂ ಯಾವುದೇ ಮುಲಾಜಿಲ್ಲದೆ ಕ್ರಮಕೈಗೊಳ್ಳಲಾಗುವುದು ಎಂದರು.

ಸಮಿತಿ ರಚನೆಯಾಗಲಿ: ಹುಲ್ಲಹಳ್ಳಿ ನಾಲೆ ಅತಿಕ್ರಮಣವಾಗಿರುವ ಬಗ್ಗೆ ಪರಿಶೀಲಿಸಲು ಜಿಲ್ಲಾಡಳಿತ ಅಥವಾ ತಾಲೂಕು ಆಡಳಿತ ತಂಡ ರಚಿಸಿ, ವಿವಾದಿತ ಸ್ಥಳ ಅತಿಕ್ರಮವಾಗಿದ್ದರೆ ಅದನ್ನು ಪುರಸಭೆ ವಶಕ್ಕೆ ನೀಡುವಂತೆ ಮದನ್ ರಾಜ್ ಮನವಿ ಮಾಡಿದರು.

ಕಾಮಗಾರಿಗಳಿಗೆ ಪಿಂಚಣಿ ಅನುದಾನ ಬಳಸಿಲ್ಲ

ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್ ಸ್ಪಷ್ಟನೆ

ಮೈಸೂರು, ಜು. 25(ಆರ್‌ಕೆ)– ಅಭಿವೃದ್ಧಿ ಕಾಮಗಾರಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಅನುದಾನವನ್ನು ಬಳಸಿಲ್ಲ ಎಂದು ಕುಲಪತಿ ಪ್ರೊ. ಜಿ.ಹೇಮಂತ ಕುಮಾರ್ ಸ್ಪಷ್ಟಪಡಿಸಿದ್ದಾರೆ.



ಪ್ರೊ ಹೇಮಂತಕುಮಾರ್

ಕುಲಸಚಿವ ಪ್ರೊ. ಆರ್.ಶಿವಪ್ಪ, ಹಣಕಾಸು ಅಧಿಕಾರಿ ಸಂಗೀತ ಗಜಾನನ ಭಟ್ ಅವರೊಂದಿಗೆ ಈ ಬಗ್ಗೆ ಜಂಟಿ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮೈಸೂರು ವಿಶ್ವವಿದ್ಯಾನಿಲಯದ ಕಾಮಗಾರಿಗಳಿಗೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಾಗಿ ಮೀಸಲಿಟ್ಟ ಅನುದಾನ ಬಳಸಿಲ್ಲ, ದುರ್ಬಳಕೆಯೂ ಆಗಿಲ್ಲ ಎಂದು ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಕೆ. ಮಹದೇವ ಸುದ್ದಿಗೋಷ್ಠಿ ನಡೆಸಿ ಮಾಡಿದ್ದ ಆರೋಪದ ಹಿನ್ನೆಲೆಯಲ್ಲಿ ಜಂಟಿ ಸ್ಪಷ್ಟೀಕರಣ ನೀಡಿರುವ ಅವರು, ವಿಶ್ವವಿದ್ಯಾನಿಲಯದಲ್ಲಿ 1820 ಪಿಂಚಣಿದಾರರಿದ್ದು, ಪ್ರತೀ ತಿಂಗಳು 5ರಿಂದ 6 ಮಂದಿ ನಿವೃತ್ತರಾಗುತ್ತಿರುವುದರಿಂದ ಮಾಹೆಯಾನ ಸರಾಸರಿ 6 ಕೋಟಿ ರೂ.ಗಳ ಪಿಂಚಣಿ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

2021–22ನೇ ಸಾಲಿನಲ್ಲಿ 57 ಮಂದಿ ನಿವೃತ್ತರಾಗಿದ್ದು, ಪಿಂಚಣಿಗಾಗಿ 91.47 ಕೋಟಿ ರೂ.ಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರ ಈ ಉದ್ದೇಶಕ್ಕೆ 44.16 ಕೋಟಿ ರೂ. ಬಿಡುಗಡೆ ಮಾಡಿದೆ. ಉಳಿದ ಹಣವನ್ನು ವಿಶ್ವವಿದ್ಯಾನಿಲಯದ ಎಲ್‌ಐಸಿ ಮ್ಯಾನೇಜ್‌ಮೆಂಟ್ ಫಂಡ್‌ನಿಂದ ಭರಿಸಲಾಗಿದೆ. ಅದೇ ರೀತಿ 2022–23ನೇ ಸಾಲಿನಲ್ಲಿ ಸರ್ಕಾರಕ್ಕೆ 100.6 ಕೋಟಿ ರೂ. ಕೇಳಲಾಗಿದ್ದು, ಆದರೆ 50 ಕೋಟಿ ರೂ. ಮಾತ್ರ ಬಿಡುಗಡೆಯಾಗಿರುತ್ತದೆ ಎಂದಿರುವ ಅವರು, ಈಗಾಗಲೇ ಪಿಂಚಣಿ, ಇನ್ನಿತರ ವೆಚ್ಚಗಳಿಗೆ 8 ಕೋಟಿ ರೂ. ಹೆಚ್ಚುವರಿ ಹಣವನ್ನು ಅನುಮತಿ ಪಡೆದು ಎಲ್‌ಐಸಿ ಮ್ಯಾನೇಜ್‌ಮೆಂಟ್ ಫಂಡ್‌ನಿಂದ ಪಾವತಿಸಲಾಗಿದೆ ಎಂದು ಕುಲಪತಿ ಪ್ರೊಹೇಮಂತ್‌ಕುಮಾರ್ ತಿಳಿಸಿದ್ದಾರೆ.

> “ಪ್ರತೀ ತಿಂಗಳು ನಿವೃತ್ತಿಯಾಗುವ ಪ್ರತಿಯೊಬ್ಬರಿಗೂ ಪಿಂಚಣಿ ಜೊತೆಗೆ ಗ್ರಾಚುಯಿಟಿ, ಕಮ್ಯುಟೇಷನ್ ಹಾಗೂ ಗಳಿಕೆ ರಜೆ ನಗದೀಕರಣಗಳಿಗೆ 60ರಿಂದ 70 ಲಕ್ಷ ರೂ.ಗಳವರೆಗೆ ನೀಡಬೇಕಾಗಿರುವುದರಿಂದ ಕೊರತೆಯಾಗುವ ಹಣವನ್ನು ಫಂಡ್‌ನಿಂದ ಭರಿಸಿ, ಸರ್ಕಾರದಿಂದ ಅನುದಾನ ಬಂದ ನಂತರ ಅದಕ್ಕೆ ತುಂಬುವ ಪ್ರಕ್ರಿಯೆ ನಡೆಯುತ್ತಿದೆಯೇ ಹೊರತು, ಪಿಂಚಣಿ ಅನು ದಾನವನ್ನು ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಂಡಿಲ್ಲ ಹಾಗೂ ದುರುಪಯೋಗಪಡಿಸಿಕೊಂಡಿಲ್ಲ.
> –ಪ್ರೊ.ಹೇಮಂತ್‌ಕುಮಾರ್, ಕುಲಪತಿ, ಮೈವಿವಿ



2021–22ನೇ ಸಾಲಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ, ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಬಾಲ್ ಬ್ಯಾಡ್ಮಿಂಟನ್ ತಂಡವು ಸತತವಾಗಿ 4ನೇ ಬಾರಿಯೂ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನಗಳಿಸಿದೆ. ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ಕ್ರೀಡಾ ಕಾರ್ಯದರ್ಶಿ ಗಣೇಶ್ ನೇತೃತ್ವದಲ್ಲಿ ಎಲ್ಲಾ ಕ್ರೀಡಾ ವಿಜೇತರಿಗೆ ಅಭಿನಂದನೆ ಸಲ್ಲಿಸಲಾಯಿತು. ಬಾಲ್ ಬ್ಯಾಡ್ಮಿಂಟನ್ ತಂಡದ ಸದಸ್ಯರಾದ (ಎಡದಿಂದ) ಜಯರಾಮ್, ಸಂದೀಪ್ ಡಿ.ಎಂ, ಮುಸ್ತಾಕ್, ಬಿ. ಕುಮಾರ್, ಸತೀಶ್ ವರ್ಮಾ, ವಿಶ್ವನಾಥ್, ರವಿಕುಮಾರ್ ವಿ., ಧನು ಎಂ.ಎನ್., ವಿಶ್ವಾಸ್ ಈ ವೇಳೆ ಉಪಸ್ಥಿತರಿದ್ದರು.

ಇಂದು ಕೃತಿ ಬಿಡುಗಡೆ, ಸಂವಾದ

ಮೈಸೂರು,ಜು.25–ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ಕಾಲೇಜು, ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಕನ್ನಡ ವಿಭಾಗ, ಕನ್ನಡ ಸಂಘ ಉಪನ್ಯಾಸ ಮಾಲಿಕೆಗಳ ಅಡಿಯಲ್ಲಿ ಪಂಪನ ಕಾವ್ಯಗಳ ವಿಶ್ಲೇಷಣೆ ಮತ್ತು ನಾಗರಾಜ್ ತಲಕಾಡು ವಿರಚಿತ ಬುದ್ಧ ಭಾರತ ಕಾವ್ಯ ಕೃತಿಯ ಬಿಡುಗಡೆ ಮತ್ತು ಸಂವಾದವನ್ನು ಜು.26ರಂದು ಬೆಳಗ್ಗೆ 11 ಗಂಟೆಗೆ ಜಯಲಕ್ಷ್ಮಮ್ಮಣ್ಣಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದು, ಮುಡಾ ಕಾರ್ಯದರ್ಶಿ ಡಾ.ಎನ್.ಸಿ.ವೆಂಕಟರಾಜು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲ ಪ್ರೊ. ಶ್ರೀನಿವಾಸ್ ಅಧ್ಯಕ್ಷತೆ ವಹಿಸುವರು, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ್‌ಕುಮಾರ್ ಕೃತಿ ಬಿಡುಗಡೆ ಮಾಡುವರು. ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಕೃಷ್ಣಮೂರ್ತಿ ಅವರು ಪಂಪನ ಕಾವ್ಯಗಳ ವಿಶ್ಲೇಷಣೆ ಮಾಡುವರು. ಲೇಖಕರು ಮತ್ತು ಸಿನಿಮಾ ನಿರ್ದೇಶಕ ನಾಗರಾಜ್ ತಲಕಾಡು, ಮಹಾರಾಣಿ ಮಹಿಳಾ ಕಲಾ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ವಿಜಯಲಕ್ಷ್ಮಿ, ಸ್ನಾತಕೋತ್ತರ ಕನ್ನಡ ವಿಭಾಗದ ಸಂಯೋಜಕರಾದ ಡಾ.ಕಲಾಶ್ರೀ ಹೆಚ್.ಎಂ, ಸಹಾಯಕ ಪ್ರಾಧ್ಯಾಪಕರಾದ ನಂಜುಂಡಯ್ಯ, ಡಾ.ದೇವಮ್ಮಣ್ಣಿ ಇನ್ನಿತರರು ಉಪಸ್ಥಿತರಿರುವರು.

ಪ್ರಗತಿ ಪರಿಶೀಲನಾ ಸಭೆ ಮುಂದೂಡಿಕೆ

ಮೈಸೂರು, ಜು.25– ಆಡಳಿತಾಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ 10.30 ಗಂಟೆಗೆ ನಡೆಯಬೇಕಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮಗಳು ಸೇರಿದಂತೆ) ಪ್ರಗತಿ ಪರಿಶೀಲನೆ ಸಭೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ ಎಂದು ಜಿಪಂ ಸಿಇಓ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಮೈಸೂರು ಅರಮನೆ ಮಂಡಳಿ, ಮೈಸೂರು
Ph: 0821-2421051 Fax: 2434425
e-mail : ddmysorepalace@gmail.com
ಟೆಂ.ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–02/2022–23, ದಿನಾಂಕ: 22.07.2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ 01 ಸಿವಿಲ್ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು ರೂ.39.30/– ಲಕ್ಷಗಳ ಕೆಲಸಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಹಾಗೂ ಮೈಸೂರು ಅರಮನೆ ಮಂಡಳಿ ಅಥವಾ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. 1) ವಿದ್ಯುನ್ಮಾನ (ಇ–ಪ್ರಕ್ಯೂರ್‌ಮೆಂಟ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 05.08.2022 ಸಂಜೆ 4.00 ಗಂಟೆಯವರೆಗೆ. (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 06.08.2022 ಸಂಜೆ 5.00 ಗಂಟೆಗೆ. ಹೆಚ್ಚಿನ ವಿವರಗಳಿಗೆ **http://www.eproc.karnataka.gov.in** ಅಂತರ್‌ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು
DIPR/DD-MYS/MCA/291/2022-23

ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ಅನುಸೂಚಿಯಲ್ಲಿ ವರ್ಣಿಸಿರುವ ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ಕಸಬ ಹೋಬಳಿ, ಕೆಸರೆ ಗ್ರಾಮದ ಸರ್ವೆ ನಂ. 120/2ರ 1 ಎಕರೆ 09 ಗುಂಟೆ ಜಮೀನಿಗೆ ಸಂಬಂಧಿಸಿ ದಂತೆ ಮೈಸೂರಿನ 11ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಿವಂಗತ ಚನ್ನಪ್ಪನವರ ಮಗ ನನ್ನ ಕಕ್ಷಿದಾರರಾದ ಶ್ರೀ ಕೆ.ಸಿ. ಹೇಮೇಶ್, ಕಾಮನಕೆರೆಹುಂಡಿ ಗ್ರಾಮ, ಕಸಬ ಹೋಬಳಿ, ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ಇವರು ಅಸಲು ದಾವಾ ಸಂ. ಓ.ಎಸ್. 1362/2019 ಎಂಬ ದಾವೆಯನ್ನು ಹೂಡಿದ್ದು, ಸದರಿ ದಾವೆಯ ವಿಚಾರಣೆ ಚಾಲ್ತಿಯಲ್ಲಿರುತ್ತದೆ. ದಾವಾ ವಿಚಾರಣೆ ಚಾಲ್ತಿಯಲ್ಲಿ ಇರುವಾಗ ಯಾವುದೇ ವ್ಯಕ್ತಿಯು ಅನುಸೂಚಿ ಸ್ವತ್ತಿನ ವಿಚಾರದಲ್ಲಿ ಯಾವುದೇ ರೀತಿಯ ವ್ಯವಹಾರ ಮಾಡಿದಲ್ಲಿ ಅದರಿಂದ ಆಗುವ ಎಲ್ಲಾ ಆಗು ಹೋಗುಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ. ಹಾಗೂ ಅಂತಹ ವ್ಯವಹಾರಗಳಿಂದ ನನ್ನ ಕಕ್ಷಿದಾರರ ಹಕ್ಕುಗಳಿಗೆ ಯಾವುದೇ ಚ್ಯುತಿ ಬರುವುದಿಲ್ಲ ಮತ್ತು ಅವರು ಅದಕ್ಕೆ ಹೊಣೆಗಾರರಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ಎಚ್ಚರಿಸುತ್ತಾರೆ.

ಅನುಸೂಚಿ

ಮೈಸೂರು ತಾಲ್ಲೂಕು ಕಸಬಾ ಹೋಬಳಿ ಕೆಸರೆ ಗ್ರಾಮದ ಸರ್ವೆ ನಂಬರ್ 120/2ರ 1 ಎಕರೆ 09 ಗುಂಟೆ ವಿಸ್ತೀರ್ಣದ ಜಮೀನಿಗೆ ಚಕ್ಕು ಬಂದಿ : ಪೂರ್ವಕ್ಕೆ: ಬಸವಲಿಂಗಪ್ಪ ಮತ್ತು ಹೇಮೇಶ್ ರವರ ಜಮೀನು ; ಪಶ್ಚಿಮಕ್ಕೆ: ವಿಜಯೇಂದ್ರ ರವರ ಜಮೀನು ; ಉತ್ತರಕ್ಕೆ: ಗೋಸಪ್ಪ ನವರ ಜಮೀನು ; ದಕ್ಷಿಣಕ್ಕೆ: ರಘು ರವರ ಜಮೀನು.

Sd/- Rohit Subbayya, BAL., LL.B.,
Advocate, No. 1230/A, CH 36/A,
2nd Cross, (Behind Ramamandira),
Krishnamurthypuram, Chamaraja Mohalla,
Mysore-570 004. Mob: 9480004999
Date: 23-7-2022

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಗೌರಮ್ಮ

ಇವರು ದಿ.16.07.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ವೈಕುಂಠ ಸಮಾರಾಧನೆ ಕಾರ್ಯವನ್ನು ದಿ.26.07.2022, ಮಂಗಳವಾರ ಬೆಳಗ್ಗೆ 11.00ಕ್ಕೆ ಮೃತರ ಸ್ವಗೃಹ #290, ವಾಟರ್ ಟ್ಯಾಂಕ್ ರಸ್ತೆ, ಸುಭಾಶ್‌ನಗರ 5ನೇ ಕ್ರಾಸ್, ಕುಂಬಾರಕೊಪ್ಪಲು, ಹೆಬ್ಬಾಳು, ಮೈಸೂರು ಇಲ್ಲಿ ಏರ್ಪಡಿಸಿರುವುದ ರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರು: ನರಸಿಂಹೇಗೌಡ, ಕುಟುಂಬ ವರ್ಗದವರು ಮತ್ತು ಬಂಧು ಮಿತ್ರರು ಹಾಗೂ ಕುಂಬಾರಕೊಪ್ಪಲು ಗ್ರಾಮಸ್ಥರು.

ಭಾವಪೂರ್ಣ ಶ್ರದ್ಧಾಂಜಲಿ



ಮೈಸೂರು ನಗರ, ಸಯ್ಯಾಜಿರಾವ್ ರಸ್ತೆ, ಸರಸ್ವತಿ ರೈಸ್ ಮಿಲ್ ಮಾಲೀಕರಾದ ಲೇಟ್ ಶ್ರೀ ಎಂ.ವಿ. ಮರಿಯಪ್ಪ ಮತ್ತು ಲೇಟ್ ಶ್ರೀಮತಿ ಕಮಲಮ್ಮರವರ ಪುತ್ರಿ

ಶ್ರೀಮತಿ ಎಂ. ಪ್ರೇಮರವರು

(ಶ್ರೀ ವಿ. ರಾಮಕೃಷ್ಣರವರ ಧರ್ಮಪತ್ನಿ)

ದಿನಾಂಕ **25-07-2022**ರಂದು ದೈವಾಧೀನರಾದರು. ಇವರ **ಅಂತ್ಯಕ್ರಿಯೆಯನ್ನು** ಗೋಕುಲಂ ಚಿರಶಾಂತಿಧಾಮದಲ್ಲಿ **ದಿನಾಂಕ 26-07-2022 ಮಂಗಳವಾರ ಮಧ್ಯಾಹ್ನ 2-30 ಗಂಟೆಗೆ** ನೆರವೇರಿಸಲಾಗುವುದು.

ಇಂತಿ ದು:ಖತಪ್ತರು : ಮೃತರ ಪತಿ ಶ್ರೀ ವಿ. ರಾಮಕೃಷ್ಣ ಮಕ್ಕಳಾದ ನವೀನಚಂದ್ರ, ತಾರಾ, ಅಳಿಯ ಅನುಜ್ ಮತ್ತು ಕುಟುಂಬವರ್ಗದವರು

8ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಆರ್.ಪುಟ್ಟರಂಗಮ್ಮ ರವರು

ನಿಧನ: 26-07-2014

(ದಿ.ಶ್ರೀ ಎಂ.ಮಾದಯ್ಯ (ದಕ್ಷಿಣ ರೈಲ್ವೆ) ಅವರ ಧರ್ಮಪತ್ನಿ)

ನಿಮ್ಮ ಪ್ರೀತಿ ನಮ್ಮ ಹೃದಯದಲ್ಲಿ ಸದಾ ಹಸಿರು
ನಿಮ್ಮ ಆದರ್ಶಗಳು ಇಂದಿಗೂ ನಮಗೆ ದಾರಿ ದೀಪ

ಸದಾ ತಮ್ಮ ಸ್ಮರಣೆಯಲ್ಲಿ: ಮಕ್ಕಳು, ಸೊಸೆಯಂದಿರು, ಅಳಿಯ ಮತ್ತು ಮೊಮ್ಮಕ್ಕಳು
ನಂ.4068/4, 3ನೇ ಶಿವಯೋಗಿಸ್ವಾಮಿ ರಸ್ತೆ, ಗಾಂಧಿನಗರ, ಮೈಸೂರು

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

(ಕರ್ನಾಟಕ ಸರ್ಕಾರ)
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು. ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು

ಟೆಂಡರ್ ಪ್ರಕಟಣೆ ಸಂಖ್ಯೆ:04/2022–23 ದಿನಾಂಕ: 22.07.2022
(K/W-1& K/W-2) (Through e-procurement Only)

ಹಾಸನ ಜಿಲ್ಲೆ ವ್ಯಾಪ್ತಿಯ ವಾಟೆಹೊಳೆ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಆಲೂರು ತಾಲ್ಲೂಕಿನ ಆಯಕಟ್ಟು ರಸ್ತೆ ಕಾಮಗಾರಿಗಳ ಅಂದಾಜು ಮೊತ್ತ ರೂ.9.86 ಲಕ್ಷದಿಂದ – ರೂ.20.55 ಲಕ್ಷದವರೆಗಿನ ಓಟ್ಟು 5 ಕಾಮಗಾರಿಯನ್ನು ಕೈಗೊಳ್ಳಲು e-portal ಮೂಲಕ ಐಟಂವಾರು ಏಕಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್‌ನಲ್ಲಿ http://eproc.karnataka.gov.in ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. 1 ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 26–07–2022 ರಿಂದ 03–08–2022ರವರೆಗೆ ಸಂಜೆ 4.00 ಗಂಟೆವರೆಗೆ 2 ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ:03–08–2022 ಸಂಜೆ 4.00 ಗಂಟೆವರೆಗೆ 3 ಭರ್ತಿ ಮಾಡಿದ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ತೆರೆಯುವ ದಿನಾಂಕ:04–08–2022 ಸಂಜೆ 5.00 ಗಂಟೆಯ ನಂತರ ಭರ್ತಿ ಮಾಡಿದ ಟೆಂಡರ್ ಅನ್ನು ತೆರೆಯುವ ದಿನಾಂಕವು ಸಾರ್ವತ್ರಿಕ ರಜಾದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು. ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗೆ, ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು ರವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಾಡಾ ನಂ.1 ವಿಭಾಗ, ಕಾ.ಜ.ಯೋ. ತುಮಕೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/337/2022–23

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ಷೆಡ್ಯೂಲ್ ಜಮೀನಿನ ಹಾಲಿ ಮಾಲೀಕರಾದ ಬಸವಯ್ಯರವರ ಮಗನಾದ ಶ್ರೀ ಜಯಣ್ಣ ಎಂ.ಬಿ. ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಜಮೀನಿನ ಬಗ್ಗೆ ಯಾವುದೇ ವ್ಯಕ್ತಿ / ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಜಮೀನಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಹಲ್ಲರೆ ಗ್ರಾಮದ ಸರ್ವೆ ನಂಬರ್ 252/2 (ಇನ್ನೂರ ಐವತ್ತೆರಡು ಸಬ್ ನಂಬರ್ ಎರಡು) ರ ವಿಸ್ತೀರ್ಣ 03 ಎಕರೆ 12 ಗಂಟೆ (ಮೂರು ಎಕರೆ ಹನ್ನೆರಡು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂದಿ – ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ – ಸರ್ವೆ ನಂಬರ್ 253/1, 2, 3 ಶ್ರೀ ಒಣಕಾರನಾಯಕ ಚಿಕ್ಕಮ್ಮ ರವರ ಜಮೀನು ; ಉತ್ತರಕ್ಕೆ : ಸರ್ವೆ ನಂಬರ್ 252/1 ಶ್ರೀ ಚಿಕ್ಕಪುಟ್ಟ ಮಾದಯ್ಯ ಮತ್ತು ಇತರರ ಜಮೀನು ಹಾಗೂ ದಕ್ಷಿಣಕ್ಕೆ: ಸರ್ವೆ ನಂಬರ್ 251 ಶ್ರೀ ನಿಂಗನಾಯ್ಕ ಮತ್ತು ಇತರರ ಜಮೀನು.

ಸಹಿ/– ಡಿ.ಜಿ. ನಾಗೇಂದ್ರ ಪ್ರಸಾದ್,
ವಕೀಲರು, ಕೆಎಆರ್ 1609/2005
ಕಛೇರಿ: ನಂ. 254, 1ನೇ ಮಹಡಿ, ಹಳೆ ಕಾಂತರಾಜೇ ಅರಸ್ ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು–570 014. Mob: 9916139244
ದಿನಾಂಕ: 26–7–2022
ಸ್ಥಳ: ಮೈಸೂರು

